Swabhimani Sahakari
Pages : 44 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ
Volume - 16
Issue - 8
August- 2019

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



73ನೇ
ಸ್ವಾತಂತ್ರ್ಯ ದಿನಾಚರಣೆ



## ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ

ಸಂಯುಕ್ತ ಸಹಕಾರಿಯ
18ನೇ
ವಾರ್ಷಿಕ ಸಾಮಾನ್ಯ ಸಭೆ
ದಿನಾಂಕ; 18 ಸೆಪ್ಟೆಂಬರ್ 2019ರಂದು
ಶ್ರೀ ಬಸವೇಶ್ವರ ಸುಜ್ಞಾನ ಮಂಟಪ
ವಿಜಯನಗರ–ಬೆಂಗಳೂರು

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4742

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1274



ಆಗಸ್ಟ್ 09: ವರಮಹಾಲಕ್ಷ್ಮೀ



ಆಗಸ್ಟ್ 12: ಬಕ್ರೀದ್

ಆಗಸ್ಟ್ 23
ಕೃಷ್ಣ ಜನ್ಮಾಷ್ಟಮಿ





ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಆತ್ಮೀಯ ಸಹಕಾರಿಗಳೇ ಇತ್ತೀಚಿನ ದಿನಗಳಲ್ಲಿ ರಾಜ್ಯದ ಬಹುತೇಕ ಸೌಹಾರ್ದ ಸಹಕಾರಿಗಳು ಆರ್ಥಿಕ ಶಿಸ್ತಿನತ್ತ ಸಾಗುತ್ತಿರುವುದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಗಳಲ್ಲಿ ಹಾಗೂ ಅಧಿಕಾರಿಗಳ ಸಭೆಗಳಲ್ಲಿ ನಿರಂತರವಾಗಿ ಸೌಹಾರ್ದ ಸಹಕಾರಿಗಳ ಆರ್ಥಿಕ ಶಿಸ್ತಿನ ಬಗ್ಗೆ ಹೆಚ್ಚು ಸಮಯ ನೀಡಲಾಗುತ್ತಿದೆ.

# ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತಿಗೆ ಆದ್ಯತೆ. ಅಶಿಸ್ತು ಸಹಿಸುವುದಿಲ್ಲ, ಕಠಿಣ ಕ್ರಮವಿಡಲಾಗುವುದು.

**ಆತ್ಮೀಯ ಸಹಕಾರಿ ಬಂಧುಗಳೇ,**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಹಾಗೂ ಎಲ್ಲ ಸಹಕಾರಿಗಳಿಗೆ 73ನೇ ಸ್ವಾತಂತ್ರೋತ್ಸವದ, ವರಮಹಾಲಕ್ಷ್ಮೀ, ಬಕ್ರೀದ್ ಹಾಗೂ ಕೃಷ್ಣ ಜನ್ಮಾಷ್ಟಮಿ ಹಬ್ಬಗಳ ಶುಭಾಶಯಗಳು. ಶ್ರೀ ಮಹಾಲಕ್ಷ್ಮೀ ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಸ್ಥಿರವಾಗಿ ನಿಲ್ಲುವಂತೆ ಹಾಗೂ ಶ್ರೀ ಕೃಷ್ಣನು ನಮ್ಮ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಶಕ್ತಿಯನ್ನು ತುಂಬುವಂತಾಗಲಿ ನಮ್ಮ ನೆಲೆಗಟ್ಟನ್ನು ಭದ್ರಗೊಳಿಸಲು ಸಹಕರಿಸಲಿ ನಮ್ಮ ವ್ಯಾಪ್ತಿಯನ್ನು ಹೆಚ್ಚಿಸಲು ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ. ಈ 73ನೇ ಸ್ವಾತಂತ್ರೋತ್ಸವ ನಮ್ಮೆಲ್ಲರಿಗೆ ನಮ್ಮ ದೇಶದ ಏಕತೆಗೆ ಹಾಗೂ ಅಭಿವೃದ್ಧಿಗೆ ದೇಶದ ನವನಿರ್ಮಾಣ ಕಾರ್ಯದಲ್ಲಿ ಅರ್ಪಿಸಿಕೊಳ್ಳೋಣ ಎಂದು ತಿಳಿಸಬಯಸುತ್ತೇನೆ.

ಆತ್ಮೀಯ ಸಹಕಾರಿಗಳೇ ಇತ್ತೀಚಿನ ದಿನಗಳಲ್ಲಿ ರಾಜ್ಯದ ಬಹುತೇಕ ಸೌಹಾರ್ದ ಸಹಕಾರಿಗಳು ಆರ್ಥಿಕ ಶಿಸ್ತಿನತ್ತ ಸಾಗುತ್ತಿರುವುದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಗಳಲ್ಲಿ ಹಾಗೂ ಅಧಿಕಾರಿಗಳ ಸಭೆಗಳಲ್ಲಿ ನಿರಂತರವಾಗಿ ಸೌಹಾರ್ದ ಸಹಕಾರಿಗಳ ಆರ್ಥಿಕ ಶಿಸ್ತಿನ ಬಗ್ಗೆ ಹೆಚ್ಚು ಸಮಯ ನೀಡಲಾಗುತ್ತಿದೆ. ಆರ್ಥಿಕ ಶಿಸ್ತು ಬೆಳೆಸುವ ನಿಟ್ಟಿನಲ್ಲಿ ಹಾಗೂ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಗುತ್ತಿದೆ. ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಅಶಿಸ್ತು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಅದಕ್ಕೆ ಕಠಿಣ ಕ್ರಮವನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ ಎಂಬುದನ್ನು ಎಲ್ಲ ಸೌಹಾರ್ದ ಸಹಕಾರಿಗಳು ಗಮನಿಸುವುದು ಅಗತ್ಯ.

ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಗಳ ಸಭೆಗಳಲ್ಲಿ ಪ್ರತಿ ಜಿಲ್ಲೆಯ ಸಮಸ್ಯಾತ್ಮಕ ಸಹಕಾರಿಗಳ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಹಕಾರಿ ಇಲಾಖೆಯ, ಜಿಲ್ಲೆಯ ಹಿರಿಯ ಸಹಕಾರಿಗಳ ಹಾಗೂ ಸಾರ್ವಜನಿಕರೊಡನೆ ಉತ್ತಮ ಬಾಂಧವ್ಯವನ್ನು ಹೊಂದಿ ಸಮಸ್ಯೆಗಳನ್ನು ಸಣ್ಣದರಲ್ಲಿಯೇ ಬಗೆಹರಿಸಲು ಸೂಕ್ತ ಕ್ರಮವಿಡುವಂತೆ ಸೂಚಿಸಲಾಗಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಗೆ ಸಾಲ ನೀಡುವಾಗ ಕ್ರಮಬದ್ದ ದಾಖಲಾತಿಗಳನ್ನು ನಿರ್ವಹಿಸುವುದು, ಬಾಕಿಯಾದ ಸಾಲ ಹಾಗೂ ಬಡ್ಡಿಯನ್ನು ಸೇರಿಸಿ ಹೊಸ ಸಾಲ ಮಂಜೂರು ಮಾಡಿ ಹಳೆ ಸಾಲ ಮರುಪಾವತಿಯಾಗದಂತೆ ಮಾಡದಂತೆ ಕ್ರಮವಿಡುವುದು. ಠೇವಣಿಗಳಿಗೆ ಕ್ರಮಬದ್ದ ಬಡ್ಡಿದರ ನಿಗದಿಮಾಡುವುದು, ಠೇವಣಿಗಳಿಗೆ ಕಮೀಷನ್ ನೀಡದಿರುವುದು, ಸಹಕಾರಿಗಳ ಹಣಕಾಸಿನ ಎಲ್ಲ ವ್ಯವಹಾರಗಳಲ್ಲಿ ಪಾರದರ್ಶಕತೆಯನ್ನು ಕಾಪಾಡುವುದು, ಹಣಕಾಸಿನ ಶಿಸ್ತು ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕೈಜೋಡಿಸುವುದು ಅಗತ್ಯ. ಇದು ನಮ್ಮ ಸೌಹಾರ್ದ ಸಹಕಾರಿ ಚಳುವಳಿಯ ಗುಣಮಟ್ಟದ ಬೆಳವಣಿಗೆಗೆ ಪೂರಕವಾಗುತ್ತದೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

**ಒಳಪುಟಗಳಲ್ಲಿ. . .**

ಜ್ಞಾನ ಜ್ಯೋತಿ ................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ... ............................................... 5–25
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ............................................... 26–40
ಲೇಖನ...................................... 41–42
ಆರ್‌ಬಿ.ಐ. ನ್ಯೂಸ್...................... 43–44

# ಸಂಪಾದಕೀಯ

## ವಾರ್ಷಿಕ ಸಾಮಾನ್ಯ ಸಭೆಗಳು ಅರ್ಥಪೂರ್ಣವಾಗಿರಲಿ. ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಯಲಿ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸೆಪ್ಟಂಬರ್ 1ರ ಒಳಗಾಗಿ ಲೆಕ್ಕ ಪರಿಶೋಧನಾ ವರದಿ ಸಲ್ಲಿಸುವುದು ಕಡ್ಡಾಯ ಹಾಗೂ ಸೆಪ್ಟೆಂಬರ್ 25ರ ಒಳಗಾಗಿ ವಾರ್ಷಿಕ ಸಾಮಾನ್ಯ ಸಭೆಗಳು ಜರುಗಬೇಕಿದೆ. ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರು ಈ ವಾರ್ಷಿಕ ಸಾಮಾನ್ಯ ಸಭೆಗಳನ್ನು ಅರ್ಥಪೂರ್ಣವಾಗಿ ಜರುಗಿಸುವಲ್ಲಿ ಹಾಗೂ ಕಾರ್ಯಯೋಜನೆಗಳನ್ನು ರೂಪಿಸುವಲ್ಲಿ ಕ್ರಮವಿಡಬೇಕಾದುದು ಅವರುಗಳ ಆದ್ಯ ಕರ್ತವ್ಯ.

ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು ನೆಪ ಮಾತ್ರಕ್ಕೆ ಸಭೆಗಳಾಗಿರದೇ ಸರ್ವ ಸದಸ್ಯರ ಸಂಪೂರ್ಣ ಕ್ರಿಯಾಶೀಲ ಭಾಗವಹಿಸುವಿಕೆ ಬಗ್ಗೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅರ್ಹತೆಯುಳ್ಳ ಸದಸ್ಯರೆಲ್ಲರೂ ಸಕ್ರೀಯವಾಗಿ ಭಾಗವಹಿಸುವಂತೆ ಸೂಕ್ತ ಕ್ರಮವಿಡುವುದು, ವಿಷಯಗಳ ಚರ್ಚೆಗಳಲ್ಲಿ ಭಾಗವಹಿಸುವುದು ಮತ್ತು ಸೌಹಾರ್ದ ಸಹಕಾರಿಯ ಅಭಿವೃದ್ಧಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುವಂತೆ ಅವರಿಗೆ ತಿಳುವಳಿಕೆ ನೀಡುವುದು ಅವಶ್ಯಕ. "ಅರಿತ ಸದಸ್ಯ ನುರಿತ ಕಾರ್ಯಕರ್ತ ಸಹಕಾರಿ ಸಂಸ್ಥೆಯ ಅಭಿವೃದ್ಧಿಯ ಮೂಲ" ಎಂದು ಹಿರಿಯ ಸಹಕಾರಿಯೊಬ್ಬರು ಹೇಳಿರುವಂತೆ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವುದು ಸದಸ್ಯರು ನೀಡಿರುವ ಅಧಿಕಾರವನ್ನು ಆಡಳಿತ ಮಂಡಳಿಯವರು ಕ್ರಮಬದ್ಧವಾಗಿ ಉಪಯೋಗಿಸುತ್ತಿದ್ದಾರೆಯೇ, ಸಹಕಾರಿಯ ಕೆಲಸ ಕಾರ್ಯಗಳು ನಿಗದಿತ ಅವಧಿಯಲ್ಲಿ ನಿಗದಿತ ಪ್ರಮಾಣದಲ್ಲಿ ಕ್ರಮಬದ್ಧವಾಗಿ ನಡೆಯುತ್ತಿವೆಯೇ ಎಂಬುದನ್ನು ಗಮನಿಸುವ ಮತ್ತು ನಿರ್ದೇಶನ ನೀಡುವುದರ ಜೊತೆಗೆ ಅವರು ಸಭೆಗೆ ನೀಡುವ ಆಡಳಿತ ವರದಿ ಸಹಕಾರಿಯ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧಕರ ವರದಿ ಪರಾಮರ್ಷೆ ಮಾಡುವುದು ತಮ್ಮ ಹಕ್ಕು ಮತ್ತು ಅಭಿವೃದ್ಧಿಯತ್ತ ಸಹಕಾರ ನೀಡುವುದು ತಮ್ಮ ಕರ್ತವ್ಯ ಎಂದು ತಿಳಿಯುವಂತಾಗಬೇಕು.

ಒಂದು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯೆಂದರೆ ಸದಸ್ಯರಿಗೆಲ್ಲ ಹಬ್ಬವಿದ್ದಂತೆ ಎಂಬ ವಾತಾವರಣವನ್ನು ಹಲವಾರು ಸಹಕಾರಿ ಸಂಸ್ಥೆಗಳಲ್ಲಿ ನೋಡಬಹುದಾಗಿದೆ. ವಾರ್ಷಿಕ ಸಾಮಾನ್ಯ ಸಭೆಯ ಅಧಿಕೃತ ಕಾರ್ಯಕಲಾಪಗಳು ಮುಗಿದ ನಂತರ ಸಹಕಾರಿಯ ಹಿರಿಯ ಸದಸ್ಯರನ್ನು ಗೌರವಿಸುವುದು, ಶಿಕ್ಷಣದಲ್ಲಿ ಸದಸ್ಯರ ಮಕ್ಕಳು ಉತ್ತಮ ಅಂಕಗಳನ್ನು ಪಡೆದಿರುವವರನ್ನು ಗುರುತಿಸಿ ಪ್ರೋತ್ಸಾಹಿಸುವುದು, ಸದಸ್ಯರಲ್ಲಿ ವಿಶೇಷ ಪ್ರತಿಭೆಗಳನ್ನು ಗುರುತಿಸುವುದು, ಸದಸ್ಯರ ಹಾಗೂ ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಯನ್ನು ತರತಕ್ಕ ಹಲವಾರು ಕಾರ್ಯಕ್ರಮಗಳನ್ನು ಸಹಕಾರಿಯಲ್ಲಿ ಹಮ್ಮಿಕೊಂಡು ಸಹಕಾರಿಯ ಅಸ್ತಿತ್ವವನ್ನು ಸಾರ್ವಜನಿಕರಿಗೆ, ಸಹಕಾರಿಗಳಿಗೆ ಹಾಗೂ ಸರಕಾರದ ಗಮನ ಸೆಳೆಯುವಂತಾಗಬೇಕು. ಹೀಗೆ ಮಾಡುವುದರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಭಾವನೆಗಳು ಬೆಳೆಯಲು ಸಾಧ್ಯ ಹಾಗೂ ಸಹಕಾರಿ ಕ್ಷೇತ್ರ ಗುಣಾತ್ಮಕವಾಗಿ ಬೆಳೆಯಲು ಸಾಧ್ಯ.

# “ಧರ್ಮನಿಷ್ಠ ಆಡಳಿತಗಾರರಿಂದ ಮಾತ್ರ ಸಂಪತ್ಸಮೃದ್ಧಿಗಳ ಅಕ್ಷಯತೆ”



## ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಪುರಾಣ ಪ್ರತಿಷ್ಠಿತ ರಾಜರುಗಳಾದ ದಶರಥ, ಜನಕ, ಪರೀಕ್ಷಿತ, ರಾಮ, ಭರತ ಹಾಗೂ ಧರ್ಮರಾಯರುಗಳ ಆಳ್ವಿಕೆಯ ಗುಣಮಟ್ಟ ನಮ್ಮೆಲ್ಲರ ಮನದಲ್ಲಿ ಹಚ್ಚಹಸುರಾಗಿದೆ. ಶ್ರೀ ಮದ್ಭಾಗವತ ಗ್ರಂಥದಲ್ಲಿ, “As are the rulers so are the citizens” “ಯಥಾ ರಾಜಾ ತತಾ ಪ್ರಜಾ” ಎಂಬಂಶವನ್ನು ಸಾರಾಂಶೀಕರಿಸುತ್ತಾ, ಸರ್ಕಾರಗಳ ಹಾಗೂ ಆಳುವ ದೊರೆಗಳ ಅಂದರೆ ಪ್ರಜಾ ಪ್ರತಿನಿಧಿಗಳ ಗುಣಮಟ್ಟದ ವಿವರಣೆಯನ್ನು ಕೆಳಗಿನಂತೆ ನೀಡಲಾಗಿದೆ.

ರಾಜಧರ್ಮವು ಒಂದು ಮಹತ್ವದ ವಿಜ್ಞಾನ. ಅದು ಆಧುನಿಕ ಕಾಲದ ರಾಜಕೀಯ ಮೇಲಾಟಗಳ ಚಮತ್ಕಾರವಲ್ಲ. ಹಿಂದಿನ ರಾಜರುಗಳು ಕೇವಲ ತೆರಿಗೆಗಳನ್ನು ಸಂಗ್ರಹಿಸುವವರು ಆಗಿರುತ್ತಿರಲ್ಲಿಲ್ಲ. ರಾಜರಾಗಬೇಕಾಗಿರುವವರಿಗೆ ಧರ್ಮಾರ್ಥ ಕಾಮ ಮೋಕ್ಷಗಳ ನಡತೆಗಳ ತರಬೇತಿ ನೀಡಲಾಗುತ್ತಿತ್ತು. ಪ್ರಜೆಗಳ ಏಳಿಗೆಗಾಗಿ ಸಮೃದ್ಧ ಮಳೆಬೆಳೆಗಳು ಬರುವುದರ ಸಂಬಂಧ ಯಜ್ಞಗಳನ್ನು ಮಾಡಲು ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಪ್ರಜೆಗಳನ್ನು ಮೋಕ್ಷದ ಹಾದಿಯಲ್ಲಿ ಕರೆಯೊಯ್ಯುವುದೇ ರಾಜನ ಮಹತ್ವದ ಕರ್ತವ್ಯವಾಗಿರುತ್ತಿತ್ತು. ದೊರೆ ಸಾತ್ವಿಕ, ಧರ್ಮಶೀಲ, ದೀನರಕ್ಷಕ ಉದಾರಿಯಾಗಿದ್ದರೆ ಪ್ರಜೆಗಳು ಸಹಜವಾಗಿಯೇ ಅವನನ್ನು ಅನುಸರಿಸುತ್ತಾರೆ ಹಾಗೂ ಅಪರಾಧಿಗಳನ್ನು ನ್ಯಾಯನಿಷ್ಟವಾಗಿ ಗುರುತಿಸಿ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ನೀಡುತ್ತಿದ್ದುದ್ದರಿಂದ ಅಪರಾಧವನ್ನೆಸಗಲು ಇನ್ನಿತರರು ಧೈರ್ಯ ಮಾಡುತ್ತಿರಲ್ಲಿಲ್ಲ ಎಂಬುದು ಧರ್ಮನಿಷ್ಠ ಚಿಂತನೆಯಾಗಿತ್ತು.

ಆಧುನಿಕ ಕಾಲದ ಜನಪ್ರತಿನಿಧಿಗಳು ತಮ್ಮ ಹಣಬಲ, ತೋಳ್ಬಲಗಳಿಂದ ಮತಗಳ ಭೇಟೆ ಮಾಡಿ ಅಧಿಕಾರದ ಸ್ಥಾನ ಹಿಡಿಯುತ್ತಾರೆ. ರಾಜಧರ್ಮದ ಅರಿವಿಲ್ಲದ ಅಂಥಹವರು ನ್ಯಾಯನಿಷ್ಠ ಆಡಳಿತ ನೀಡದೇ ಪ್ರಜಾಕ್ಷೇಮ ಕಲ್ಯಾಣ ಎಂಬಂಶಗಳನ್ನು ದೂರಕ್ಕೆ ಸರಿಸುತ್ತಾರೆ. ತತ್ಪರಿಣಾಮವಾಗಿ ಸ್ವಾರ್ಥಪರ ಆಲೋಚನೆಗಳು ಸ್ವಜನ ಪಕ್ಷಪಾತ, ತಲೆಮಾರಿನವರೆಗೆ ಹಣ ಕೂಡಿಡಬೇಕೆಂಬ ಸ್ವಾರ್ಥ ಲಾಲಸೆಗಳಲ್ಲಿ ತೊಡಗಿ, ತಮ್ಮ ತಮ್ಮ ಅವನತಿಗೆ ಕಾರಣರಾಗುತ್ತಾರೆಂಬ ಮುಂಗಾಣ್ಕೆ, ಭವಿತವ್ಯತೆಗಳನ್ನು ಅಂದೇ ಕಂಡಿದ್ದ ಆಧ್ಯಾತ್ಮಕವಿ ಡಿ.ವಿ.ಜಿ.ಯವರು ತನ್ನ ಪದ್ಯವೊಂದರಲ್ಲಿ ಪ್ರಸಕ್ತ ಸರ್ಕಾರಗಳ ವ್ಯವಸ್ಥೆಯನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ್ದಾರೆ.

“ಸರಕಾರ ಹರಿಗೋಲು ತೆರೆಸುಳಿಗಳಿತ್ತಿತ್ತ ।
ಸುರೆಕುಡಿದವರು ಕೆಲರು ಹುಟ್ಟು ಹಾಕುವರು ॥
ಬಿರುಗಾಳಿ ಬೀಸುವುದು ಜನವೆದ್ದು ಕುಣಿಯುವುದು ।
ಉರುಳದಿಹುದಚ್ಚರಿಯೋ” ॥ಮಂಕುತಿಮ್ಮ॥

ಸರಕಾರವನ್ನು ಒಂದು ಹರಿಗೋಲು ಅಂದರೆ ದೋಣಿಗೆ ಹೋಲಿಸಿ, ಅದನ್ನು ಮುಂದಕ್ಕೆ ಒಯ್ಯಬೇಕಾದರೆ ಸರಿಯಾಗಿ ಕ್ರಮಬದ್ಧವಾಗಿ ಹುಟ್ಟುಹಾಕಬೇಕಾಗಿರುತ್ತದೆ. ಆಗ ಮಾತ್ರ ಸುರಕ್ಷಿತ ಪಯಣ ಹಾಗೂ ನೆಲೆ ಸೇರುವಿಕೆ ಖಚಿತ. ಆದರೆ ಡಿ.ವಿ.ಜಿ.ಯವರ ಪದ್ಯದಲ್ಲಿ ಹುಟ್ಟು ಹಾಕುವವರು ಸುರೆ, ಮದ್ಯಪಾನ ಮಾಡಿದವರಾಗಿದ್ದು, ತಮ್ಮ ಸ್ವಾಸ್ಥ್ಯಗಳನ್ನು ಕಳೆದುಕೊಂಡವರಾಗಿದ್ದಾರೆ. ಇದರ ಜೊತೆಗೆ ಬಿರುಗಾಳಿ ಬೇರೆ ಬೀಸುತ್ತಿದೆ. ತತ್ಪರಿಣಾಮವಾಗಿ ಬೃಹತ್‌ಗಾತ್ರದ ಅಲೆಗಳು ಏರಿಬರುತ್ತಿರುವ ಕಾರಣ ದೋಣಿಯಲ್ಲಿರುವ ಜನರು ಭಯಬೀತರಾಗಿ ಎದ್ದು ರಕ್ಷಣೆಗಾಗಿ ಅರಚುತ್ತಾ, ಇಂತಹ ದುಃಸ್ಥಿತಿ ಬಹಳ ಕಾಲ ಸಂದರೂ ದೋಣಿ ಮಾತ್ರ ಮುಳುಗದೇ ತೇಲುತ್ತಲೇ ಇರುವುದು ಅಚ್ಚರಿಯ ಅಂಶವೆಂದು ಪ್ರಸ್ತಾಪಿಸಿದ್ದಾರೆ. ಈ ಅತಂತ್ರ ವ್ಯವಸ್ಥೆಯು ಕರ್ನಾಟಕಕ್ಕೆ ಮಾತ್ರ ಸೀಮೀತವಾಗಿರದೇ ದೇಶದ ಇತರ ರಾಜ್ಯಗಳಲ್ಲಿಯೂ, ಇತರ ದೇಶಗಳಲ್ಲಿಯೂ ವ್ಯಾಪಿಸಿರುವ ಜಾಡ್ಯವಾಗಿದೆ. ನೂರಕ್ಕೆ ನೂರರಷ್ಟು ಸತ್ಯನಿಷ್ಠ ಆಳ್ವಿಕೆಯನ್ನು ಯಾರೂ ನಿರೀಕ್ಷಿಸುತ್ತಿಲ್ಲ, ನಡೆಸಲು ಕಷ್ಟಸಾಧ್ಯ. ಆದರೆ, ಕೆಡುತ್ತಿರುವ ಬದುಕಿನ ಗುಣಮಟ್ಟ, ಧರ್ಮಾನುಷ್ಠಾನ, ನ್ಯಾಯನಿಷ್ಠುರತೆಗಳು, ಸ್ವಜನ ಪಕ್ಷಪಾತಗಳು ನಿರೀಕ್ಷೆಗೂ ಮೀರಿದ ಮಟ್ಟಕ್ಕೆ ಹೆಚ್ಚುತ್ತವೆಂಬುದನ್ನು ಗಮನಿಸಿ ಈ ಸೂಚನಾ ಪದ್ಯವನ್ನು ಅಂದೇ ಬರೆದಿರುತ್ತಾರೆ.

ಇಂದಿನ ನಾವುಗಳು ಹದಗೆಡುತ್ತಿರುವ ಸ್ಥಿತಿಯನ್ನು ಅವಲೋಕಿಸಿ ತಮ್ಮ ತಮ್ಮ ಹಂತಗಳಲ್ಲಿ ಎಷ್ಟೆಷ್ಟು ಶುದ್ಧ ತತ್ವಗಳನ್ನು ಜಾರಿಗೆ ತರಬಹುದೋ ಅಂಥವುಗಳನ್ನು ತರುವುದರ ಮೂಲಕ ಮುಂದಿನ ಪೀಳಿಗೆಗೆ ಶುದ್ಧ ಸಮಾಜ ನೀಡಲು ಪ್ರಯತ್ನಪಡಬೇಕಾದ್ದುದು ನಮ್ಮ ಕರ್ತವ್ಯವಾಗಿದೆ. ನಾವೆಲ್ಲಾ ಸೇವಾಕ್ಷೇತ್ರ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರತರಾದ ಸಂಘಗಳ ಸದಸ್ಯರು, ನಿರ್ದೇಶಕರು, ಅಧ್ಯಕ್ಷರುಗಳು ಹಾಗೂ ಸಿಬ್ಬಂದಿವರ್ಗದವರುಗಳು ಜನಸೇವಾ ಕ್ಷೇತ್ರದಲ್ಲಿರುವವಾದ್ದರಿಂದ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ, ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳದೆ ಸುಸಮೃದ್ಧ ನ್ಯಾಯಯುತ ಆಡಳಿತವನ್ನು ನೀಡಿ ಅಂತಿಮ ಫಲಾನುಭವಿಗಳಾದ ಗ್ರಾಹಕರುಗಳಿಗೆ ಗುಣಮಟ್ಟದ ಸೇವೆಯನ್ನು ನೀಡಲನುವಾಗೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# ಆದಾಯ ತೆರಿಗೆ : ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಮಾಧಾನಕರ ಸಂತೋಷದ ಸುದ್ದಿ

## ರಾಜ್ಯದ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಸಹಕಾರ ಸಂಘಗಳೆಂದು ಪರಿಗಣಿಸಿ ಆದಾಯ ತೆರಿಗೆ ವ್ಯಾಪ್ತಿಯಿಂದ ವಿನಾಯಿತಿ ನೀಡುವಂತೆ ಮಾನ್ವಿ ಸಿದ್ಧಾರ್ಥ ಸೌಹಾರ್ದ ಸಹಕಾರಿಯ ಹಾಗೂ ಮಸ್ಕಿಯ ಹಾಲಾಪುರ ಸೌಹಾರ್ದ ಸಹಕಾರಿಯ ಪುನರ್ಮನವಿಗೆ ಆದಾಯ ತೆರಿಗೆ ಅಪಲೇಟ್ ಟ್ರಿಬ್ಯೂನಲ್ ಬೆಂಗಳೂರು ಇವರ ಆದೇಶ.

ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿನ ಸಿದ್ಧಾರ್ಥ ಸೌಹಾರ್ದ ಸಹಕಾರಿಗೆ ಆದಾಯ ತೆರಿಗೆ ಇಲಾಖೆಯವರು 2016-17ನೇ ಸಾಲಿನ ತೆರಿಗೆ ಪಾವತಿಸುವಂತೆ ದಿನಾಂಕ 29.03.2019ರಂದು ಆದೇಶ ನೀಡಿದ್ದರು. ಸದರಿ ಸಿದ್ಧಾರ್ಥ ಪತ್ತಿನ ಸೌಹಾರ್ದ ಸಹಕಾರಿಯವರು ಈ ಆದೇಶದ ವಿರುದ್ಧ ಆದಾಯ ತೆರಿಗೆ ಅಪಲೇಟ್ ಟ್ರಿಬನಲ್ ಎಸ್.ಎಂ.ಸಿ.ಸಿ ಬೆಂಚ್ ಬೆಂಗಳೂರು ಇವರಲ್ಲಿ ಅಪೀಲು ದಾಖಲಿಸಿದ್ದರು. ಅಪೀಲು ಆಲಿಸಿದ ಅಪಲೇಟ್ ಟ್ರಿಬನಲ್‌ರವರು ದಿನಾಂಕ 26.07.2019ರಂದು ಆದೇಶ ನೀಡಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಡಿ ಕಾರ್ಯನಿರ್ವಹಿಸುವ ಸಹಕಾರಿಗಳನ್ನು ಸಹಕಾರ ಸಂಘಗಳೆಂದೆ ಪರಿಗಣಿಸಬೇಕು. ಹೀಗಾಗಿ ಆದಾಯ ತೆರಿಗೆ ಕಾಯ್ದೆ 80ಪಿ(2)(a)(i) ರಿತ್ಯ ಆದಾಯ ತೆರಿಗೆ ಪಾವತಿಗೆ ವಿನಾಯಿತಿಗೆ ಅರ್ಹರಾಗಿದ್ದಾರೆ ಎಂದು ಆದೇಶ ನೀಡಿದ್ದಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ, ಅಪಲೇಟ್ ಟ್ರಿಬನಲ್‌ನವರು ಆದಾಯ ತೆರಿಗೆ ಕಾಯ್ದೆ ಕಲಂ2(19)ನಲ್ಲಿ ಸಹಕಾರ ಸಂಘಗಳ ವ್ಯಾಖ್ಯಾನವನ್ನು ತಿಳಿಸುತ್ತಾ **"A Cooperative Society" means, A Cooperative Society registered under the Cooperative Society Act 1912(2) of 1912 or under any other Law for the time being in force in any state for the registration of the Cooperative Societies** ಎಂಬುದಾಗಿ ಉಲ್ಲೇಖಿಸಿದ್ದಾರೆ. ಮುಂದುವರೆದು, ಸಹಕಾರ ಚಳುವಳಿ ಪ್ರಾರಂಭವಾಗಿರುವುದೇ ಜನರಲ್ಲಿ ಸೌಹಾರ್ದ ಬಾಳ್ವೆಯನ್ನು ಬೆಳೆಸುವುದಕ್ಕಾಗಿ. 1912ರ ಸಹಕಾರ ಕಾಯ್ದೆಯಡಿಯಲ್ಲಿ ಸಹಕಾರ ಸಂಸ್ಥೆಗಳನ್ನು ಹುಟ್ಟು ಹಾಕುವುದು ಆಡಳಿತ ವ್ಯವಸ್ಥೆಯನ್ನು ಮಾಡುವುದು ಮತ್ತು ಸಮಾಪನೆಗೊಳಿಸುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸಲಾಗುತ್ತದೆ. 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕೇಂದ್ರಗಳ ಬಹುರಾಜ್ಯಗಳ ಸಹಕಾರ ಕಾಯ್ದೆಗಳೆಲ್ಲವೂ ಈ ಆಶಯದ ಅಡಿಯಲ್ಲೆಯೇ ಕಾರ್ಯನಿರ್ವಹಿಸುತ್ತವೆ.

ಇದೇ ಆಶಯದ ಅಡಿಯಲ್ಲಿ 1987ರಲ್ಲಿ ಅರ್ಧನಾರೀಶ್ವರನ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಡಾ. ಬ್ರಹ್ಮಪ್ರಕಾಶ ಚೌದರಿ ಸಮಿತಿಯು ಸಿದ್ದಪಡಿಸಿದ ಮಾದರಿ ಸಹಕಾರ ಕಾಯ್ದೆಯನ್ನು ಕೇಂದ್ರದವರು ದೇಶದ ಎಲ್ಲಾ ರಾಜ್ಯಗಳಿಗೆ ಕಳುಹಿಸಿದ ನಂತರ ಕರ್ನಾಟಕ ವಿಧಾನ ಸಭೆಯಲ್ಲಿ 1997ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಎಂಬ ಹೆಸರಿನಲ್ಲಿ ಅಂಗೀಕರಿಸಿ ರಾಷ್ಟ್ರಪತಿಯವರಿಂದ ಅಂಕಿತ ಪಡೆದು ಜನವರಿ 1, 2001ರಿಂದ ಜಾರಿಗೆ ಕೊಡಲಾಗಿದೆ. ಈ ಕಾಯ್ದೆಯ ಆಶಯವೂ ಕೂಡ ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ಆಡಳಿತ ನಿರ್ವಹಿಸುವ ಮತ್ತು ನಿಯಂತ್ರಿಸುವ, ಸ್ವ ಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ ಜವಾಬ್ದಾರಿಯುತ ಸ್ವಾವಲಂಭಿ ಆರ್ಥಿಕ ಉದ್ದಿಮೆಗಳಾಗಿ ಸಹಕಾರಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಈ ಸಂಸ್ಥೆಗಳನ್ನು ಸಹಕಾರಿ ಸಂಸ್ಥೆಗಳೆಂದು ಪರಿಗಣಿಸಲಾಗುತ್ತದೆ ಎಂದು ತಮ್ಮ ತೀರ್ಪು ಆದೇಶದಲ್ಲಿ ತಿಳಿಸಿದ್ದಾರೆ.

ಈಗಾಗಲೇ ಸಂಯುಕ್ತ ಸಹಕಾರಿಯು ನೇರವಾಗಿ ರಾಜ್ಯದ ಉಚ್ಚ ನ್ಯಾಯಾಲಯ ಬೆಂಗಳೂರು ಹಾಗೂ ಧಾರವಾಡಗಳಲ್ಲಿ ಮತ್ತು ಕೆಲವು ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳೆಂದು ಪರಿಗಣಿಸುವಂತೆ, ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿ ತಮ್ಮ ಪ್ರಕರಣಗಳನ್ನು ದಾಖಲಿಸಿರುವುದರಿಂದ ಈ ಅಪಲೇಟ್ ಟ್ರಿಬನಲ್ ಆದೇಶವು ಇದಕ್ಕೆ ಸಹಕಾರಿಯಾಗುತ್ತದೆ.

**ವಿಶೇಷ ಗಮನಕ್ಕೆ : ಈ ಆದೇಶದ ಪೂರ್ಣ ವಿವರವನ್ನು ಕನ್ನಡ (ಅನುವಾದಿಸಲಾಗಿದೆ) ಮತ್ತು ಇಂಗ್ಲೀಷ ಭಾಷೆಗಳಲ್ಲಿ ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.**

## ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ ದಿನಾಂಕ 18ನೇ ಸೆಪ್ಟಂಬರ್ 2019

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆಯು 18ನೇ ಸೆಪ್ಟಂಬರ್ 2019ರ ಬುಧವಾರದಂದು ಬೆಳಿಗ್ಗೆ 10.30ಕ್ಕೆ ಶ್ರೀ ಬಸವೇಶ್ವರ ಸುಜ್ಞಾನ ಮಂಟಪ, ನಂ 2/ಎ, 17ನೇ ಮುಖ್ಯ ರಸ್ತೆ, ಎಂಆರ್‌ಸಿಆರ್ ಲೇಔಟ್, ಬಿಎಸ್‌ಎನ್‌ಎಲ್ ಟೆಲಿಫೋನ್ ಎಕ್ಸ್ಚೇಂಜ್ ಹಾಗೂ ಹೊಸಹಳ್ಳಿ ಮೆಟ್ರೊ ಸ್ಟೇಷನ್ ಹತ್ತಿರ, ವಿಜಯನಗರ, ಬೆಂಗಳೂರು – 560 040 ಇಲ್ಲಿ ಏರ್ಪಡಿಸಲಾಗಿದೆ. ಸಂಯುಕ್ತ ಸಹಕಾರಿಯ ಅರ್ಹ ಸದಸ್ಯರು ಈ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಕೋರಿದೆ.

## ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆಯೋಜಿಸಿದ್ದ ಅಂತರರಾಷ್ಟ್ರೀಯ ಸಹಕಾರ ದಿನಾಚಾರಣೆ ಕಾರ್ಯಕ್ರಮ




**ಬೆಂಗಳೂರು :** ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳಲ್ಲಿ ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡಿದ್ದಾರೆ. ಅದರಂತೆ ವಿಶ್ವದಾದ್ಯಂತ ಈ ದಿನದಂದು ಸಹಕಾರಿ ದಿನಾಚರಣೆಯನ್ನು ಆಚರಿಸಲಾಗುತ್ತದೆ. ದಿನಾಂಕ 6ನೇ ಜುಲೈ 2019ರಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ರವರು ಒಂದು ದಿನದ ಸೆಮಿನಾರ್‌ನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ವಿಶ್ವನಾಥ ಚ.ಹಿರೇಮಠ, ಶ್ರೀ ತಿಮ್ಮಯ್ಯ ಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಶ್ರೀ ರಘುನಂದನ್ ಇವರು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು



**ರಾಯಚೂರು :** ರಾಯಚೂರು ಜಿಲ್ಲೆಯ ಸಿಂಧನೂರು, ಮಸ್ಕಿ ಮತ್ತು ಲಿಂಗಸೂಗೂರು ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಮತ್ತು ನಿರ್ದೇಶಕರಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 12.07.2019 ರಂದು ವಿನಯ ರೆಸಿಡೆನ್ಸಿ ಸಿಂಧನೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಸಂಸದರಾದ ಹಾಗೂ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ. ವಿರುಪಾಕ್ಷಪ್ಪ ಉದ್ಘಾಟಿಸಿ, ಈಗಾಗಲೇ ಆದಾಯ ತೆರಿಗೆ ಇಲಾಖೆಯು ಸೌಹಾರ್ದ ಸಹಕಾರಿಗಳಿಗೆ ನೋಟಿಸ್‌ಗಳನ್ನು ನೀಡುತ್ತಿದೆ. ಜೊತೆಗೆ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಸುಗ್ರೀವಾಜ್ಞೆ–2019 ಹೊರಡಿಸಲಾಗಿದ್ದು, ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳು ಜಾಗೃತರಾಗಿ ಕಾರ್ಯನಿರ್ವಹಿಸಬೇಕು ಮತ್ತು ಠೇವಣಿಗಳನ್ನು ಅವಧಿಯೊಳಗೆ ಮರುಪಾವತಿಸುವ ಜವಾಬ್ದಾರಿಯು ಸಹಕಾರಿ ಮೇಲೆ ಇರುತ್ತದೆ. ಹೀಗಾಗಿ ಎಲ್ಲ ಸಹಕಾರಿಗಳು ಜಾಗೃತರಾಗಿ ವ್ಯವಹಾರವನ್ನು ಮಾಡಲು ತಿಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ವಹಿಸಿ, ಸಂಯುಕ್ತ ಸಹಕಾರಿಯು ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಅನುಕೂಲವಾಗಲೆಂದು ರಾಯಚೂರು, ಮಾನವಿ, ದೇವದುರ್ಗಾ ಮತ್ತು ಸಿರವಾರ ತಾಲ್ಲೂಕಗಳಿಗಾಗಿ 1 ತರಬೇತಿಯನ್ನು ಮಾನವಿ ಮತ್ತು ಸಿಂಧನೂರು, ಮಸ್ಕಿ ಮತ್ತು ಲಿಂಗಸೂಗೂರು ತಾಲ್ಲೂಕಗಳಿಗೆ 1 ತರಬೇತಿಯನ್ನು ಇಲ್ಲಿ ಆಯೋಜಿಸಲಾಗಿದೆ. ಕಾರಣ ಸಹಕಾರಿಗಳು ತರಬೇತಿಯಲ್ಲಿ ಹೆಚ್ಚಿನ ಸಂಖ್ಯೆ ಭಾಗವಹಿಸಬೇಕು ಎಂದು

ಅಭಿಪ್ರಾಯ ವ್ಯಕ್ತಪಡಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ರಾಜಶೇಖರ ಬಿ. ಇವರು ಇಂದು ಸಹಕಾರಿಗಳು ಆದಾಯ ತೆರಿಗೆ ಇಲಾಖೆಯಿಂದ ಪಡೆಯುತ್ತಿರುವ ತೆರಿಗೆ ಪಾವತಿಯ ಆದೇಶಗಳಾಲಿ ಅಥವಾ ನೋಟಿಸ್‌ಗಳಿಂದ ಆಗುತ್ತಿರುವ ಸಮಸ್ಯೆಯನ್ನು ತಿಳಿದು ಸಂಯುಕ್ತ ಸಹಕಾರಿಯು ಕೇಂದ್ರ ಸರ್ಕಾರದ ಹಣಕಾಸು ಸಚಿವರನ್ನು ಮತ್ತು ಸಿಬಿಡಿಟಿ ಚೇರಮನ್‌ರನ್ನು ಭೇಟಿ ಮಾಡಿ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳ ಮನವರಿಕೆ ಮಾಡಿಕೊಟ್ಟಿದೆ. ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಮತ್ತು ಉಪನ್ಯಾಸಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಧರ ಉಪಸ್ಥಿತರಿದ್ದರು. ಪ್ರಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್. ನೆರವೇರಿಸಿದರು. ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ನಡೆಸಿಕೊಟ್ಟರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 75 ಸೌಹಾರ್ದ ಸಹಕಾರಿಗಳಿಂದ 119 ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಯಚೂರು** : ರಾಯಚೂರು ಜಿಲ್ಲೆಯ ಮಾನವಿ, ರಾಯಚೂರು, ಸಿರವಾರ ಮತ್ತು ದೇವದುರ್ಗ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮತ್ತು ನಿರ್ದೇಶಕರಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 11.07.2019ರಂದು "ಗಾಂಧಿ ಕಾಲೇಜ್" ಮಾನವಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿ ಉದ್ಘಾಟಿಸಿ, ಸಂಯುಕ್ತ ಸಹಕಾರಿಯು ಮೇಲಿಂದ ಮೇಲೆ ಈಗಾಗಲೇ ಬೇರೆ ತರಬೇತಿಗಳನ್ನು ನೀಡಲಾಗುತ್ತಿದೆ. ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಸುಗ್ರೀವಾಜ್ಞೆ–2019 ಹೊರಡಿಸಲಾಗಿದೆ. ಅದರಿಂದ ಸಹಕಾರಿಗಳ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಮಾಹಿತಿಯನ್ನು ಈ ತರಬೇತಿಯಲ್ಲಿ ಪಡೆಯಬಹುದಾಗಿರುತ್ತದೆ. ಅದಲ್ಲದೆ ಈ ತರಬೇತಿಯಲ್ಲಿ ನಿರ್ದೇಶಕರು ತಮ್ಮ ಸಹಕಾರಿಯಲ್ಲಿ ತಾವು ಹೊಂದಿರುವ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ತಿಳಿಸಲಾಗುವುದು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀಮತಿ ಡಾ. ನಾಗರಾತ್ನ ಮತ್ತು ಗಾಂಧಿ ಕಾಲೇಜನ ಪ್ರಾಂಶುಪಾಲರಾದ ಶ್ರೀ ಈರಣ್ಣ ಎಂ. ಇವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 41 ಸೌಹಾರ್ದ ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿದ್ದರು.



**ಕೊಪ್ಪಳ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ದಿನಾಂಕ 05.07.2019 ರಂದು ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕುಕನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ನಗರದ ಶ್ರೀ ಕೇತೇಶ್ವರ ಕಲ್ಯಾಣ ಮಂಟಪ, ಶ್ರೀ ಗವಿಶ್ರೀ ನಗರ, ಶ್ರೀ ಗವಿಮಠದ ಹತ್ತಿರ, ಕೊಪ್ಪಳದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ನೆರವೇರಿಸಿದರು. ಅದೇ ರೀತಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ ಮತ್ತು ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ. ಎಲ್.ಎಚ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಯಲ್ಲಪ್ಪ ಕನಕಪ್ಪ ಬಸರಿಹಾಳ ಮತ್ತು ಶ್ರೀ ಚನ್ನಬಸಪ್ಪ ಕಡ್ಡಿಪುಡಿ ಹಾಗೂ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರ ಇವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಇವರು ಅತಿಥಿ ಗಣ್ಯರಿಗೆ ಸ್ವಾಗತವನ್ನು ಕೋರಿದರು. ನಂತರ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಕಲಿಕೆ ಎಂಬುದು ನಿರಂತರ ಪ್ರಕ್ರಿಯೇ, ಹಾಗಾಗೀ ಪ್ರತಿ ದಿನ ಪ್ರತಿ ಕ್ಷಣ ಕಲಿಕೆಯ ಹಂಬಲ ಮೈಗೂಡಿಸಿಕೊಳ್ಳಬೇಕು, ಸಂಯುಕ್ತ ಸಹಕಾರಿಯು ಆಯೋಜಿಸುವ ತರಬೇತಿಗಳಲ್ಲಿ ಭಾಗವಹಿಸಿ, ಪ್ರಯೋಜನೆಯ ಪಡೆದು, ಸಂಸ್ಥೆಯ ಬೆಳವಣಿಗೆಗೆ ನಾಂದಿ ಹಾಡಿ ಎಂದರು. ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸುತ್ತಿರುವ

ತರಬೇತಿ ಕಾರ್ಯಕ್ರಮದ ಉಪಯುಕ್ತತೆಯ ಬಗ್ಗೆ ಮಾಹಿತಿ ನೀಡಿದರು ಮತ್ತು ಸೌಹಾರ್ದ ಸಹಕಾರಿಗಳಲ್ಲಿ ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಕರ್ತವ್ಯಗಳ ಮಹತ್ವದ ಬಗ್ಗೆ ಉಲ್ಲೇಖಿಸಿದರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ ರವರು ಮಾತನಾಡುತ್ತಾ ಕೊಪ್ಪಳ ಜಿಲ್ಲಾ ಒಕ್ಕೂಟದ ಸ್ವರೂಪ ಮತ್ತು ಅದರ ಕಾರ್ಯವೈಖರಿ, ಸೌಹಾರ್ದ ಸಹಕಾರಿಗಳು ಒಕ್ಕೂಟದ ಸದಸ್ಯತ್ವದ ಮೂಲಕ ಸಹಕಾರಿಗಳು ಪ್ರಸ್ತುತ ಮತ್ತು ಮುಂದಿನ ದಿನಗಳಲ್ಲಿ ಅದರ ಉಪಯುಕ್ತತೆಯ ಬಗ್ಗೆ ಮಾತನಾಡಿದರು. ಅದೇ ರೀತಿಯಾಗಿ ಮತ್ತೋರ್ವ ಮುಖ್ಯ ಅತಿಥಿಗಳಾದ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ.ಎಲ್.ಎಚ್ ರವರು ಸೌಹಾರ್ದ ಸಹಕಾರಿಗಳಲ್ಲಿ ಮುಖ್ಯಕಾರ್ಯನಿರ್ವಾಹಕರು ಮತ್ತು ಆಡಳಿತ ಮಂಡಳಿಯ ಜವಾಬ್ದಾರಿಗಳ ಬಗ್ಗೆ ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆರವರು ಮೊದಲನೆ ಅವಧಿಯಲ್ಲಿ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ–2019"ರ ಬಗ್ಗೆ ತಿಳಿಸಿದರು ಮತ್ತು ಅನಿಯಂತ್ರಿತ ಠೇವಣಿಯ ಬಗ್ಗೆ ಸಹಕಾರಿಗಳಿಗೆ ಆಗುವ ಲಾಭ ಮತ್ತು ಪರಿಣಾಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು. ನಂತರದ ಅವಧಿಯಲ್ಲಿ ಶ್ರೀ ಶ್ರೀಧರ ರವರು "ಸಾಲ ಪತ್ರ ದಾಖಲಾತಿಗಳು ಮತ್ತು ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲಿಸಲು ದಾವಾ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು" ಇದರ ಬಗ್ಗೆ ತಿಳಿಸಿದರು ಮತ್ತು ದಾವಾ ದಾಖಲಾತಿಯ ವಿಧಾನಗಳು ಮತ್ತು ಅದಕ್ಕೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಶ್ರೀಕಾಂತ ಬರುವೆರವರು "ಸಹಕಾರಿಗಳ ಆಡಳಿತ ಮಂಡಳಿ ಸಭೆಗಳ ಹಾಗೂ ಸಾಮಾನ್ಯ ಸಭೆಯ ನಡವಳಿ ದಾಖಲಿಸುವುದು" ಇದರ ಬಗ್ಗೆ ತಿಳಿಸಿದರು ಮತ್ತು ಅಲ್ಲಿ ಉಪಸ್ಥಿತರಿರುವ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳನ್ನು ಕ್ಲಸ್ಟರ್ ಗುಂಪುಗಳಾಗಿ ವಿಂಗಡಿಸಿ ಆ ಸಮೂಹ ಗುಂಪುಗಳು ಒಂದು ಸೌಹಾರ್ದ ಸಹಕಾರಿಯ ಪ್ರತಿರೂಪದಂತೆ ಕಾರ್ಯನಿರ್ವಹಿಸಿ, ಪ್ರತಿನಿಧಿಗಳು ಆ ಸೌಹಾರ್ದ ಸಹಕಾರಿಯಲ್ಲಿ ನಡೆಯುವ ಆಡಳಿತ ಮಂಡಳಿಯ ಸಭೆ, ಸಾಮಾನ್ಯ ಸಭೆ, ವಿಶೇಷ ಸಾಮಾನ್ಯ ಸಭೆಯ ನಡುವಳಿಗಳನ್ನು ಹೇಗೆ ದಾಖಲಿಸಬೇಕೆಂದು ಒಂದು ಪ್ರಾಯೋಗಿಕ ಅನುಭವದ ಮೂಲಕ ತಿಳಿಸಿಕೊಟ್ಟರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 80 ಸೌಹಾರ್ದ ಸಹಕಾರಿಳಿಂದ 130 ಸದಸ್ಯರು ಭಾಗವಹಿಸಿದರು.

---

**ಕೊಪ್ಪಳ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ದಿನಾಂಕ 06.07.2019 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ ಮತ್ತು ಕನಕಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಗಂಗಾವತಿ ನಗರದ ಹೋಟೆಲ್ ಲಲಿತಮಹಲ್, ಆನೆಗುಂದಿ ರಸ್ತೆ, ಗಂಗಾವತಿಯಲ್ಲಿ ಹಮ್ಮಿಕೊಳ್ಳಲಾಗಿತ್ತು, ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ನೆರವೇರಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿ ಕಲಬುರ್ಗಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ರವರು ಪ್ರಾಸ್ತವಿಕವಾಗಿ ಮಾತನಾಡಿ ವೇದಿಕೆ ಮೇಲಿದ್ದ ಗಣ್ಯರಿಗೆ ಸ್ವಾಗತವನ್ನು ಕೋರಿದರು. ನಂತರ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರ್ ರವರು ಉದ್ಘಾಟನಾ ಭಾಷಣದಲ್ಲಿ ಸೌಹಾರ್ದ ಸಹಕಾರಿಗಳಿಗಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವತಿಯಿಂದ ಏರ್ಪಡಿಸಿರುವ ಡಿ.ಸಿ.ಬಿ.ಎಮ್ (Diploma in Cooperation and Banking Management) ಕೋರ್ಸಿನ ಕುರಿತು ಮಾಹಿತಿ ನೀಡಿದರು ಮತ್ತು ಸೌಹಾರ್ದ ಸಹಕಾರಿಗಳಿಗೆ ಅದರಿಂದ ಆಗುವ ಅನೇಕ ರೀತಿಯ ಉಪಯೋಗಗಳ ಬಗ್ಗೆ ವಿವರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ ರವರು ಮಾತನಾಡುತ್ತಾ ಕೊಪ್ಪಳ ಜಿಲ್ಲಾ ಒಕ್ಕೂಟವು ಸಂಯುಕ್ತ ಸಹಕಾರಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಯುಕ್ತ ಸಹಕಾರಿಯ ಸಲಹೆ ಮತ್ತು ಮಾರ್ಗದರ್ಶನಲ್ಲಿ ಕಾರ್ಯನಿರ್ವಹಿಸುತ್ತದೆ ಎಂದರು, ಸೌಹಾರ್ದ ಸಹಕಾರಿಗಳು ಒಕ್ಕೂಟದ ಸದಸ್ಯತ್ವದ ಮೂಲಕ ಸಹಕಾರಿಗಳು ಪ್ರಸ್ತುತ ಮತ್ತು ಮುಂದಿನ ದಿನಗಳಲ್ಲಿ ಅದರ ಉಪಯುಕ್ತತೆಯ ಬಗ್ಗೆ ಮಾತನಾಡಿದರು ಮತ್ತು ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ ಆಡಳಿತ ಮಂಡಳಿಯ ವತಿಯಿಂದ ನಿಗದಿಪಡಿಸಿರುವ ಕನಿಷ್ಠ ವೇತನ ಶ್ರೇಣಿಯ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಗಳಾದ ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ಗಿರಿಯಪ್ಪ ಹೊಸಕೇರಿರವರು ಸೌಹಾರ್ದ ಸಹಕಾರಿ ಬ್ಯಾಂಕಿನ ಪ್ರಸ್ತುತ ಸ್ಥಿತಿ–ಗತಿಗಳ ಬಗ್ಗೆ ಮತ್ತು ಸೌಹಾರ್ದ ಸಹಕಾರಿ ಬ್ಯಾಂಕಗಳು ಎದುರಿಸುತ್ತಿರುವ ತೊಂದರೆಗಳು ಮತ್ತು ಅದರ ಪರಿಹಾರದ ಕುರಿತು ಮಾತನಾಡಿದರು ಬಳಕ ಮತ್ತೋರ್ವ ಮುಖ್ಯ ಅತಿಥಿಗಳಾದ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಪ್ರಾಣೇಶರಾವ್ ದೇಸಾಯಿರವರು ಸೌಹಾರ್ದ ಸಹಕಾರಿಗಳಲ್ಲಿ ಮುಖ್ಯಕಾರ್ಯನಿರ್ವಾಹಕರುಗಳ ಪಾತ್ರ ಮತ್ತು ಆಡಳಿತ ಮಂಡಳಿಯ ಶಾಸನಬದ್ಧ ಕರ್ತವ್ಯಗಳ ಕುರಿತು ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಮೊದಲನೆ ಅವಧಿಯಲ್ಲಿ ಶ್ರೀ ಶ್ರೀಕಾಂತ

ಬರುವೆರವರು, ಪ್ರಾಂತೀಯ ವ್ಯವಸ್ಥಾಪಕರು "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ-2019"ರ ಬಗ್ಗೆ ತಿಳಿಸಿದರು ಮತ್ತು ಅನಿಯಂತ್ರಿತ ಠೇವಣಿಯ ಬಗ್ಗೆ ಸಹಕಾರಿಗಳಿಗೆ ಆಗುವ ಲಾಭ ಮತ್ತು ಪರಿಣಾಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು. ನಂತರದ ಅವಧಿಯಲ್ಲಿ ಶ್ರೀ ಶ್ರೀಧರ್, ಸಹಪ್ರಧಾನ ವ್ಯವಸ್ಥಾಪಕರು "ಸಾಲ ಪತ್ರ ದಾಖಲಾತಿಗಳು ಮತ್ತು ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲಿಸಲು ದಾವಾ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು" ಇದರ ಬಗ್ಗೆ ತಿಳಿಸಿದರು ಮತ್ತು ದಾವಾ ದಾಖಲಾತಿಯ ವಿಧಾನಗಳು ಮತ್ತು ಅದಕ್ಕೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಶ್ರೀಕಾಂತ ಬರುವೆರವರು, ಪ್ರಾಂತೀಯ ವ್ಯವಸ್ಥಾಪಕರು "ಸಹಕಾರಿಗಳ ಆಡಳಿತ ಮಂಡಳಿ ಸಭೆಗಳ ಹಾಗೂ ಸಾಮಾನ್ಯ ಸಭೆಯ ನಡವಳಿ ದಾಖಲಿಸುವುದು" ಇದರ ಬಗ್ಗೆ ತಿಳಿಸಿದರು ಮತ್ತು ಅಲ್ಲಿ ಉಪಸ್ಥಿತರಿರುವ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳನ್ನು ಕ್ಲಸ್ಟರ್ ಗುಂಪುಗಳಾಗಿ ವಿಂಗಡಿಸಿ ಆ ಸಮೂಹ ಗುಂಪುಗಳು ಒಂದು ಸೌಹಾರ್ದ ಸಹಕಾರಿಯ ಪ್ರತಿರೂಪದಂತೆ ಕಾರ್ಯನಿರ್ವಹಿಸಿ, ಪ್ರತಿನಿಧಿಗಳು ಆ ಸೌಹಾರ್ದ ಸಹಕಾರಿಯಲ್ಲಿ ನಡೆಯುವ ಆಡಳಿತ ಮಂಡಳಿಯ ಸಭೆ, ಸಾಮಾನ್ಯ ಸಭೆ, ವಿಶೇಷ ಸಾಮಾನ್ಯ ಸಭೆಯ ನಡುವಳಿಗಳನ್ನು ಹೇಗೆ ದಾಖಲಿಸಬೇಕೆಂದು ಒಂದು ಪ್ರಾಯೋಗಿಕ ಅನುಭವದ ಮೂಲಕ ತಿಳಿಸಿಕೊಟ್ಟರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 65 ಸೌಹಾರ್ದ ಸಹಕಾರಿಗಳಿಂದ 100 ಸದಸ್ಯರು ಭಾಗವಹಿಸಿದರು.



**ಚಾಮರಾಜನಗರ** : ದಿನಾಂಕ: 26.07.2019 ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ "ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ" ಪ್ರಕ್ರಿಯೆಗಳ ತರಬೇತಿ ಕಾರ್ಯಕ್ರಮದ ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎಚ್.ಎನ್ ರಮೇಶ್, ಸಹಕಾರಿಗಳ ಸಹಾಯಕ ನಿಬಂಧಕರು, ಚಾಮರಾಜನಗರ ಉಪ-ವಿಭಾಗ, ಚಾಮರಾಜನಗರ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಸ್. ಬಾಲಸುಬ್ರಮಣ್ಯ, ಅಧ್ಯಕ್ಷರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಹಾಗೂ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಉಪಸ್ಥಿತರಿದ್ದರು.

ತರಬೇತಿಯ ಪ್ರಾರಂಭದಲ್ಲಿ ಪ್ರಾಸ್ತಾವಿಕವನ್ನು ಶ್ರೀ ಚಂದ್ರಶೇಖರಯ್ಯ .ಎಂ ಇವರು ನಡೆಸಿಕೊಟ್ಟರು, ಸದರಿಯವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪರಿಚಯ ಮಾಡುತ್ತಾ, ಪ್ರಸ್ತುತ ಸಹಕಾರಿಗಳ ಮುಂದಿನ ದಿನಗಳಲ್ಲಿ ಸಹಕಾರಿಯ ಲೆಕ್ಕಪರಿಶೋಧನೆ ಹಾಗೂ ವಾರ್ಷಿಕ ಮಹಾ ಸಭೆಯನ್ನು ಜರುಗಿಸಬೇಕಾಗಿರುತ್ತದೆ. ಕೆಲ ಸಹಕಾರಿಗಳ ಉಪವಿಧಿಯಲ್ಲಿ ಕೆಲ ಅಂಶಗಳ ಕುರಿತು ತಿದ್ದುಪಡಿ ಮಾಡಿಕೊಳ್ಳಬೇಕಾದ ಸಂದರ್ಭವು ಬರಬಹುದು ಹಾಗೂ ಕೆಲ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರ ಸಂಖ್ಯೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ – 1997ರ ತಿದ್ದುಪಡಿಯಂತೆ ಹೆಚ್ಚಿಸಿಕೊಳ್ಳಬೇಕು ಮತ್ತು ಕೆಲ ಸಹಕಾರಿಗಳ ಆಡಳಿತ ಮಂಡಲಿಯ 5 ವರ್ಷದ ಅಧಿಕಾರವಧಿಯು ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ಈ ತರಬೇತಿಯು ತುಂಬಾ ಮಹತ್ವದಾಗಿರುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಎಚ್.ಎನ್. ರಮೇಶ್, ಸಹಕಾರಿಗಳ ಸಹಾಯಕ ನಿಬಂಧಕರು, ಚಾಮರಾಜನಗರ ಉಪ-ವಿಭಾಗ, ಚಾಮರಾಜನಗರ ಇವರು ಮಾತನಾಡಿ ಸಂಯುಕ್ತ ಸಹಕಾರಿಯು ಜಿಲ್ಲಾ ಮಟ್ಟದಲ್ಲಿ ತರಬೇತಿಯನ್ನು ನಡೆಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿ, ಸಹಕಾರಿಗಳ ಸಿಬ್ಬಂದಿಗಳು ಇದರ ಸದುಪಯೋಗ ಪಡೆದುಕೊಂಡು ಸಹಕಾರಿಯನ್ನು ಬೆಳವಣಿಗೆಯತ್ತ ನಡೆಸಬೇಕಾಗಿ ತಿಳಿಸಿದರು.

ತರಬೇತಿಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಎಸ್. ಬಾಲಸುಬ್ರಮಣ್ಯರವರು, ಸಂಯುಕ್ತ ಸಹಕಾರಿಯು ಚಾಮರಾಜನಗರ ಇವರು ಮಾತನಾಡಿ ಜಿಲ್ಲೆಯಲ್ಲಿರುವ ಸಹಕಾರಿಗಳ ಸಿಬ್ಬಂದಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಪ್ರತಿ ತಿಂಗಳು ನಮ್ಮ ಜಿಲ್ಲೆಯಲ್ಲಿಯೇ ತರಬೇತಿಯನ್ನು ಆಯೋಜಿಸುತ್ತಿರುವುದು ತುಂಬಾ ಒಳ್ಳೆಯ ಕಾರ್ಯವಾಗಿರುತ್ತದೆ. ಸಿಬ್ಬಂದಿಗಳು ಸದರಿ ತರಬೇತಿಗಳ ಉಪಯೋಗವನ್ನು ಪಡೆದು ಸಹಕಾರಿಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ತಿಳಿಸಿದರು.

ತರಬೇತಿಯ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಎಚ್.ಎನ್. ರಮೇಶ್‌ರವರು ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ಸಂದರ್ಭದಲ್ಲಿ

ಅನುಸರಿಸಬೇಕಾದ ಕ್ರಮಗಳು, ಭರ್ತಿ ಮಾಡಬೇಕಾದ ಅರ್ಜಿ ನಮೂನೆಗಳು, ಸಿದ್ದಪಡಿಸಬೇಕಾಗಿರುವ ಕರಡು ಮತದಾರರ ಪಟ್ಟಿ, ಸುಸ್ತಿಯಾದ ಷೇರುದಾರರ ಪಟ್ಟಿ, ಇಲಾಖೆಗಳಿಗೆ ಸಲ್ಲಿಸಬೇಕಾದ ಅರ್ಜಿಗಳ ಕುರಿತಾಗಿ ತರಬೇತಿಯನ್ನು ನಡೆಸಿಕೊಟ್ಟರು. ನಂತರದಲ್ಲಿ ಸಿಬ್ಬಂದಿಗಳೊಂದಿಗೆ ಪ್ರಶ್ನೋತ್ತರ ನಡೆಸಿಕೊಟ್ಟರು.

ಸದರಿ ತರಬೇತಿಯಲ್ಲಿ 10 ಸಹಕಾರಿಗಳಿಂದ 10 ಸಿಬ್ಬಂದಿಗಳು 04 ಸಹಕಾರಿಗಳ ಅಧ್ಯಕ್ಷರುಗಳು ಹಾಗೂ 03 ಉದ್ದೇಶಿತ ಸೌಹಾರ್ದ ಸಹಕಾರಿಗಳ ಪ್ರವರ್ತಕರಗಳು ಒಟ್ಟು 20 ಜನ ಹಾಜರಿದ್ದರು.

## ಕಾರ್ಗಿಲ್ ವಿಜಯ್ ದಿವಸ್



**ಚಾಮರಾಜನಗರ** : ದಿನಾಂಕ 26.07.2019ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ "ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ" ಪ್ರಕ್ರಿಯೆಗಳು ತರಬೇತಿ ಕಾರ್ಯಕ್ರಮವನ್ನು ಆರಂಭಿಸುವ ಮುನ್ನ 20ನೇ ವರ್ಷದ "ಕಾರ್ಗಿಲ್ ವಿಜಯ್ ದಿವಸ್"ದ ಅಂಗವಾಗಿ ಭಾರತ ಮಾತೆ ಹಾಗೂ ಸೈನಿಕರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಎಚ್.ಎನ್‌ರಮೇಶ್, ಸಹಕಾರಿಗಳ ಮಾನ್ಯ ಸಹಾಯಕ ನಿಬಂಧಕರು, ಶ್ರೀ ಎಸ್. ಬಾಲಸುಬ್ರಮಣ್ಯ, ಅಧ್ಯಕ್ಷರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಶ್ರೀ ಕೆ.ಜಿ ಪ್ರಕಾಶ, ಅಧ್ಯಕ್ಷರು, ರೇನಾ ವಿವಿದ್ದೊದ್ದೇಶ ಸೌಹಾರ್ದ ಸಹಕಾರಿ ನಿ., ಶ್ರೀ ನಾಗಸುಂದರ್, ಅಧ್ಯಕ್ಷರು, ಸಂಗಮ ಸೌಹಾರ್ದ ಸಹಕಾರಿ ನಿ., ಶ್ರೀ ಮಹದೇವಸ್ವಾಮಿ(ಬಾಬು), ಅಧ್ಯಕ್ಷರು, ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಹಾಗೂ ವಿವಿಧ ಸೌಹಾರ್ದ ಸಹಕಾರಿಗಳ ಸಿಇಓ ಗಳು ಹಾಜರಿದ್ದರು. ಈ ಸಂದರ್ಭದಲ್ಲಿ ಹಾಜರಿದ್ದ ಗಣ್ಯರು ಭಾರತ ದೇಶದ ಸೈನಿಕರ ಸಾಹಸ, ತ್ಯಾಗ ಹಾಗು ಬಲಿದಾನಗಳ ಕುರಿತು ಮಾಹಿತಿ ನೀಡಿ, ಕಾರ್ಗಿಲ್ ವಿಜಯ್ ದಿವಸದ ಮಹತ್ವವನ್ನು ನೀಡಿದರು.

## ವಲಯವಾರು ಸಮನ್ವಯ ಸಭೆ



**ಉಡುಪಿ** : ಸಂಯುಕ್ತ ಸಹಕಾರಿಯ ನಡಿಗೆ ಸದಸ್ಯ ಸಹಕಾರಿಗಳ ಕಡೆಗೆ ಎನ್ನುವ ಉದ್ದೇಶವನ್ನಿಟ್ಟುಕೊಂಡು. ಸದಸ್ಯ ಸಹಕಾರಿಗಳ ನಿರೀಕ್ಷೆಗಳು, ಸಮಸ್ಯೆಗಳನ್ನು ಆಲಿಸುವ ಹಾಗು ಅಗತ್ಯತೆಗಳಿಗನುಗುಣವಾಗಿ ಪರಿಹಾರವನ್ನು ಕಂಡುಕೊಳ್ಳುವ ಉದ್ದೇಶದಿಂದ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 25.07.2019 ಹಾಗೂ 26.07.2019 ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ವಲಯವಾರು ಸಮನ್ವಯ ಸಭೆಯನ್ನು ಆಯೋಜಿಸಲಾಯಿತು. ದಿನಾಂಕ 25.07.2019 ರಂದು ಕಾಪು, ಉಡುಪಿ ಹಾಗೂ ಕಾರ್ಕಳ ತಾಲ್ಲೂಕು ವಲಯಗಳ ಸೌಹಾರ್ದ ಸಹಕಾರಿಗಳಿಗೆ ಹಾಗೂ ದಿನಾಂಕ 26.07.2019 ರಂದು ಬ್ರಹ್ಮಾವರ, ಕುಂದಾಪುರ ಹಾಗು ಬೈಂದೂರು ತಾಲ್ಲೂಕು ವಲಯಗಳ ಸೌಹಾರ್ದ ಸಹಕಾರಿಗಳ ಸಭೆಯನ್ನು ಜರುಗಿಸಲಾಯಿತು. ಹೀಗೆ ಒಟ್ಟು 6 ಸಭೆಗಳನ್ನು ನಡೆಸಲಾಯಿತು. ಈ ಸಭೆಗಳಿಗೆ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗು ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಮಂಜುನಾಥ್ ಎಸ್. ಕೆ ಇವರು ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಬರುತ್ತಿರುವ ನೋಟಿಸ್‌ಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯ ನಿಯೋಗ ಕೇಂದ್ರ ಸಚಿವರು ಹಾಗು ಸಿ.ಬಿ.ಡಿ.ಟಿ ಅಧ್ಯಕ್ಷರನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿದೆ ಎಂದು ತಿಳಿಸಿದರು. ಸಹಕಾರಿಗಳ ಆರ್ಥಿಕ ಬೆಳವಣಿಗೆಗಳ ಕುರಿತು ಸದಸ್ಯ ಸಹಕಾರಿಗಳಿಗೆ ಮಾಹಿತಿ ನೀಡುವುದರ ಜೊತೆಗೆ ಸಹಕಾರಿಗಳು ಕಾನೂನಿನ ಪರಿಮಿತಿಯಲ್ಲಿ ತಮ್ಮ ವ್ಯವಹಾರವನ್ನು ನಡೆಸಬೇಕೆಂದು ಕಿವಿ ಮಾತು ಹೇಳಿದರು. ಅನಿಯಂತ್ರಿತ ಕಾಯ್ದೆ ಕುರಿತು ಸಹಕಾರಿಗಳ ಪ್ರಶ್ನೆಗಳಿಗೆ ಸಂಪೂರ್ಣ ಮಾಹಿತಿ ನೀಡಿದರು,

## ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಶಾಸನಬದ್ಧ ಕಾರ್ಯಗಳು

1. ಸೆಪ್ಟಂಬರ್ 1ರ ರೊಳಗಾಗಿ ಪ್ರತಿಯೊಂದು ಸಹಕಾರಿಯು ತಮ್ಮ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸತಕ್ಕದ್ದು.
2. ಸೆಪ್ಟಂಬರ್ 25ರೊಳಗಾಗಿ ಪ್ರತಿಯೊಂದ ಸೌಹಾರ್ದ ಸಹಕಾರಿಯು ತಮ್ಮ ವಾರ್ಷಿಕ ಸಾಮಾನ್ಯ ಸಭೆಯನ್ನು ಜರುಗಿಸತಕ್ಕದ್ದು.
3. ಸೌಹಾರ್ದ ಸಹಕಾರಿ ಕಾಯ್ದೆ 34ರ ರಿತ್ಯ ಪ್ರತಿಯೊಂದು ಸೌಹಾರ್ದ ಸಹಕಾರಿಯು ವರ್ಷ ಮುಗಿದ 6 ತಿಂಗಳೊಳಗೆ ವಿದ್ಯಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ಹಾಗೂ ಸಂಬಂಧಿಸಿದ ನಿಬಂಧಕರಿಗೆ ಮತ್ತು ಬ್ಯಾಂಕುಗಳ ವಿಷಯದಲ್ಲಿ ರಿಸರ್ವ ಬ್ಯಾಂಕ್‌ನವರಿಗೆ ಸಲ್ಲಿಸತಕ್ಕದ್ದು.
4. ಚುನಾವಣೆಗಳನ್ನು ಸಕಾಲದಲ್ಲಿ ನಡೆಸುವಂತೆ ಕ್ರಮವಿಡುವುದು (31 ಮಾರ್ಚ್ 2020 ರೊಳಗೆ ನಡೆಸುವ ಚುನಾವಣೆಗಳ ಬಗ್ಗೆ ಈಗಿನಿಂದಲೇ ಅಗತ್ಯ ಕ್ರಮವಿಡುವುದು)

## ಪ್ರವೇಶ ತರಬೇತಿ ಕಾರ್ಯಕ್ರಮ



**ಹುಬ್ಬಳ್ಳಿ :** ದಿನಾಂಕ 25.07.2019 ರಂದು ಗದಗ, ಧಾರವಾಡ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ನೂತನವಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗಾಗಿ ಪ್ರವೇಶ ತರಬೇತಿಯನ್ನು ಮಂತ್ರ ರೆಸಿಡೆನ್ಸಿ, ಹುಬ್ಬಳ್ಳಿ, ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಪಡಚಣ್ಣವರ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಸರಸ್ವತಿ ಎನ್. ರವಿ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಂ.ಬಿ. ಕಲಾಲ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ಭಾಗವಹಿಸಿದ್ದರು. ತರಬೇತಿಯಲ್ಲಿ 41 ಸೌಹಾರ್ದ ಸಹಕಾರಿಗಳಿಂದ 63 ಪ್ರತಿನಿಧಿಗಳು ಭಾಗವಹಿಸಿದ್ದರು.

ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪತ್ರಗಳ ನಿರ್ವಹಣೆ( ಪ್ರಾಯೋಗಿಕ) ವಿಷಯದ ಕುರಿತು ಶ್ರೀ ಸುನೀಲ ಪತ್ತಾರ, ಮಾನ್ಯ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನ ಇಲಾಖೆ, ಮುಧೋಳ ಹಾಗೂ ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಶಾಸನಬದ್ಧ ಕರ್ತವ್ಯಗಳು, ಆಡಳಿತ ಮಂಡಳಿ ಸಾಮಾನ್ಯ ಸಭೆ, ನಡವಳಿ ದಾಖಲಿಸುವ ವಿಧಾನ (ಪ್ರಾಯೋಗಿಕ) ವಿಷಯದ ಕುರಿತು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾನ್ಯ ಉಪಾಧ್ಯಕ್ಷರು ಕೆ ಡಿ ಸಿ ಸಿ ಬ್ಯಾಂಕ್, ಶಿರಸಿ ಇವರು ಉಪನ್ಯಾಸ ನೀಡಿದರು.

## ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ಕುರಿತು – ಬೆಳಗಾವಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ



**ಬೆಳಗಾವಿ :** ದಿನಾಂಕ 19.07.2019 ರಂದು ಬೆಳಗಾವಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳಿಗಾಗಿ ತರಬೇತಿಯನ್ನು ಹೋಟಲ್ ಸನ್ಮಾನ್, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಚಂದ್ರಕಾಂತ ಪಡಚಣ್ಣವರ, ಶ್ರೀ ಜಿ.ಎನ್. ಪಾಟೀಲ, ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಸಂಜೀವ ಮಹಾಜನ ಹಾಗೂ ಶ್ರೀ ಎಂ.ಬಿ.ಕಲಾಲ, ಇವರು ನೇರವೇರಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಗುರುನಾಥ ಜ್ಯಾಂತೀಕರ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ಪರಿವೀಕ್ಷಣೆಯಲ್ಲಿ ಗಮನಿಸಬೇಕಾದ ಅಂಶಗಳು ಮತ್ತು ಪರಿವೀಕ್ಷಣಾ ವರದಿ ಸಿದ್ಧಪಡಿಸುವ ವಿಧಾನ ಕುರಿತು ಉಪನ್ಯಾಸವನ್ನು ನೀಡಿದರು. ತರಬೇತಿಯಲ್ಲಿ ಬೆಳಗಾವಿ ಪ್ರಾಂತೀಯ ಕಛೇರಿಯ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

# ಕ್ಲಸ್ಟರ್ ತರಬೇತಿ ಕಾರ್ಯಕ್ರಮಗಳು



**ಉತ್ತರ ಕನ್ನಡ :** ದಿನಾಂಕ 03.07.2019 ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವಾ ದಾಖಲಾತಿ, ವಾದಿ ಹೇಳಿಕೆ, ಆಡಳಿತ ಮಂಡಲಿಯ ಚುನಾವಣೆ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿ, ಶಿರಸಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 07 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 12.07.2019 ರಂದು ಉತ್ತರ ಕನ್ನಡ ಜಿಲ್ಲೆಯ ಕುಮುಟಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಾವಾ ದಾಖಲಾತಿ, ವಾದಿ ಹೇಳಿಕೆ, ಚುನಾವಣೆ ಹಾಗೂ ಲೆಕ್ಕ ಪರಿಶೋಧನ ವರದಿಗಳ ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಮಾತಾ ವೈಭವ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಮುಟಾ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳಿಂದ 10 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 16.07.2019 ರಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಾವಾ ದಾಖಲಾತಿ, ವಾದಿ ಹೇಳಿಕೆ, ಆಡಳಿತ ಮಂಡಲಿಯ ಆರು ತಿಂಗಳ ಅವಧಿ ಉಳಿದಿರುವ ಸೌಹಾರ್ದ ಸಹಕಾರಿಗಳಿಗೆ ಚುನಾವಣೆ ಪ್ರಸ್ತಾವನೆಯನ್ನು ಸಲ್ಲಿಕೆಯ ಕುರಿತು ಹಾಗೂ ಲೆಕ್ಕ ಪರಿಶೋಧಕರ ನೇಮಕಾತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಕಳುಹಿಸುವ ಕುರಿತು, ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಲಿ ಸಭೆಯ ಬಗ್ಗೆ, ಸಾಲ ನೀಡುವಾಗ ಅನುಸರಿಸುವ ಕ್ರಮಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ನಾಗವಲ್ಲಿ ಸೌಹಾರ್ದ ಸಹಕಾರಿ ನಿ., ಅಂಕೋಲಾ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 09 ಸೌಹಾರ್ದ ಸಹಕಾರಿಗಳಿಂದ 09 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 18.07.2019 ರಂದು ಉತ್ತರ ಕನ್ನಡ ಜಿಲ್ಲೆಯ ಮುಂಡುಗೋಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಾವಾ ದಾಖಲಾತಿ, ವಾದಿ ಹೇಳಿಕೆ, ಆಡಳಿತ ಮಂಡಲಿಯ ಆರು ತಿಂಗಳ ಅವಧಿ ಉಳಿದಿರುವ ಸೌಹಾರ್ದ ಸಹಕಾರಿಗಳಿಗೆ ಚುನಾವಣೆ ಪ್ರಸ್ತಾವನೆಯನ್ನು ಸಲ್ಲಿಕೆಯ ಕುರಿತು ಹಾಗೂ ಲೆಕ್ಕ ಪರಿಶೋಧಕರ ನೇಮಕಾತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಕಳುಹಿಸುವ ಕುರಿತು, ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಲಿ ಸಭೆಯ ಬಗ್ಗೆ, ಸಾಲ ನೀಡುವಾಗ ಅನುಸರಿಸುವ ಕ್ರಮಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಮಲೆನಾಡು ಸೌಹಾರ್ದ ಸಹಕಾರಿ ನಿ., ಮುಂಡುಗೋಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 04 ಸೌಹಾರ್ದ ಸಹಕಾರಿಗಳಿಂದ 04 ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾವೇರಿ :** ದಿನಾಂಕ 09.07.2019 ರಂದು ಹಾವೇರಿ ಜಿಲ್ಲೆಯ ಹಾನಗಲ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಆಡಳಿತ ಮಂಡಲಿಯ ಚುನಾವಣೆ, ದಾವಾ ದಾಖಲಾತಿ, ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ ಹಾಗೂ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾನಗಲ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 13 ಪ್ರತಿನಿಧಿಗಳು ಭಾಗವಹಿಸಿದ್ದರು.



**ವಿಜಯಪುರ :** ದಿನಾಂಕ 15.07.2019 ರಂದು ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಶಾಸನಬದ್ಧ ಕರ್ತವ್ಯಗಳು ಹಾಗೂ ಚುನಾವಣೆ ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಶಾಂತೇಶ್ವರ ಸೌಹಾರ್ದ ಸಹಕಾರಿ ನಿ., ಇಂಡಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ 07 ಪ್ರತಿನಿಧಿಗಳು ಭಾಗವಹಿಸಿದ್ದರು.

# ಕಲಬುರಗಿ ಪ್ರಾಂತೀಯ ಕಛೇರಿಗೆ ನಿವೇಶನ ಖರೀದಿ



**ಕಲಬುರಗಿ :** ಸಂಯುಕ್ತ ಸಹಕಾರಿಯ 17ನೇ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿರುವ ಕ್ರಿಯಾ ಯೋಜನೆಯಂತೆ ಕಲಬುರ್ಗಿ ಪ್ರಾಂತೀಯ ಕಛೇರಿಗೆ ಜಿಡಿಎ ಲೇಔಟ್‌ನಲ್ಲಿ 4000 ಚದರ ಅಡಿಯ (50*80) ನಿವೇಶನವನ್ನು ಖರೀದಿಸಿ, ದಿನಾಂಕ 24-07-2019 ರಂದು ನೋಂದಾಯಿಸಲಾಯಿತು. ಈ ಸಂದರ್ಭದಲ್ಲಿ ಉಪನೋಂದಣಾಧಿಕಾರಿಗಳೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ವೈ.ಟಿ.ಪಾಟೀಲ ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ ರವರು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 03.07.2019 ರಂದು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಶಾಸನಾತ್ಮಕ ಕರ್ತವ್ಯಗಳು ಹಾಗೂ ಆಡಳಿತ ಮಂಡಲಿಯ ಚುನಾವಣೆ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಕುಮಾರ ಸ್ವಾಮಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ., ಅಥಣಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 07 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 23.07.2019 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟಪ್ರಭಾ ಗ್ರಾಮದ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು, ಲೆಕ್ಕ ಪರಿಶೋಧಕರ ನೇಮಕಾತಿ, ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಲಿ ಸಭೆಯ ಬಗ್ಗೆ ಕ್ಲಸ್ಟರ್ ತರಬೇತಿಯನ್ನು ಶ್ರೀ ಶರಡಿ ಸಾಯಿಬಾಬಾ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಘಟಪ್ರಭ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 05 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 24.07.2019 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೌಜಲಗಿ ಗ್ರಾಮದ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು, ಲೆಕ್ಕ ಪರಿಶೋಧಕರ ನೇಮಕಾತಿ, , ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಲಿ ಸಭೆಯ ಬಗ್ಗೆ ಕ್ಲಸ್ಟರ್ ತರಬೇತಿಯನ್ನು ಮಾಳಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ. ಕೌಜಲಗಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 04 ಸೌಹಾರ್ದ ಸಹಕಾರಿಗಳಿಂದ 04 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 24.07.2019 ರಂದು ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು, ಲೆಕ್ಕ ಪರಿಶೋಧಕರ ನೇಮಕಾತಿ, ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಲಿ ಸಭೆಯ ಬಗ್ಗೆ ಕ್ಲಸ್ಟರ್ ತರಬೇತಿಯನ್ನು ಶ್ರೀ ಲಿಂಗರಾಜ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ನಿಪ್ಪಾನಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 06 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 29.07.2019 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು, ಲೆಕ್ಕ ಪರಿಶೋಧಕರ ನೇಮಕಾತಿ, ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಲಿ ಚುನಾವಣೆ ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ನರಸಿಂಹ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 06 ಪ್ರತಿನಿಧಿಗಳು ಭಾಗವಹಿಸಿದ್ದರು.

**ಧಾರವಾಡ :** ದಿನಾಂಕ 10.07.2019 ರಂದು ಧಾರವಾಡ ಜಿಲ್ಲೆಯ ಕೆಲವು ಸೌಹಾರ್ದ ಸಹಕಾರಿಗಳಿಗೆ ಚುನಾವಣೆ ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ವಿಶಾಲ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 4 ಸೌಹಾರ್ದ ಸಹಕಾರಿಗಳಿಂದ 7 ಪ್ರತಿನಿಧಿಗಳು ಭಾಗವಹಿಸಿದ್ದರು.



# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ಸೌಹಾರ್ದ ಸಹಕಾರಿಗಳ ಭೇಟಿ



ರಾಯಚೂರು : ಕೃಷಿಋಷಿ ಪತ್ತಿನ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು.



ರಾಯಚೂರು : ವೀರಶೈವ ವಿಕಾಸ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ಇವರು ಭೇಟಿ ನೀಡಿದಾಗ ಸನ್ಮಾನಿಸಿದರು.



ದಾವಣಗೆರೆ : ದಾವಣಗೆರೆ ಜಿಲ್ಲಾ ಸಂಪರ್ಕ ಕಛೇರಿಗೆ ಸಂಯುಕ್ತ ಸಹಕಾರಿಯ ನಿಕಟ ಪೂರ್ವ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಭೇಟಿ ನೀಡಿ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರು.



ಬೆಂಗಳೂರು : ಭಾವಸರ ಕ್ಷತ್ರೀಯ ಸಮಾಜದ ಪ್ರವರ್ತಕರ ಸಭೆ.



ರಾಯಚೂರು : ಬಣಜಿಗರ ಪತ್ತಿನ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ನೀಡಿದಾಗ ಸನ್ಮಾನಿಸಿದರು.



ಹುಬ್ಬಳ್ಳಿ : ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ನವನಗರ, ಹುಬ್ಬಳ್ಳಿ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ. ಕಾರಕೂನ್ ರವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು.



ಧಾರವಾಡ : ವಿಶಾಲ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಹಾಗೂ ಶ್ರೀ ಹಿಂಗುಲಾಂಬಿಕಾ ಪತ್ತಿನ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ.ಕಾರಕೂನ್ ರವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು.

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕುಲಪತಿಗಳೊಂದಿಗೆ ಸಮಾಲೋಚನೆ



ಹುಬ್ಬಳ್ಳಿ : ಡಿಸಿಬಿಎಂ ಕೋರ್ಸ್ ಕುರಿತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇಲ್ಲಿ ಮಾನ್ಯ ಕುಲಪತಿಗಳಾದ ಪ್ರೊ(ಡಾ) ಪಿ. ಈಶ್ವರ್ ಭಟ್, ಪ್ರೊ ಸಿ.ಎಸ್.ಪಾಟೀಲ ರೊಂದಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ. ಕಾರಕೂನ್ ರವರು ಚರ್ಚಿಸಿದರು.



ಧಾರವಾಡ : ಉದ್ದೇಶಿತ ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪ್ರವರ್ತಕರ ಸಭೆಯನ್ನು ಶ್ರೀ ಮಾರ್ಕಂಡೇಶ್ವರ ಸೌಹಾರ್ದ ಸಹಕಾರಿ, ಹುಬ್ಬಳ್ಳಿ ಸಹಕಾರಿಯಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣ ನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದರಿ ಸಭೆಯಲ್ಲಿ ಶ್ರೀ ರವೀಂದ್ರ ಯಳಗಾರ ಇವರನ್ನು ಮುಖ್ಯ ಪ್ರವರ್ತಕರನ್ನಾಗಿ ಆಯ್ಕೆ ಮಾಡಿದರು. ಸದರಿ ಸಭೆಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 15 ಜನರು ಭಾಗವಹಿಸಿದರು.



ರಾಮನಗರ : ಉದ್ದೇಶಿತ ಶ್ರೀ ಕೆಂಗಲ್ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆಯು ರಾಮನಗರದಲ್ಲಿ ನಡೆಯಿತು. ಸದರಿ ಸಭೆಯಲ್ಲಿ ಶ್ರೀ ವರದರಾಜ ಗೌಡ ಇವರನ್ನು ಮುಖ್ಯ ಪ್ರವರ್ತಕರನ್ನಾಗಿ ಆಯ್ಕೆ ಮಾಡಿದರು.

## ಸಹಕಾರ ಮಹಾಮಂಡಳದ ಅಧ್ಯಕ್ಷರ ಭೇಟಿ



ಬೆಂಗಳೂರು : ದಿನಾಂಕ 18.07.2019 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗಂಗಣ್ಣ ಇವರು ಭೇಟಿ ನೀಡಿದರು.



ಧಾರವಾಡ: ಶ್ರೀ ವಿಜಯಲಕ್ಷ್ಮಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಇದರ ಲೈನ್ ಬಜಾರ್ ಶಾಖೆಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ.ಕಾರಕೂನ್ ಹಾಗೂ ಬೆಳಗಾವಿ ಪ್ರಾಂತದ ವ್ಯವಸ್ಥಾಪಕರಾದ ಶ್ರೀ ಜಿ. ಎಸ್.ಟೋಪಣ್ಣವರ ರವರು ಭೇಟಿ ನೀಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು ಹಾಗೂ ಸಹಕಾರಿಯ ನಿರ್ದೇಶಕರಾದ ಶ್ರೀ ರವೀಂದ್ರ ಯಳಗಾರ, ಸಹಕಾರಿಯ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಮನೋಜ ಜೋಶಿ ರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಮಾರ್ಗದರ್ಶನ ನೀಡಿದರು.



ಧಾರವಾಡ : ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ. ಕಾರಕೂನ್ ರವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು.

## "ಸೌಹಾರ್ದ ಸಹಕಾರಿಗಳಿಗೆ ಜಿಎಸ್‌ಟಿ ನೋಂದಣಿ ಕಡ್ಡಾಯ"

ಪ್ರತಿಯೊಂದು ಸೌಹಾರ್ದ ಸಹಕಾರಿಯು ಜಿಎಸ್‌ಟಿ ನೋಂದಣಿಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು ಮತ್ತು ಪ್ರತಿ ವರ್ಷ ಜಿಎಸ್‌ಟಿ ರಿರ್ಟನ್ಸ್ ಸಲ್ಲಿಸಲು ಕ್ರಮವಿಡುವುದು.




ದಾವಣಗೆರೆ : ದಿನಾಂಕ 20.07.2019 ರಂದು ಜಂಗಮ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿದಾಗ ಸನ್ಮಾನಿಸಿದರು.



ದಾವಣಗೆರೆ : ದಿನಾಂಕ 20.07.2019 ರಂದು ವೆಜಿಟೇಬಲ್ ಪ್ಲಾಂಟ್ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿದಾಗ ಸನ್ಮಾನಿಸಿದರು.



ಬೆಳಗಾವಿ: ದಿನಾಂಕ 09.07.2019 ರಂದು ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಯಲ್ಲಿ ಮಾನ್ಯ ಉಪ ನಿಬಂಧಕರ ಅಧ್ಯಕ್ಷತೆಯಲ್ಲಿ, ಲೆಕ್ಕ ಪರಿಶೋಧನೆ ಇಲಾಖೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ, ಡಿಸಿಸಿ ಬ್ಯಾಂಕ್ ಬೆಳಗಾವಿ ಮತ್ತು ಕೆಎಂಎಫ್ ಬೆಳಗಾವಿ ಇವುಗಳ ಸಮನ್ವಯ ಸಮಿತಿ ಸಭೆ ಜರುಗಿತು. ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮತ್ತು ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಪ್ರಗತಿ ಹಾಗೂ ಲೆಕ್ಕ ಪರಿಶೋಧನೆ ಕೈಗೊಳ್ಳದ ಸಹಕಾರಿಗಳ ಬಗ್ಗೆ ಚರ್ಚೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಉಪ ನಿರ್ದೇಶಕರು ಲೆಕ್ಕ ಪರಿಶೋಧನೆ ಇಲಾಖೆ ಬೆಳಗಾವಿ ಮತ್ತು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ ನಿ., ಬೆಳಗಾವಿ ಇವರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–6,366, ಬೆಂಗಳೂರು:–1460, ಮೈಸೂರು:–732 ಹಾಗೂ ಕಲಬುರಗಿ :–1605 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 10,163 ಆಗಿರುತ್ತದೆ. ಇವುಗಳ ಪೈಕಿ 5,123 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 5,040.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,961 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 201 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1619 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 977 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 80 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 82 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 815 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

# ದೆಹಲಿಯ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (NCDC) ವತಿಯಿಂದ ಭಾರತದ ಅಂತರಾಷ್ಟ್ರೀಯ ಸಹಕಾರಿ ವ್ಯಾಪಾರ ಮೇಳ ಕಾರ್ಯಕ್ರಮ ನೋಂದಣಿ ಪ್ರಾರಂಭ



# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಪರೀಕ್ಷೆಯ ಫಲಿತಾಂಶ

# Diploma in Cooperation and Banking Management Examination Result

ದಿನಾಂಕ 21, 22 ಮತ್ತು 23ನೇ ಜೂನ್ 2019ರಂದು ಬೆಂಗಳೂರು ಹಾಗೂ ಬೆಲ್ಲದ ಬಾಗೇವಾಡಿಯಲ್ಲಿ ಕೇಂದ್ರಗಳಲ್ಲಿ ನಡೆಸಿದ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಫಲಿತಾಂಶ ಪ್ರಕಟಿಸಲಾಗಿದೆ.

**ಒಟ್ಟು 6 ವಿಷಯಗಳು :**

**ವಿಷಯ 01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ**

**ವಿಷಯ 02 – ಸಹಕಾರಿ ಪತ್ತು ನಿರ್ವಹಣೆ**

**ವಿಷಯ 03 – ಬ್ಯಾಂಕಿಂಗ್ ಮೂಲ ಮಾಹಿತಿ**

**ವಿಷಯ 04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು, ಇತರೆ ಅನ್ವಯಿಸುವ ಕಾಯ್ದೆಗಳು**

**ವಿಷಯ 05 – ಲೆಕ್ಕ ಪತ್ರಗಳು ಹಾಗೂ ಲೆಕ್ಕಪರಿಶೋಧನೆ**

**ವಿಷಯ 06 – ಮಾಹಿತಿ ತಂತ್ರಜ್ಞಾನ**

ಪ್ರತಿಯೊಂದು ವಿಷಯಕ್ಕೆ 100 ರಂತೆ, ಒಟ್ಟು 600 ಅಂಕಗಳು, ಅಧ್ಯಯನ ವರದಿ ಹಾಗೂ ಸಂಪರ್ಕವರ್ಗ ತರಗತಿಗಳಿಗೆ ಒಟ್ಟು 100 ಅಂಕಗಳು, ಕೋರ್ಸ್‌ನ ಒಟ್ಟು ಅಂಕಗಳು 700.

ಪರೀಕ್ಷಾರ್ಥಿಗಳು ಪಡೆದ ಅಂಕಗಳನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

## – : ಉನ್ನತ ಶ್ರೇಣಿ :–

| ನೋಂದಣಿ ಸಂಖ್ಯೆ | ಪರೀಕ್ಷಾರ್ಥಿಗಳ ಹೆಸರು | ಪಡೆದ ಅಂಕಗಳು | ಶೇಕಡಾವಾರು |
|---|---|---|---|
| 0130 | ಮಲ್ಲಪ್ಪ ಬಸವಣ್ಣಿ ಮುಗಳಿ | 596 | 85.14 |
| 0151 | ಕಾಡಯ್ಯ ಗುರುಲಿಂಯ್ಯ ಮಠಪತಿ | 595 | 85.00 |
| 0150 | ಮಲ್ಲಿಕಾರ್ಜುನ ಶೆಟ್ಟೆಪ್ಪಾ ಗುರುಸಿದ್ದನವರ | 594 | 84.86 |
| 0181 | ಶ್ರೀಕಾಂತ ಬರುವೆ | 593 | 84.71 |
| 0139 | ಅಸ್ಲಮ ಕುತುಬುದ್ದಿನ ಅಮ್ಮಣಗಿ | 593 | 84.71 |
| 0162 | ಸಂದೀಪ ಶಿವಪ್ಪಾ ಎಡತ್ತಿನವರ | 593 | 84.71 |
| 0163 | ಸಿದ್ದಗೌಡ ಬಸವಣ್ಣ ಮಲ್ಲಪ್ಪಾ ಹುಲ್ಲೋಳಿ | 593 | 84.71 |
| 0133 | ಗಜಾನನ ಬಸಪ್ಪಾ ಮಂಟೂರ | 589 | 84.14 |
| 0155 | ಮುರುಗೇಶ ಈರಪ್ಪಾ ಹೊನ್ನಾಳಿ | 588 | 84.00 |
| 0131 | ಪ್ರಶಾಂತ ಸಂತ್ರಾಮ ಬರಕಾಳೆ | 587 | 83.86 |
| 0145 | ವಿನೋದ ಶ್ರೀಪಾಲ ಹಲಕರ್ಣಿ | 585 | 83.57 |
| 0112 | ಸಂತೋಷ್ ಎಸ್ ಬಗಲಿ | 584 | 83.43 |
| 0154 | ಪ್ರವೀಣ ಅಶೋಕ ಮನ್ನಿಕೇರಿ | 584 | 83.43 |
| 0127 | ಶ್ರೀಶೈಲ ವಿರುಪಾಕ್ಷಪ್ಪ ಚರಾಟಿ | 583 | 83.29 |
| 0144 | ಬಾಬು ಮೋದಿನಸಾಬ ಅತ್ತಾರ | 581 | 83.00 |
| 0161 | ಸನತ ಅಣ್ಣಾಸಾಹೇಬ ಉಪಾಧ್ಯ | 581 | 83.00 |
| 0132 | ಮಧುಕರ ಅರ್ಜುನ ಬಡಿಗೇರ | 579 | 82.71 |
| 0147 | ಅನಿಲ ಸಿದ್ದಪ್ಪಾ ಅಲಕನೂರ | 579 | 82.71 |

| | | | |
|---|---|---|---|
| 0149 | ಸಮೀರಅಲಿ ಸಿಕಂದರ ಮುಲ್ಲಾ | 578 | 82.57 |
| 0165 | ಮುರಗೇಶ ಸತ್ತಪ್ಪಾ ವಡರಟ್ಟಿ | 578 | 82.57 |
| 0180 | ತೌಸೀಪ ಬಾಗವಾನ | 577 | 82.43 |
| 0157 | ಅನಿಲ ಭೀಮಪ್ಪಾ ಗುಡಸಿ | 575 | 82.14 |
| 0138 | ರವಿಚಂದ್ರ ಶಂಕರ ಗುಡಸಿ | 573 | 81.86 |
| 0156 | ಮಲ್ಲಿಕಾರ್ಜುನ ಬಸಪ್ಪಾ ಹುಣಶ್ಯಾಲ | 572 | 81.71 |
| 0136 | ಸಂತೋಷ ಶಂಕರ ಗುಡಸ | 571 | 81.57 |
| 0153 | ಸಂತೋಷ ಶಿವಪ್ಪಾ ಗುರುಸಿದ್ದನವರ | 571 | 81.57 |
| 0172 | ಮಹಾದೇವ ಕಲ್ಲಪ್ಪಾ ಬರಕಾಳೆ | 571 | 81.57 |
| 0146 | ಶರೀಫ ಸಾಹೇಬ ಜಮಖಂಡಿ | 570 | 81.43 |
| 0159 | ಕುಮಾರಸ್ವಾಮಿ ಆನಂದಯ್ಯ ಕಡಹಟ್ಟಿ | 569 | 81.29 |
| 0177 | ಸವಿತಾ ಹಣಮಂತ ತೇಲಿ | 569 | 81.29 |
| 0160 | ಪ್ರಸಾದ ಶಿವಾನಂಧ ಘಟಪಣವಿ | 567 | 81.00 |
| 0122 | ಗಣಪತಿ ನಾಯ್ಕ | 566 | 80.86 |
| 0124 | ವಿಶ್ವನಾಥ್ ಮಲ್ಲಪ್ಪ ಹಟ್ಟಿ | 566 | 80.86 |
| 0158 | ಶಾಂತು ತವನಪ್ಪ ಮುನ್ನೊಳಿ | 565 | 80.71 |
| 0113 | ಹನಮಂತ ಬಿ ಹುಲಸಗೆರಿ | 563 | 80.43 |
| 0179 | ಠಕ್ಕಪ್ಪಾ ಫಂಡಿ | 563 | 80.43 |
| 0121 | ಭೀಮಪ್ಪಾ ಡಿ. ಹಳಿಂಗಳಿ | 560 | 80.00 |

**– : ಪ್ರಥಮ ಶ್ರೇಣಿ :–**

| ನೋಂದಣಿ ಸಂಖ್ಯೆ | ಪರೀಕ್ಷಾರ್ಥಿಗಳ ಹೆಸರು | ಪಡೆದ ಅಂಕಗಳು | ಶೇಕಡಾವಾರು |
|---|---|---|---|
| 0115 | ಮಾಲಾಶ್ರೀ ಚಿಕ್ಕೋಡಿ | 559 | 79.86 |
| 0143 | ಸುರೇಶ ಭರಮಪ್ಪ ಕುಂಬಾರ | 559 | 79.86 |
| 0128 | ಶಿವಾನಂದ ತುಕಾರಮ ಲಟ್ಟಿ | 558 | 79.71 |
| 0126 | ರುದ್ರಗೌಡ ಬಿರಾಧರ್ | 556 | 79.43 |
| 0164 | ಈಶ್ವರ ಮಲ್ಲಿಕಾರ್ಜುನ ಇಸ್ಲಾಂಪೂರ | 556 | 79.43 |
| 0120 | ಪ್ರವೀಣ್ ಶಿವಪ್ಪಾ ಸಂಕೇಶ್ವರ್ | 554 | 79.14 |
| 0152 | ಪರಶುರಾಮ ದುಂಡಪ್ಪಾ ಕಣಗಲಿ | 553 | 79.00 |
| 0168 | ಸಂದೀಪ ಶರತ ಸಂಸುದ್ದಿ | 553 | 79.00 |
| 0137 | ಈರಪ್ಪಾ ಶಂಕರ ಚೌಗಲಾ | 551 | 78.71 |
| 0174 | ಮಹಾದೇವ ನಿಂಗಪ್ಪ ಅಲಕನೂರ | 551 | 78.71 |
| 0129 | ವಿಶ್ವನಾಥ್ ಪಾವಾಡಯ್ಯ ಪೂಜಾರ | 548 | 78.29 |
| 0118 | ಸುರೇಶ್ ಬಸವಣ್ಣೆ ಗುಂತಕಲ್ | 545 | 77.86 |

| | | | |
|---|---|---|---|
| 0148 | ಅಪ್ಪಾಸಾಹೇಬ ಸತ್ತೆಪ್ಪಾ ತೇರದಾಳ | 545 | 77.86 |
| 0141 | ಅಭಿಷೇಕ ಸತೀಶ ಶಿರಾಳಕರ | 543 | 77.57 |
| 0142 | ಸಂಜಯ ಮಹಾವೀರ ಮುನ್ನೋಳಿ | 539 | 77.00 |
| 0167 | ಮಹಾಂತೇಶ ವಿಶ್ವನಾಥ ಪಟ್ಟಣಶೆಟ್ಟಿ | 539 | 77.00 |
| 0140 | ಶಿವಾನಂದ ಗುರಪ್ಪ ಕತ್ತಿ | 537 | 76.71 |
| 024 | ಪರಿಮಳಾ ಚಾರ್ಯ ಅಗ್ನಿಹೋತ್ರಿ | 536 | 76.57 |
| 0106 | ಸೀತಾರಾಮ್ ಪೂಜಾರಿ ಬಿ. | 536 | 76.57 |
| 0116 | ರಾಘವೇಂದ್ರ ಪತ್ತಾರ್ | 535 | 76.43 |
| 0125 | ಮುನಿಂಗಪ್ಪ ರಾಮಪ್ಪ ಬಾಳಿಗಿಡದ | 535 | 76.43 |
| 02 | ಭರಣಿ ಸಿ. ಗೌಡ | 534 | 76.29 |
| 0169 | ರಾಜು ಬಾಳಪ್ಪ ಗೋಲಭಾಂವಿ | 534 | 76.29 |
| 0111 | ಮಂಗಲ ಆರ್ ಚೋಟಿ | 532 | 76.00 |
| 0170 | ಅಸ್ಲಮ ಸಿಕಂದರ ಬಾಗಿ | 530 | 75.71 |
| 0171 | ಬಾಹುಬಲಿ ಲಕ್ಷ್ಮಣ ಮುನ್ನೋಳ | 530 | 75.71 |
| 0175 | ಶಶಿಧರ ರಾಮಪ್ಪಾ ನಾವಿ | 529 | 75.57 |
| 0166 | ಜಗದೀಶ ಬಸವಣ್ಣೆಪ್ಪಾ ಹುನ್ನೂರ | 526 | 75.14 |
| 0123 | ಅಡಿವೇಶ ಜಮಖಂಡಿ | 524 | 74.86 |
| 038 | ರೇಖಾ ಪಿ ಹೆಗಡೆ | 522 | 74.57 |
| 044 | ಬಸವರಾಜ್ | 519 | 74.14 |
| 040 | ವಿಜಯೇಂದ್ರ | 517 | 73.86 |
| 062 | ವಿನಯ್ ಕೆ. ಎಸ್. | 515 | 73.57 |
| 0117 | ಬಾಬುರಾವ ರಾವುತ್ತಪ್ಪ ಪೂಜಾರಿ | 512 | 73.14 |
| 028 | ಸತೀಶ್ ಪಿ. ಎಂ. | 510 | 72.86 |
| 051 | ರಾಜಾ ಎಂ. ಸಾಲ್ಯಾನ್ | 510 | 72.86 |
| 0110 | ನಾಗೇಶ್ ಪೂಜಾರಿ | 502 | 71.71 |
| 033 | ಲಾವಣ್ಯ ಎ. ಎಲ್. | 498 | 71.14 |
| 045 | ಎಂ. ವೆಂಕಟೇಶಲು | 490 | 70.00 |
| 082 | ಸಿಮೀಮ ಬಿ. | 490 | 70.00 |
| 065 | ಅಭಿಷೇಕ್ ಎಂ. ಎಲ್. | 489 | 69.86 |
| 055 | ನಿತೇಶ್ ಕುಮಾರ್ | 487 | 69.57 |
| 027 | ಎಂ. ಫಯಾಜ್ ಅಹಮದ್ | 482 | 68.86 |
| 030 | ಚೈತನ್ಯ ಕೆ. | 482 | 68.86 |
| 0135 | ಸದಾಶಿವ ಭೀಮಪ್ಪಾ ಹಟ್ಟಿ | 482 | 68.86 |
| 012 | ಪಿ. ಶುಭಾ ಅರಸ್ | 479 | 68.43 |

| | | | |
|---|---|---|---|
| 025 | ಶಶಿಕುಮಾರ್ | 475 | 67.86 |
| 021 | ಮಂಜುನಾಥ್ ಪಂಪ್ವಣ್ಣ | 474 | 67.71 |
| 0105 | ಶಿವಪ್ರಸಾದ್ ಆಚಾರ್ಯ ಕೆ. | 473 | 67.57 |
| 039 | ಹೆಚ್. ಪಿ. ಪ್ರಶಾಂತ್ | 472 | 67.43 |
| 0108 | ನಾರಾಯಣ ಹೆಗಡೆ | 471 | 67.29 |
| 079 | ರಶ್ಮಿ ಪಿ. ಕುಲಕರ್ಣಿ | 469 | 67.00 |
| 072 | ಚಂದನ್ ಎಸ್ ಹಿಪ್ಪರಗಿ | 465 | 66.43 |
| 046 | ರಾಜೇಶ್ ಆರ್. | 463 | 66.14 |
| 056 | ಶಾಂತಾ ನದಂ ಆರ್. | 463 | 66.14 |
| 058 | ಶಿಲ್ಪಾ | 463 | 66.14 |
| 063 | ಈಶ್ವರಯ್ಯ ಎಸ್. | 462 | 66.00 |
| 0107 | ಪ್ರಶಾಂತ್ ಮೊಗವೀರ್ | 462 | 66.00 |
| 011 | ಮಂಜುಳ ರೆಡ್ಡಿ ಜಿ. ವಿ. | 460 | 65.71 |
| 042 | ಶ್ರೀಹರ್ಷಾ ಗೋಪಾಲ ಕೃಷ್ಣ ಹೆಗಡೆ | 459 | 65.57 |
| 069 | ವಿಕ್ಟರ್ ಪ್ರವೀಣ್ | 457 | 65.29 |
| 036 | ರಾಜೇಶ್ ಎಸ್. ಎಸ್. | 456 | 65.14 |
| 0104 | ಕೆಂಪರಾಜು. ಹೆಸ್.ಎಸ್ | 455 | 65.00 |
| 088 | ರವಿಕುಮಾರ್ ಹೆಚ್ ಸಿ | 454 | 64.86 |
| 041 | ಪ್ರಶಾಂತ್ | 453 | 64.71 |
| 071 | ಬಸವಚೇತನ್ ಹಿಪ್ಪರಗಿ | 453 | 64.71 |
| 090 | ಮೋಹನ್ ಶಿವಕುಮಾರ್ ಕೆ. | 453 | 64.71 |
| 0134 | ರಾಜೇಂದ್ರ ಬಾಬುರಾವ್ ಬರಕಾಳೆ | 453 | 64.71 |
| 043 | ರಾಮನಾಥ ಗುಪ್ತ ವಿ. ಎ. | 451 | 64.43 |
| 054 | ರಂಗನಾಥ ಶೆಟ್ಟಿ | 451 | 64.43 |
| 083 | ಚೇತನ್ ಸಿ. | 450 | 64.29 |
| 066 | ಜಯಕುಮಾರ್ ಡಿ. ಆರ್. | 449 | 64.14 |
| 068 | ಶಿವಕುಮಾರ್ | 447 | 63.86 |
| 085 | ಪ್ರೀತಿ  ಎನ್.ಯು. | 445 | 63.57 |
| 0101 | ತಂಗವೇಲು ಆರ್. | 444 | 63.43 |
| 095 | ವೆಂಕಟೇಶ್ ಎನ್. ಆರ್. | 442 | 63.14 |
| 08 | ರವಿಕುಮಾರ್ ವಿ. | 437 | 62.43 |
| 093 | ಮುದ್ದಪ್ಪ | 437 | 62.43 |
| 020 | ಪವಿತ್ರಾ ದೇವಿ ಪಿ. ಅಂಗಡಿ | 433 | 61.86 |
| 037 | ಶೃತಿ ಬಿ. ಸಿ. | 432 | 61.71 |

| | | | |
|---|---|---|---|
| 099 | ಶಿವರಾಘ ಬಿ. ಕೆ. | 431 | 61.57 |
| 015 | ವಿಶು ಕುಮಾರ್ ಜೈನ್ | 430 | 61.43 |
| 091 | ರಾಜಾ ಶ್ರೀರಂಗ ಯಾದವ್ | 429 | 61.29 |
| 03 | ಸಂತೋಷ್ ಎ. | 428 | 61.14 |
| 064 | ಅಶೋಕ್ ಕುಮಾರ್ ಕೆ.ಆರ್. | 424 | 60.57 |
| 094 | ದ್ಯಾಮಣ್ಣ ಗುಂಜಳ | 422 | 60.29 |
| 053 | ನಳಿನಾಕ್ಷಿ ನಾಯಕ್ | 421 | 60.14 |

**– : ದ್ವಿತೀಯ ಶ್ರೇಣಿ :–**

| ನೋಂದಣಿ ಸಂಖ್ಯೆ | ಪರೀಕ್ಷಾರ್ಥಿಗಳ ಹೆಸರು | ಪಡೆದ ಅಂಕಗಳು | ಶೇಕಡಾವಾರು |
|---|---|---|---|
| 060 | ಸುನಿತಾ ಸರಡಗಿ | 417 | 59.57 |
| 029 | ಶಾಂತಾ ಆರ್. | 416 | 59.43 |
| 050 | ತುಳಸಿ ಮಂಜುನಾಥ್ | 413 | 59.00 |
| 016 | ರಾಜೇಶ್ ಆರ್. ಎಸ್. | 408 | 58.29 |
| 070 | ಸುಮಂಜನ ಬಿ. | 408 | 58.29 |
| 07 | ಶರತ್ ಎಸ್. ಸಿ. | 406 | 58.00 |
| 010 | ಧುಮ್ಮನಸೂರ ಕಲ್ಯಾಣ ರಾವ್ | 404 | 57.71 |
| 076 | ಕೆ. ನಾಗರಾಜ್ | 403 | 57.57 |
| 077 | ನಾಗತರ್ನ ಕಮ್ಮಾರ್ | 402 | 57.43 |
| 074 | ರಂಜಿತಾ ಆರ್. ಕೆ. | 401 | 57.29 |
| 086 | ಭವ್ಯ ಹೆಚ್. ಸಿ. | 401 | 57.29 |
| 096 | ಶಂಕರಪ್ಪ ಜೆ. ವಿ. | 400 | 57.14 |
| 075 | ಪವಿತ್ರಾ ಜೆ.ಕೆ | 399 | 57.00 |
| 0103 | ಲಕ್ಷ್ಮೀ ದೇವಿ | 399 | 57.00 |
| 049 | ಸುಶ್ಮಿತಾ ಎ. ಆರ್. | 390 | 55.71 |
| 098 | ಮಲ್ಲೇಶ ಬಿ. ಎನ್. | 390 | 55.71 |
| 01 | ಪುಷ್ಪಶ್ರೀ ಎ.ಸಿ. | 389 | 55.57 |
| 09 | ನಂಧೀಶ್ | 387 | 55.29 |
| 022 | ಗಾಯತ್ರಿ ಬಿ. | 386 | 55.14 |
| 087 | ನಾಗಪೂಜ ಎ. ಎನ್. | 383 | 54.71 |
| 031 | ದರ್ಶಿನಿ | 382 | 54.57 |
| 014 | ನಾಗಲಕ್ಷ್ಮೀ ಜಿ. | 381 | 54.43 |
| 0100 | ಶೇಷಾದ್ರಿ ಜಿ. ಎಸ್. | 380 | 54.29 |
| 013 | ಶ್ರೀನಾಥ್ ಉಡುಪ | 376 | 53.71 |

| | | | |
|---|---|---|---|
| 018 | ಧರ್ಮಾವತಿ ಬಿ. | 376 | 53.71 |
| 0102 | ಹನಮಂತಪ್ಪ | 375 | 53.57 |
| 032 | ರಾಘವೇಂದ್ರ ಸಿ. | 371 | 53.00 |
| 035 | ಶಶಿಕಿರಣ್ | 371 | 53.00 |
| 067 | ವಿರುಪಾಕ್ಷಪ್ಪ ಎಸ್. | 369 | 52.71 |
| 097 | ನೇತ್ರಾವತಿ ಜಿ. ಎಸ್. | 367 | 52.43 |
| 019 | ಸತೀಶ ಟಿ. ಸಿ. | 355 | 50.71 |
| 061 | ಶಶಿಕುಮಾರ್ ಬಿ. ಎಲ್. | 355 | 50.71 |
| 059 | ಜಗದೇವಿ ಎಸ್ ಗುತ್ತಿ | 353 | 50.43 |
| 078 | ಮಂಜುನಾಥ್ ಬಿ.ಜಿ. | 352 | 50.29 |

**– : ಉತ್ತೀರ್ಣ ಶ್ರೇಣಿ :–**

| ನೋಂದಣಿ ಸಂಖ್ಯೆ | ಪರೀಕ್ಷಾರ್ಥಿಗಳ ಹೆಸರು | ಪಡೆದ ಅಂಕಗಳು | ಶೇಕಡಾವಾರು |
|---|---|---|---|
| 05 | ಮಮತ. ಸಿ. ಎಂ. | 343 | 49.00 |
| 081 | ಗೋವಿಂದರಾಜ್ ಬಿ. ಎಸ್. | 343 | 49.00 |
| 023 | ಅರುಣ್ ಎನ್. | 333 | 47.57 |
| 06 | ರಶ್ಮಿ ಆರ್. | 326 | 46.57 |
| 073 | ಶಶಿಕಲಾ ಟಿ | 319 | 45.57 |
| 034 | ವೀರೇಶ್ ಎಸ್. | 316 | 45.14 |
| 0109 | ಮಧುಮತಿ ಬಿ ಬಿರಾಧರ್ | 315 | 45.00 |

## ಸೂಚನೆ :

1. ಈ ಕೆಳಕಂಡ ಕ್ರಮಾಂಕದ ಮುಂದೆ ಬರೆದಿರುವ ಹೆಸರುಗಳ ಪರೀಕ್ಷಾರ್ಥಿಗಳು ಪರೀಕ್ಷೆಗೆ ಹಾಜರಾಗದೇ ಇರುವ ಹಿನ್ನೆಲೆಯಲ್ಲಿ ಅವರನ್ನು ಅನುತ್ತೀರ್ಣರೆಂದು ಘೋಷಿಸಲಾಗಿದೆ.

| ನೋಂದಣಿ ಸಂಖ್ಯೆ | ಪರೀಕ್ಷಾರ್ಥಿಗಳ ಹೆಸರು |
|---|---|
| 4 | ಮುರಳಿ ಎ. ಎಸ್. |
| 17 | ಶುಭೋದಯ ಕೆ. |
| 26 | ವೀರಭದ್ರ ಬಿ. |
| 47 | ವೀರಭದ್ರಪ್ಪ ಕಲ್ಲಮಣಿ |

| | |
|---|---|
| 48 | ಭವ್ಯ ಎ. ವಿ. |
| 52 | ಸಪ್ನ ಎನ್. |
| 57 | ಕೃಷ್ಣ ಮೂರ್ತಿ |
| 80 | ಬಸವರಾಜಪ್ಪ |
| 84 | ಎನ್. ವಿಜಯ ಕುಮಾರ್ |
| 89 | ಸಿದ್ದರಾಮು ಹೆಚ್.ಎಸ್. |

| | |
|---|---|
| 92 | ಪ್ರಾಂಕ್ಲಿನ್ ಫರ್ಟಾಡೋ |
| 114 | ಮರಿಸ್ವಾಮಿ |
| 119 | ಸಿದ್ರಾಮ ಗಣಪತಿ ಚೌಹಾನ್ |
| 173 | ಸಂದೀಪ ಕಲ್ಲಪ್ಪಾ ಪರೀಟ |
| 176 | ಚಂದ್ರಪ್ಪಾ ಬಾಳಪ್ಪ ಚೌಗಲಾ |
| 178 | ಪ್ರಕಾಶ್ ಭಂಡಾರಿ |

2. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಪಡೆದ ಅಂಕಗಳ ಪುನರ್ ಎಣಿಸುವಿಕೆಗೆ ರೂ.300/– ಹಾಗೂ ಉತ್ತರ ಪತ್ರಿಕೆಗಳ ಪುನರ್ ಮೌಲ್ಯ ಮಾಪನಕ್ಕೆ ರೂ.500/–ಗಳನ್ನು ನಿಗದಿ ಪಡಿಸಿದೆ. ಅಗತ್ಯವಿರುವ ಅಭ್ಯರ್ಥಿಗಳು ಸದರಿ ಮೊತ್ತವನ್ನು ಪಾವತಿಸಿ ಅರ್ಜಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

3 ಉತ್ತರ ಪತ್ರಿಕೆಗಳ ನಕಲುಪ್ರತಿ ಬೇಕಾದಲ್ಲಿ ರೂ.500/– ಪಾವತಿಸಿ ಪಡೆಯಬಹುದಾಗಿದೆ.

4. ಅರ್ಜಿಗಳನ್ನು kssfcldcbm@souharda.coop ಇಮೇಲ್ ಐಡಿಗೆ ದಿನಾಂಕ 17ನೇ ಆಗಸ್ಟ್ 2019ರ ಒಳಾಗಾಗಿ ಕಳುಹಿಸತಕ್ಕದ್ದು, ಮೊತ್ತವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು ಕಳುಹಿಸುವ ಮೂಲಕ ಪಾವತಿಸುವುದು.

## "ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್" ಪರೀಕ್ಷೆಯ ಫಲಿತಾಂಶ

| ಪ್ರತಿನಿಧಿ ಸಂಖ್ಯೆ | ಪ್ರತಿನಿಧಿಯ ಹೆಸರು | ಒಟ್ಟು ಪಡೆದ ಅಂಕಗಳು– 200ಕ್ಕೆ | ಶೇಕಡಾವಾರು % | ಶ್ರೇಣಿ |
|---|---|---|---|---|
| 33 | ಶ್ರೀನಿವಾಸ ಹೆಚ್.ಎಸ್. | 159.5 | 79.75 | A |
| 28 | ಸುಮ ಹಿರೇಮಠ | 158 | 79.00 | A |
| 64 | ಬಲರಾಮ | 157 | 78.50 | A |
| 40 | ಪ್ರವೀಣ ಪಾಟೀಲ | 149 | 74.50 | A |
| 49 | ನವೀನ್ ಎಸ್. ಶೇಬ್ಬಣ್ಣನವರ್ | 145 | 72.50 | A |
| 57 | ನೇಹಾ ಆರ್. ಮಲಾಪುರ | 141 | 70.50 | A |
| 25 | ಕವಿತಾ | 140.5 | 70.25 | A |
| 46 | ಮಂಜುಷ್ ಜೆ | 140 | 70.00 | A |
| 32 | ಸಚಿನ್ ಕುಮಾರ್ | 138 | 69.00 | A |
| 36 | ವೈಷ್ಣವಿ ಎನ್. ಆಚಾರ್ | 138 | 69.00 | A |
| 58 | ಕೆ.ಪಿ. ಶ್ರೀಧರ | 137 | 68.50 | A |
| 56 | ವೀರೇಶ್ ವೈ ದಾನಪ್ಪಗೌಡ್ರಾ | 136 | 68.00 | A |
| 11 | ಕಾಟೀ ಮಲ್ಲಯ್ಯ ಎಸ್.ಎಂ. | 134 | 67.00 | A |
| 44 | ಶೃತಿ ಆರ್. ಹಳ್ಳಿ | 134 | 67.00 | A |
| 1 | ರಾಘವೇಂದ್ರ ಬಿ. | 133 | 66.50 | A |
| 52 | ನಟರಾಜ್ ಎಂ.ಎಂ. | 132 | 66.00 | A |
| 62 | ಮಂಜುನಾಥ್ | 132 | 66.00 | A |
| 51 | ವಿಜಯ ಕುಮಾರ್ ಸಿ | 131 | 65.50 | A |
| 34 | ಸ್ಮಿತಾ ವಿ. | 129 | 64.50 | A |
| 38 | ಸಿ. ಮೌನಿಕಾ | 129 | 64.50 | A |
| 53 | ಕಿರಣ ಕುಮಾರ್ ಎಸ್. | 128 | 64.00 | A |
| 61 | ಸಾಯಿಲಕ್ಷ್ಮೀ | 127 | 63.50 | A |
| 43 | ಸುಮಂತ ಪಿ.ಎನ್ | 126 | 63.00 | A |
| 55 | ಕೇಶವ ಎಸ್. ಸಿ. | 126 | 63.00 | A |
| 37 | ಅಜಯ್ ಪಿ.ಎ. | 125 | 62.50 | A |
| 12 | ಪ್ರವೀಣ ರೆಡ್ಡಿ ಕೆ.ಎ. | 124 | 62.00 | A |
| 2 | ಸುರೇಖ ಭಟ್ ಕೆ | 123 | 61.50 | A |
| 41 | ಮಂಜುನಾಥ್ ವಿ. | 123 | 61.50 | A |
| 54 | ಪ್ರಮೀಳಾ ಬಿ. | 122 | 61.00 | A |
| 7 | ವಿನಾಯ ಕುಮಾರ್ ಡಿ. ಎಂ. | 119 | 59.50 | B |

| | | | | |
|---|---|---|---|---|
| 42 | ಶ್ರೀಕಾಂತ್ ಜಿ | 118 | 59.00 | B |
| 18 | ಲಕ್ಷ್ಮಣ ಪಿ | 117 | 58.50 | B |
| 35 | ಸ್ನೇಹ ಎಸ್. | 117 | 58.50 | B |
| 47 | ಕುಮಾರಸ್ವಾಮಿ | 117 | 58.50 | B |
| 21 | ಈಶಮ್ಮ ಡಿ. | 115 | 57.50 | B |
| 30 | ಕಿರಣ ರಾಜಗೌಡಾ ಛಂಡವಾಡೆ | 115 | 57.50 | B |
| 48 | ಸುದರ್ಶನ್ | 115 | 57.50 | B |
| 39 | ಸುಕನ್ಯ ರಾಘವೇಂದ್ರ ಉಪಾಧ್ಯ | 114 | 57.00 | B |
| 15 | ಹರೀಶ್ ಕುಮಾರ್ ಗುಪ್ತಾ | 113 | 56.50 | B |
| 27 | ರುಕ್ಮಿಣಿ ಎನ್. | 112 | 56.00 | B |
| 29 | ಅಜೀತ ದೇವಪ್ಪಾ ಚಿಂಚವಾಡೆ | 112 | 56.00 | B |
| 9 | ಶ್ರೀನಿವಾಸ ಬಿ.ಕೆ. | 111 | 55.50 | B |
| 17 | ಪಲ್ಲವಿ ಹೆಚ್ | 111 | 55.50 | B |
| 65 | ಶ್ರೀದೇವಿ | 111 | 55.50 | B |
| 5 | ಮಧು | 109 | 54.50 | B |
| 6 | ಶಿವಕುಮಾರ್ ನಾಡಿಗ್ ಎನ್ ಎ | 109 | 54.50 | B |
| 24 | ಅಬ್ದುಲ್ ಕರೀಮ್ ಸಾಬ್ | 109 | 54.50 | B |
| 50 | ಸಣ್ಣ ಈರೇಶ | 109 | 54.50 | B |
| 3 | ಮೀನಾಕ್ಷಿ ಪಿ. ವಿ. | 108 | 54.00 | B |
| 14 | ಶರಣಬಸವೇಶ ಬಸಪ್ಪ ಬಿಲಗಿ | 106 | 53.00 | B |
| 22 | ಮೌನೇಶ | 106 | 53.00 | B |
| 19 | ಸೌಂದರ್ಯ | 105 | 52.50 | B |
| 10 | ಸವಿತಾ ಟಿ. | 104 | 52.00 | B |
| 31 | ವಿನೋದ್‌ಕುಮಾರ ದೇವೇಂದ್ರ ಪ್ರಧಾನ | 104 | 52.00 | B |
| 8 | ಸಿದ್ದರಾಮ ಎಂ. | 103 | 51.50 | B |
| 16 | ಶಿವಲಿಂಗಪ್ಪ | 103 | 51.50 | B |
| 20 | ಚನ್ನಬಸವ ಪಾಟೀಲ್ | 103 | 51.50 | B |
| 23 | ವಿನೋದ್ ಕುಮಾರ್ | 103 | 51.50 | B |
| 60 | ರೇಖಾ ಕಂಬಾರ | 102 | 51.00 | B |
| 4 | ಸವಿತಾ | 99 | 49.50 | C |
| 26 | ಅಬ್ದುಲ್ ರಹೀಮ್ | 97 | 48.50 | C |
| 59 | ವಿಜಯ ಕುಮಾರ್ ಜವಳಿ | 97 | 48.50 | C |
| 45 | ಪದ್ಮಾವತಿ ಕೆ. | 94 | 47.00 | C |
| 63 | ಸುಜ್ಞಾನಿ | 89 | 44.50 | C |
| 13 | ಛತ್ರಮ್ಮ | 83 | 41.50 | C |

## ರಡ್ಡೇರ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮ



**ರಾಯಚೂರು :** ರಡ್ಡೇರ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ನೇರವೇರಿಸಿದರು. ಉದ್ಘಾಟನೆಯ ನಂತರ ಮಾತನಾಡಿ, ಹೈದಾರಬಾದ ಕರ್ನಾಟಕ ಭಾಗದಲ್ಲಿ ಸಹಕಾರಿಯು ಇಂತಹ ಕಟ್ಟಡ ಇರಲು ಸಾಧ್ಯವಿಲ್ಲ ಬಹಳ ಉತ್ತಮವಾಗಿ ಕಟ್ಟಡದ ನಿರ್ಮಾಣವನ್ನು ಮಾಡಿದ್ದು ಇಂತಹ ಕಟ್ಟಡವನ್ನು ಉದ್ಘಾಟಿಸಿದ್ದು ನನ್ನ ಭಾಗ್ಯ ಎಂದು ಹೇಳಿ, ಆಡಳಿತ ಮಂಡಲಿ ಪರಿಶ್ರಮ ಮತ್ತು ಸಿಬ್ಬಂದಿಗಳ ಸೇವೆಯಿಂದ ಇಂತಹ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವೆಂದು ತಿಳಿಸಿದರು. ಈಗಾಗಲೇ ಸೌಹಾರ್ದ ಸಹಕಾರಿ ಚಳುವಳಿಯು ಬಹಳ ವೇಗವಾಗಿ ಬೆಳೆಯುತ್ತಿದೆ ಬೆಳೆಯುತ್ತಿರುವ ಕ್ಷೇತ್ರಕ್ಕೆ ಸರ್ಕಾರವು ಪ್ರೋತ್ಸಾಹಿಸಬೇಕೆಂದು ತಿಳಿಸಿದರು. ಅದೇ ರೀತಿ ಕಾಯ್ದೆ ಹಾಗೂ ನಿಯಮಗಳ ತಿದ್ದುಪಡಿ ಸಂದರ್ಭದಲ್ಲಿ ಶಾಸಕರ ಹಾಗೂ ಸಂಸದರ ಸಹಕಾರ ಬಹಳ ಮುಖ್ಯ ಹೀಗಾಗಿ ವೇದಿಕೆ ಮೇಲೆ ಇರುವ ರಾಯಚೂರು ಜಿಲ್ಲಾ ಸಂಸದರಾದ ಶ್ರೀ ರಾಜಾ ಅಮರೇಶ ನಾಯಕರು ಸಹಕರಿಸಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರುಗಳಾದ ಶ್ರೀ ತಿಮ್ಮಯ್ಯ ಶೆಟ್ಟಿ, ಶ್ರೀ ವಿಶ್ವನಾಥ ಹಿರೇಮಠ, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು, ಅನೇಕ ಸಹಕಾರಿಯ ಧುರೀಣರು ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್. ಇವರು ಉಪಸ್ಥಿತರಿದ್ದರು.



ರಡೇರ ಪತ್ತಿನ ಸೌಹಾರ್ದ ಸಹಕಾರಿಯಿಂದ ಮಾನ್ಯ ಅಧ್ಯಕ್ಷರಿಗೆ ಸನ್ಮಾನ

## ಕರಾವಳಿ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮ



**ದಾವಣಗೆರೆ :** ದಿನಾಂಕ 20.07.2019ರಂದು ಕರಾವಳಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಇದರ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮವು ಕುಂದುವಾಡ ರಸ್ತೆ, ದಾವಣಗೆರೆಯಲ್ಲಿ ನಡೆಯಿತು. ಕರಾವಳಿ ಸೌಧದ ಉದ್ಘಾಟನೆಯನ್ನು ಶ್ರೀ ಎಸ್. ಎಸ್ ಪಾಟೀಲ್, ಮಾಜಿ ಸಹಕಾರ ಸಚಿವರು, ಇವರು ನೇರವೇರಿಸಿದರು. ಸಹಕಾರಿಯ ಕಛೇರಿ ಉದ್ಘಾಟನೆಯನ್ನು ಶ್ರೀ ಗುರುನಾಥ ಜ್ಯಾಂತಿಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಹಾಗೂ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೇರವೇರಿಸಿದರು. ಅತಿಥಿ ಗೃಹಗಳ ಉದ್ಘಾಟನೆಯನ್ನು ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೇರವೇರಿಸಿದರು. ಭದ್ರತಾ ಕಪಾಟುಗಳ ಉದ್ಘಾಟನೆಯನ್ನು ಶ್ರೀ ದಕ್ಷಿಣಾಮೂರ್ತಿ ಎಂ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರು ನೇರವೇರಿಸಿದರು. ಕಾರ್ಯಕ್ರಮದ ಸಂಸ್ಥಾಪಕ ಅಧ್ಯಕ್ಷರಾದ ದಿ|| ಡಾ. ಶ್ಯಾಮಸುಂದರ ಶೆಟ್ಟಿ ಇವರ ಭಾವಚಿತ್ರ ಅನಾವರಣವನ್ನು ಶ್ರೀ ಜಿ. ನಂಜನಗೌಡ, ನಿರ್ದೇಶಕರು, ಸಂಯುಕ್ತ ಸಹಕಾರಿ ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿ.ಎ. ಉಮೇಶ ಶೆಟ್ಟಿ ಇವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಎಂ. ಪ್ರಭಾಕರ್ ಶೆಟ್ಟಿ, ಅಧ್ಯಕ್ಷರು, ದಾವಣಗೆರೆ ಚಿತ್ರದುರ್ಗ ಜಿಲ್ಲಾ ಬಂಟರ ಸಂಘ(ರಿ.), ಡಾ. ಶಾರದಾ ಎಸ್. ಶೆಟ್ಟಿ, ಅಧ್ಯಕ್ಷರು, ಕಟ್ಟಡ ಸಮಿತಿ, ದಾವಣಗೆರೆ ಚಿತ್ರದುರ್ಗ ಜಿಲ್ಲಾ ಬಂಟರ ಸಂಘ(ರಿ.) ಹಾಗೂ ಶ್ರೀ ಎಸ್. ಕರುಣಾಕರ ಶೆಟ್ಟಿ, ಗೌರವ ಅಧ್ಯಕ್ಷರು, ದಾವಣಗೆರೆ ಚಿತ್ರದುರ್ಗ ಜಿಲ್ಲಾ ಬಂಟರ ಸಂಘ(ರಿ.) ಇವರು ಉಪಸ್ಥಿತರಿದ್ದರು.

## ಉದ್ಘಾಟನಾ ಕಾರ್ಯಕ್ರಮ



**ದಕ್ಷಿಣ ಕನ್ನಡ :** ದಿನಾಂಕ 31.05.2019ರಂದು ಶ್ರೀ ರಾಮಕ್ಷತ್ರೀಯ ಸೇವಾ ಸಂಘ(ರಿ) ಪುತ್ತೂರು ದಕ್ಷಿಣ ಕನ್ನಡ ಬೆಳ್ಳಿ ಹಬ್ಬದ ಸುಸಂದರ್ಭದಲ್ಲಿ ಸಮಾಜ ಬಾಂಧವರ ನಿರ್ದೇಶನದಲ್ಲಿ ಕ್ಷತ್ರೀಯ ಸೌಹಾರ್ದ ಸಹಕಾರಿ ನಿಯಮಿತ ಇದರ ಉದ್ಘಾಟನೆಯನ್ನು ಶೃಂಗೇರಿಯ ಕಿರಿಯ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂ ಇವರು ನೇರವೇರಿಸಿದರು. ನಂತರ ಮಾತನಾಡಿ ಇಡೀ ಪುತ್ತೂರಿನ ಕ್ಷತ್ರೀಯ ಸಮಾಜವನ್ನು ಒಟ್ಟುಗೂಡಿಸುವುದು ಮಾತ್ರವಲ್ಲ ಇಡೀ ವಿಶ್ವದ ಕ್ಷತ್ರೀಯರನ್ನು ಒಟ್ಟುಗೂಡಿಸಲಿ ಎಂದು ಶುಭಹಾರೈಸಿದರು. ನಂತರ ಸಭಾ ಭವನದಲ್ಲಿ ಗುರುಗಳು ಮಂತ್ರಾಕ್ಷತೆ ನೀಡಿ ಸರ್ವರನ್ನು ಹರಸಿದರು. ಬಳಿಕ ಕ್ಷತ್ರೀಯ ಸಹಕಾರಿಯ ಪ್ರವರ್ತಕರಿಗೆ ಏಕ ಮನಸ್ಸಿನಿಂದ ಕೆಲಸ ನಿರ್ವಹಿಸಿದರೆ ಯಶಸ್ಸು ಖಂಡಿತ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುಬ್ರಮಣ್ಯ ಕೆಮ್ಮಿಂಜೆ, ಉಪಾಧ್ಯಕ್ಷರಾದ ಶ್ರೀ ಕೆ. ಅರುಣ್ ಕುಮಾರ್ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

**ಬೀದರ :** ಭಾರತ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ ನೌಬಾದ ಶಾಖೆಯ ಉದ್ಘಾಟನೆಯನ್ನು ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿ ಚಿದಂಬರಂ ಆಶ್ರಮ ಬೀದರ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಉಪಸ್ಥಿತರಿದ್ದರು.



## 4ನೇ ವಾರ್ಷಿಕೋತ್ಸವ




**ಕೊಪ್ಪಳ :** ದಿನಾಂಕ 23.07.2019 ರಂದು ಗಂಗಾ–ಕಾವೇರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಇರಕಲ್ಲಗಡ, ಕೊಪ್ಪಳ ಸಹಕಾರಿಯ 4ನೇ ವಾರ್ಷಿಕೋತ್ಸವ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಹಾಗೂ ಸಿಬ್ಬಂದಿವರ್ಗ, ಪಿಗ್ಮಿ ಏಜೆಂಟರು ಉಪಸ್ಥಿತರಿದ್ದರು. ಮಳೆ ಬೆಳೆ ಈ ಕಾಲದಲ್ಲಿ ತುಂಬಾ ಕಡಿಮೆಯಾಗಿದ್ದರಿಂದ, ಸಹಕಾರಿಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೂ ಸುಮಾರು 1000 ಸಸ್ಯಗಳನ್ನು ಉಚಿತವಾಗಿ ನೀಡುವ ಮೂಲಕ "ಕಾಡುಯಿದ್ದರೆ ಮಳೆ, ಮಳೆಯಿದ್ದರೆ ಬೆಳೆ", "ಕಾಡುಯಿದ್ದರೆ ನಾಡು, ನಾಡಿದ್ದರೆ ನಾವು", "ನೀ ಉಳಿಸಿದರೆ ನಿಸರ್ಗ, ಇಲ್ಲೇ ನೀ ಕಾಣುವೇ ಸ್ವರ್ಗ", "ಗಿಡ ನೆಟ್ಟು ಬರ ಅಟ್ಟು" ಎಂಬ ಘೋಷಣೆಗಳ ಮೂಲಕ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಪರಿಸರ ಸಂರಕ್ಷಣೆ ಅಭಿವೃದ್ಧಿಗೆ ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

## ಪ್ರಥಮ ವಾರ್ಷಿಕ ಸಾಮಾನ್ಯ ಸಭೆ

**ರಾಯಚೂರು :** ದಿನಾಂಕ 28.07.2019 ರಂದು ವೀರಶೈವ ವಿಕಾಸ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ರಾಯಚೂರು ಇದರ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯನ್ನು ರಾಯಚೂರು ನಗರದ ಪವನ್ ಮ್ಯಾನಷನ್ ಹೋಟೆಲ್ ನಲ್ಲಿ ನಡೆಯಿತು.



# ಸಹ್ಯಾದ್ರಿ ಸೌಹಾರ್ದ ಒಕ್ಕೂಟದಿಂದ ಶರಾವತಿ ಉಳಿಸಿ ಆಂದೋಲನ ಮೆರವಣಿಗೆ




**ಶಿವಮೊಗ್ಗ :** ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳು ಸಹ್ಯಾದ್ರಿ ಸೌಹಾರ್ದ ಒಕ್ಕೂಟ ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎ.ಆರ್. ಪ್ರಸನ್ನ ಕುಮಾರ್ ನೇತೃತ್ವದಲ್ಲಿ ದಿನಾಂಕ 9.07.2019ರಂದು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಶರಾವತಿ ನದಿಯ ನೀರನ್ನು ಬೆಂಗಳೂರಿಗೆ ಕೊಂಡೊಯ್ಯುವ ಅವೈಜ್ಞಾನಿಕ ಯೋಜನೆಯನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸಿ, ಶಿವಮೊಗ್ಗದ 60ಕ್ಕೂ ಹೆಚ್ಚು ಸಹಕಾರಿಗಳು ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಒಕ್ಕೂಟದ ಅಧ್ಯಕ್ಷರಾದ ಬಿ.ಎಸ್. ಅಶ್ವಥ್ ಅವರು ಈ ಯೋಜನೆಯಿಂದ ಮಲೆನಾಡಿನ ಪರಿಸರವೇ ನಾಶವಾಗಿ, ಮಲೆನಾಡು ಬರಡಾಗುವ ದಿನ ದೂರವಿಲ್ಲ ಎಂದು ತಿಳಿಸಿದರಲ್ಲದೆ, ಇಂತಹ ಮಾರಕವಾದ ಯೋಜನೆಯನ್ನು ಕೈಬಿಡಬೇಕೆಂದು ಒತ್ತಾಯಿಸಿದರು. ಸೌಹಾರ್ದ ಸಹಕಾರಿಯ ನಿರ್ದೇಶಕ ಶ್ರೀ ಎ.ಆರ್. ಪ್ರಸನ್ನ ಕುಮಾರ್ ಮಾತನಾಡಿ, ಪ್ರಸ್ತುತ ಸರ್ಕಾರ ಕೈಗೆತ್ತಿಕೊಂಡಿರುವ ಶರಾವತಿ ಯೋಜನೆಯು ನಿರ್ದಿಷ್ಟ ಗುರಿ ಸಾಧಿಸಲು ಸಾಧ್ಯವಾಗದು ಮತ್ತು ಇದಕ್ಕೆ ನಮ್ಮ ರಾಜ್ಯದ ಬೊಕ್ಕಸದಿಂದ ವೆಚ್ಚ ಮಾಡುವ ಹಣದಿಂದ ಆರ್ಥಿಕತೆಯ ಮೇಲೆ ಪರಿಣಾಮ ಬಿರುತ್ತದೆ ಎಂದು ಪ್ರತಿಪಾದಿಸಿದರು. ನಂತರ ಕಲಾವಿದರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಎಂ. ಎನ್. ಸುಂದರ ರಾಜ್ ಮಾತನಾಡಿ, ರಾಜ್ಯ ಸರ್ಕಾರದ ಈ ಯೋಜನೆಯು ಮಲೆನಾಡನ್ನು ಬೆಂಗಾಡು ಮಾಡುವ ಹುನ್ನಾರ ಎಂದು ತಿಳಿಸಿ, ಇಂತಹ ಯೋಜನೆಗಳಿಂದ ಅಪಾರ ಕಾಡು, ರೈತರ ಭೂಮಿ ನಾಶವಾಗುವುದಲ್ಲದೆ, ವಿದ್ಯುಚ್ಛಕ್ತಿಯ ಬಳಕೆ ಹೆಚ್ಚಾಗಿ, ಪರಿಸರ ನಾಶವಾಗುವುದರಲ್ಲಿ ಸಂಶಯವಿಲ್ಲ ಎಂದು ಅಭಿಪ್ರಾಯಪಟ್ಟರು. ನಂತರ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ, ಜಿಲ್ಲೆಯ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಮನವಿ ಪತ್ರವನ್ನು ಸಲ್ಲಿಸಿ, ಸದರಿ ಯೋಜನೆಯನ್ನು ಕೈಬಿಡಬೇಕೆಂದು ಒತ್ತಾಯಿಸಲಾಯಿತು.

# ಶಾಖೆ ಉದ್ಘಾಟನಾ ಕಾರ್ಯಕ್ರಮ



**ದಕ್ಷಿಣ ಕನ್ನಡ :** ಕೆ.ವಿ.ಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸದರಿ ಸಹಕಾರಿಯು ಎಲ್ಲಾ ನೌಕರರ, ವಿದ್ಯಾರ್ಥಿಗಳ ಆಶಯ ಹಾಗೂ ಕನಸುಗಳನ್ನು ಈಡೇರಿಸುವಲ್ಲಿ ತನ್ನ ಸೇವೆಯ ಮೂಲಕ ಯಶಸ್ವಿ 10 ವರ್ಷಗಳನ್ನು ಪೂರೈಸಿದೆ. ಈ ದಶಮಾನೋತ್ಸವ ಸಂದರ್ಭದಲ್ಲಿ ಸಂಸ್ಥೆಯ ಸೇವೆಯನ್ನು ಸಾರ್ವಜನಿಕರಿಗೂ ವಿಸ್ತರಿಸುವ ನಿಟ್ಟಿನಲ್ಲಿ ಜೂನ್ 27ರಂದು ಸುಳ್ಯ ಬಸ್ ನಿಲ್ದಾಣದ ಹತ್ತಿರವಿರುವ ಸೂಂತೋಡು ಎಂಪೋರಿಯಂ ಕಟ್ಟಡದ ನೆಲ ಅಂತಸ್ಥಿನಲ್ಲಿ ಶ್ರೀ ಗಣಪತಿ ಹವನದೊಂದಿಗೆ ಪ್ರಾರಂಭಿಸಲಾಯಿತು. ಸಹಕಾರಿಯ ಸ್ಥಾಪಕ ಅಧ್ಯಕ್ಷರಾದ ಹಾಗೂ ಅಕಾಡಮಿ ಆಫ್ ಲಿಬರಲ್ ಎಜ್ಯೊಕೇಷನ್(ರಿ) ಇದರ ಪ್ರಧಾನ ಕಾರ್ಯದರ್ಶಿಯಾದ ಡಾ. ರೇಣುಕಾ ಪ್ರಸಾದ್ ಕೆ.ವಿ. ಹಾಗೂ ಎಲ್ಲಾ ನಿರ್ದೇಶಕರ ಉಪಸ್ಥಿತಿಯಲ್ಲಿ ನೂತನ ಕಛೇರಿಯಲ್ಲಿ ಕಟ್ಟಡದ ಮಾಲೀಕರಾದ ಸೂರಯ್ಯ ಸೂಂತೋಡು ಇವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಸಂಸ್ಥೆಯ ಉಪಾಧ್ಯಕ್ಷರಾದ ಚಿದಾನಂದ ಬಾಳಿಲ ಇವರು ಸಹಕಾರಿಯ ಹತ್ತು ವರ್ಷಗಳ ಬೆಳವಣಿಗೆ ಹಾಗೂ ಸಾಧನೆಗಳ ಬಗ್ಗೆ ಮಾತನಾಡಿ ಸ್ವಾಗತಿಸಿದರು. ಸಹಕಾರಿ ಸೌಲಭ್ಯಗಳಾದ ನಿರಖು ಠೇವಣಿ, ಅವರ್ತಿಕ ಠೇವಣಿ, ಕೆ.ವಿ.ಜಿ ಕ್ಯಾಶ್ ಸರ್ಟಿಫಿಕೇಟ್, ಗೃಹ ಮತ್ತು ಭದ್ರತಾ ಸಾಲ, ಜಾಮೀನು ಅಡವು ಸಾಲ, ವಾಹನ ಸಾಲ, ಚಿನ್ನಾಭರಣ ಈಡಿನ ಸಾಲ ಮತ್ತು ಭಾಪ ಕಾಗದ ಸೌಲಭ್ಯಗಳ ಬಗ್ಗೆ ಸಹಕಾರಿಯ ಸ್ಥಾಪಕಾಧ್ಯಕ್ಷರಾದ ಡಾ. ರೇಣುಕಾ ಪ್ರಸಾದ್ ಕೆ.ವಿ ಯವರು ವಿವರಣೆ ನೀಡಿ ಇದರ ಪ್ರಯೋಜನವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕಾಗಿ ಈ ಸಂದರ್ಭದಲ್ಲಿ ತಿಳಿಸಿದರು.

ಸಮಾರಂಭದ ಕೊನೆಯಲ್ಲಿ ಸೂರಯ್ಯರವರನ್ನು ಸಹಕಾರಿ ಅಧ್ಯಕ್ಷರಾದ ಡಾ. ರೇಣುಕಾ ಪ್ರಸಾದ್ ರವರು ಶಾಲು ಹೊದಿಸಿ ಫಲ ಪುಷ್ಪ ಸ್ಮರಣಿಕೆಯೊಂದಿಗೆ ಸನ್ಮಾನಿಸಿದರು.

## ನೀರಿನ ಸಂರಕ್ಷಣೆಯ ಕುರಿತು ಉಪನ್ಯಾಸ ಕಾರ್ಯಕ್ರಮ



**ಶಿವಮೊಗ್ಗ :** ಸಮೃಧ್ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿಯಮಿತ, ಶಿವಮೊಗ್ಗ ದ ವತಿಯಿಂದ ರೈತರಿಗೆ, ಸಾರ್ವಜನಿಕರಿಗೆ ದಿನಾಂಕ 20.07.2019 ಶನಿವಾರ ದಂದು ನೀರಿನ ಸಂರಕ್ಷಣೆಯ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಉಪನ್ಯಾಸಕರಾಗಿ ಡಾ॥ ದೇವರಾಜ್ ರೆಡ್ಡಿ ಎಸ್ ಜೆ, ಜಲ ಭೂ ವಿಜ್ಞಾನ ಮತ್ತು ಮಳೆ ಕೊಯ್ಲು ಸಲಹೆಗಾರರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಉಪನ್ಯಾಸಕರಾದ ಡಾ. ಎಸ್ ಜೆ, ದೇವರಾಜ ರೆಡ್ಡಿ, ರೈತ ಮುಖಂಡರಾದ ಬಸವರಾಜ್, ಜಿಲ್ಲಾ ಸೌಹಾರ್ದ ಸಹಕಾರಿಯ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಶ್ವಥ್ ಸಿ. ರವರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ಜಿ ಎಸ್, ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ್ ಕೆ ಎಸ್ ರವರು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ರಾಜಶೇಖರ್ ಕೆ ಎಂ, ಹಾಗೂ ಆಡಳಿತ ಮಂಡಳಿಯ ಸದಸ್ಯರು, ರೈತರು, ಸಾರ್ವಜನಿಕರು ಉಪಸ್ಥಿತರಿದ್ದರು.

## ಅಂತರಾಷ್ಟ್ರೀಯ ಯೋಗ ದಿನಾಚರಣೆ




**ಬೆಂಗಳೂರು :** ದಿನಾಂಕ 21.06.2019ರಂದು ಮುಂಜಾನೆ 6 ಗಂಟೆಗೆ ಕರ್ನಾಟಕ ವೀರಶೈವ ಸೌಹಾರ್ದ ಕೋ-ಆಪರೇಟಿವ್ ಲಿ., ಹಾಗೂ ಶ್ರೀ ವಿನಾಯಕ ಮಿತ್ರ ಮಂಡಲಿಯ ಸಹಯೋಗದಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಾಗರಭಾವಿ ಬಿಡಿಎ ಕಾಂಪ್ಲೆಕ್ಸ್ ಆವರಣದಲ್ಲಿ ಅಚರಿಸಲಾಯಿತು.

ಕಾರ್ಯಕ್ರಮಕ್ಕೆ ಯೋಗಾ ಗುರುಗಳಾದ ಪ್ರೊಫೆಸರ್ ಶ್ರೀ ವಿದ್ವಾನ್ ಚಂದ್ರಶೇಖರ ರವರ ಮಾರ್ಗದರ್ಶನದಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಸಾಹಿತಿಗಳಾದ ಶ್ರೀ ನಿಡಸಾಲೆ ಪುಟ್ಟಸ್ವಾಮಯ್ಯ ನವರು ಭಾಗವಹಿಸಿ ಯೋಗದ ಕುರಿತು ಮತ್ತು ಆರೋಗ್ಯದ ಕುರಿತು ಮಾತನಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಆರ್ ಸದಾಶಿವಯ್ಯ ಜರಗನಹಳ್ಳಿ ರವರು ಮಾತನಾಡಿ ಸಂಸ್ಥೆಯ ಬಗ್ಗೆ ಮತ್ತು ಇದರ ಉಪಯೋಗವನ್ನು ಪಡೆದುಕೊಳ್ಳುವ ಬಗ್ಗೆ ಮತ್ತು ಠೇವಣಿಗಳನ್ನು ಹೂಡಿಕೆ ಮಾಡಲು ಬಗ್ಗೆ ಮಾಹಿತಿ ನೀಡಿದರು.

## 9ನೇ ವಾರ್ಷಿಕ ಸಾಮಾನ್ಯ ಸಭೆ




**ಕಲಬುರಗಿ :** ದಿನಾಂಕ 29.07.2019 ರಂದು ವೀರಶೈವ ಲಿಂಗಾಯತ ಸೌಹಾರ್ದ ಪತ್ತಿನ ಸಹಕಾರಿ ನಿ., ಸೇಡಂ, ಇದರ 9ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಪೂಜ್ಯ ಶ್ರೀ ಸದಾಶಿವ ದೇವರು ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

## ಆಯ್ಕೆ



**ಶಿವಮೊಗ್ಗ :** ದಿನಾಂಕ 02.06.2019ರಂದು ಶ್ರೀ ಹರ ಪಂಚಮಸಾಲಿ ಸೌಹಾರ್ದ ಸಹಕಾರಿಯ ನಿಯಮಿತ, ಶಿಕಾರಿಪುರ ಸದರಿ ಸಹಕಾರಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಬಸವರಾಜಪ್ಪ ಬಿ.ಹೆಚ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಕಲ್ಲೇಶಪ್ಪ ವೈ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

# ಶ್ರೀ ವಿನಾಯಕ ಸೌಹಾರ್ದ ಸಹಕಾರಿಯ 15 ನೇ ವಾರ್ಷಿಕ ಸಾಮಾನ್ಯ ಸಭೆ



**ಉತ್ತರ ಕನ್ನಡ :** ಶ್ರೀ ವಿನಾಯಕ ಸೌಹಾರ್ದ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 13.07.2019ರಂದು ಸಿದ್ದಾಪುರದಲ್ಲಿ ನಡೆಯಿತು. ಸಹಕಾರಿಯು 2018–19ನೇ ಸಾಲಿನಲ್ಲಿ ಸಹಕಾರಿಯು 11500 ಸದಸ್ಯರನ್ನು ಹೊಂದಿದ್ದು, ರೂ.70.24 ಲಕ್ಷ ಗಳ ನಿವ್ವಳ ಲಾಭ ಗಳಿಸಿರುತ್ತದೆ. ಪ್ರಸಕ್ತ ಸಾಲಿನಲ್ಲಿ ತನ್ನ ಕಾರ್ಯಕ್ಷೇತ್ರವನ್ನು ಕರ್ನಾಟಕ ರಾಜ್ಯ ವ್ಯಾಪ್ತಿಗೆ ವಿಸ್ತರಿಸಿಕೊಂಡಿರುತ್ತದೆ. ವರದಿ ಸಾಲಿನಲ್ಲಿ 29.25 ಕೋಟಿ ದುಡಿಯುವ ಬಂಡವಾಳವನ್ನು ಕ್ರೋಢೀಕರಿಸಿಕೊಂಡು ಸಮಾನ ಮನಸ್ಕ ನಿರ್ದೇಶಕ ಮಂಡಳಿ ಮತ್ತು ನಿಷ್ಠಾವಂತ ಸಿಬ್ಬಂದಿಗಳ ಸಹಯೋಗದೊಂದಿಗೆ ಸಂಸ್ಥೆ ಉತ್ತಮ ಸೇವೆ ನೀಡುತ್ತಾ ಬಂದಿರುತ್ತದೆ.

ಈಗಾಗಲೇ ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ, ಶಿರಸಿ, ಹಾಗೂ ಭಟ್ಕಳ ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರ ಗಳಲ್ಲಿ ಸಹಕಾರಿಯ ಶಾಖೆಗಳು ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಶಾಖೆಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಹೊಂದಿರುತ್ತದೆ. ಈ ಸಾಲಿನಲ್ಲಿಯೂ ಕೂಡಾ ಸದಸ್ಯರ ಶೇರು ಹಣದ ಮೇಲೆ 20% ಡಿವಿಡೆಂಡ್ ಘೋಷಿಸಿದೆ.

ಈ ಸಭೆಯಲ್ಲಿ ಸುಮಾರು 350 ಕ್ಕೂ ಹೆಚ್ಚು ಸದಸ್ಯರು ಹಾಜರಿದ್ದು, ಸಭೆಯಲ್ಲಿ ಪರಿಶೋಧಿತ ಲೆಕ್ಕಪತ್ರಗಳು, ಅಂದಾಜು ಅಯ–ವ್ಯಯ, ಕಾರ್ಯಯೋಜನೆಗಳು, ಉಪವಿಧಿ ತಿದ್ದುಪಡಿ ಹಾಗೂ ಇನ್ನಿತರ ತಃಖ್ತೆ ಮತ್ತು ಪ್ರಸ್ತಾವನೆಗಳಿಗೆ ಅನುಮೋದನೆ ಪಡೆಯಲಾಯಿತು.

ಸಭೆಯಲ್ಲಿ ಉಪಸ್ಥಿತರಿದ್ದ ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ, ಸಾಗರ ಇವರು ಆರ್ಥಿಕ ಶಿಸ್ತಿನ ಕುರಿತು ತಿಳಿಸಿದರು. ಹಾಗೂ ಆದಾಯ ತೆರಿಗೆ ಮತ್ತು ಪ್ರಸ್ತುತದ ಕಾನೂನು ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಉತ್ತಮ ಮಾರ್ಗದರ್ಶನ ನೀಡಿದರು. ಸಭೆಯನ್ನು ನಾಡಗೀತೆಯೊಂದಿಗೆ ಪ್ರಾರಂಭಿಸಿ ಸಾಮೂಹಿಕ ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

# ಸಹಕಾರಿ ಸಂಸ್ಥೆಗಳಿಂದ ವ್ಯವಹಾರಿಕ ಜ್ಞಾನದ ಮಟ್ಟ ಹೆಚ್ಚಾಗುತ್ತದೆ – ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ



**ಜಮಖಂಡಿ :** ಚಂದ್ರೋದಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಜಮಖಂಡಿ ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಜೀಗಳು ನೇರವೇರಿಸಿದರು. ನಂತರ ಮಾತನಾಡಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಜನರಿಗೆ ಆರ್ಥಿಕ ಭದ್ರತೆ ಒದಗಿಸುವ ಜೊತೆಗೆ ವ್ಯವಹಾರಿಕ ಜ್ಞಾನ ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿದೆ. ಸಹಕಾರಿ ಸಂಸ್ಥೆಗಳು ಯಶಸ್ವಿಯಾಗಲು ಸಹಕಾರ ಅಗತ್ಯವೆಂದು ಶ್ರೀಗಳು ಹೇಳಿದರು. ಸಹಕಾರಿ ಸಂಸ್ಥೆಯಲ್ಲಿನ ಪದಾಧಿಕಾರಿಗಳು ಸಂಸ್ಥೆಯನ್ನು ಉತ್ತಮ ನಿರ್ವಹಣೆಯಿಂದ ನಡೆಸಿಕೊಂಡು ಬಂದರೆ ಸಹಕಾರಿ ಸಂಸ್ಥೆ ಹೆಚ್ಚು ಉಪಯೋಗಕ್ಕೆ ಬರುವ ಜೊತೆಗೆ ಇತರೆ ಸಹಕಾರ ಸಂಸ್ಥೆಗಳಿಗೆ ಮಾದರಿಯಾಗುತ್ತದೆ ಎಂದು ತಿಳಿಸಿದರು.

ಸಹಕಾರಿ ಸಂಸ್ಥೆ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಜನರಿಗೆ ಅಭಿವೃದ್ಧಿಗೆ ಅವಶ್ಯವಾಗಿದ್ದು ಇದರಲ್ಲಿ ಶೇರು ಪಡೆದಿರುವ ಗ್ರಾಹಕರು ಅವಶ್ಯ ಅನುಗುಣವಾಗಿ ಸಾಲ ತೆಗೆದುಕೊಂಡು ಅವಧಿಯೊಳಗೆ ಸಾಲ ಮರುಪಾವತಿ ಮಾಡಬೇಕು. ಇದರಿಂದ ಸಹಕಾರಿ ಸಂಸ್ಥೆಗಳು ಬೆಳವಣಿಗೆಯಾಗುತ್ತದೆ. ಇದರಿಂದ ಗ್ರಾಹಕರ ಆದ್ಯತೆಗಳು ಈಡೇರುತ್ತವೆ. ಒಳ್ಳೆಯ ರೀತಿಯ ಆಡಳಿತ ಮಾಡಿಕೊಂಡು ಮುನ್ನಡೆಯುವ ಜೊತೆಗೆ ಹೆಚ್ಚು ಹಣ ಉಳಿತಾಯ ರೂಪದಲ್ಲಿ ಬರುತ್ತದೆ ಎಂದರು. ಸಹಕಾರಿ ಸಂಸ್ಥೆಗಳಲ್ಲಿ ವ್ಯವಹಾರ ಮಾಡುವುದರಿಂದ ಉಳಿತಾಯ ಮನೋಭಾವನೆ ಬೆಳೆಯುತ್ತದೆ. ಇದರಿಂದ ಆರ್ಥಿಕವಾಗಿ ಸದೃಡವಾಗಿ ಸ್ವಾವಲಂಬಿ ಜೀವನ ಸಾಗಿಸಲು ಅನುಕೂಲವಾಗುತ್ತದೆ ಎಂದರು.

# 4ನೇ ವಾರ್ಷಿಕ ಮಹಾಸಭೆ ಹಾಗೂ ಇ–ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮ



**ಹುಬ್ಬಳ್ಳಿ :** ಕುಂಭಕಲ್ಪ ಸೌಹಾರ್ದ ಸಹಕಾರಿ ನಿಯಮಿತ, ಹುಬ್ಬಳ್ಳಿ ಇದರ 4ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 21.07.2019 ರ ರವಿವಾರ ಮುಂಜಾನೆ 10.30 ಘಂಟೆಗೆ "ದುರ್ಗಾ ಬಾಂಕ್ವೆಟ್ ಹಾಲ್" ಬಾಲಾಜಿ ಕಾಂಪ್ಲೆಕ್ಸ್, ಜೈ ಭಾರತ ಸರ್ಕಲ್, ಕಮರಿಪೇಟ ಹುಬ್ಬಳ್ಳಿಯಲ್ಲಿ ನೇರವೇರಿತು.

ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಬಸವರಾಜಪ್ಪರವರು ಮತ್ತು ಉಪಾಧ್ಯಕ್ಷರಾದ ಶ್ರೀ ಬಸವರಾಜ ತಿ. ಅರಳಿಕಟ್ಟಿ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ವಿಶೇಷವಾಗಿ ಆಗಮಿಸಿದಂತಾ ಶ್ರೀ ಚಂದ್ರಕಾಂತ ಪಡಚಣ್ಣವರ, ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಶ್ರೀ ಪ್ರಭಯ್ಯ ಹಿರೇಮಠ, ಜಿಲ್ಲಾ ಸಂಯೋಜಕರು, ಸಂಯುಕ್ತ ಸಹಕಾರಿ, ಬೆಳಗಾವಿ ವಿಭಾಗ ಮತ್ತು ಸಹಕಾರಿಯ ಲೆಕ್ಕ ಪರಿಶೋಧಕರಾದ ಶ್ರೀ ಸಂಜೀವಕುಮಾರ ಹಾದಿಮನಿಯವರು ಉಪಸ್ಥಿತರಿದ್ದರು. ಈ ಶುಭ ವೇಳೆಯಲ್ಲಿ ಸಹಕಾರಿಯು ಹೊಸದಾಗಿ ಪ್ರಾರಂಭಿಸಿದ ಇ–ಸ್ಟಾಂಪಿಂಗ್ ಉದ್ಘಾಟನೆಯನ್ನು ಶ್ರೀ ಚಂದ್ರಕಾಂತ ಪಡಚಣ್ಣವರ, ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೆರವೇರಿಸಿದರು.



**ಚಾಮರಾಜನಗರ :** ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ.



**ಉಡುಪಿ :** ಪೆರ್ಡೂರು ಬಂಟರ ಸೌಹಾರ್ದ ಸಹಕಾರಿಯ ಪ್ರಥಮ ವಾರ್ಷಿಕ ಸಾಮಾನ್ಯ ಸಭೆ.



**ಬೆಂಗಳೂರು :** ದಿನಾಂಕ 19.07.2019 ರಂದು ಶ್ರೀಕಾಂತ ಪತ್ತಿನ ಸೌಹಾರ್ದ ಸಹಕಾರಿಯ ಇ–ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮ.



**ಯಾದಗಿರಿ :** ತಾಲ್ಲೂಕು ನೇಕಾರರ ಸೌಹಾರ್ದ ಸಹಕಾರಿ ನಿಯಮಿತ ಸುರಪೂರ ಸದರಿ ಸಹಕಾರಿ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ




**ಕಲಬುರಗಿ :** ಶ್ರೀ ವೀರಗಣೇಶ ಸೌಹಾರ್ದ ಸಹಕಾರಿ ನಿಯಮಿತ ಇದರ ವಾರ್ಷಿಕ ಸಾಮಾನ್ಯ ಸಭೆ ದಿನಾಂಕ 23.06.2019ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಶರಣಪ್ಪ ಜಿ. ಕರುಟಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಅಲ್ಲಮ ಪ್ರಭು ಪಾಟೀಲ, ಮಾಜಿ ವಿಧಾನ ಪರಿಷತ್ತಿನ ಸದಸ್ಯರು, ಶ್ರೀ ಸೂರ್ಯಕಾಂತ ಆರ್, ಕಾನೂನು ವ್ಯವಸ್ಥಾಪಕರು, ಕಲಬುರಗಿ ಪ್ರಾಂತ, ಶ್ರೀ ಕೆ ಎಚ್ ಸೀತಾಳೆ, ನಿವೃತ್ತ ತಹಸೀಲ್ದಾರರು, ಗಣೇಶ ಮಂದಿರದ ಟ್ರಸ್ಟಿನ ಅಧ್ಯಕ್ಷರು ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಶಿವಪೂಜಪ್ಪ ಬುಜರಕೆ ಉಪಸ್ಥಿತರಿದ್ದರು.

## ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕ ಮಹಾಸಭೆ



**ಉತ್ತರ ಕನ್ನಡ :** ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಸದಾಶಿವಗಡ, ಕಾರವಾರ ಇದರ 5 ನೇ ವಾರ್ಷಿಕ ಸರ್ವಸಾಧಾರಣ ಸಭೆಯು ದಿನಾಂಕ 21–07–2019ರಂದು ಬೆಳಿಗ್ಗೆ 10.00 ಘಂಟೆಗೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಸದಾಶಿವಗಡ ಗ್ರಾಮದ ಪುರುಷೋತ್ತಮ ಸಭಾಂಗಣದಲ್ಲಿ ನಡೆಯಿತು.

ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ದೀಕ್ಷಾ ಕಲ್ಗುಟಕರ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಿಂಗರಾಜ ಕಲ್ಗುಟಕರ್ ಹಾಗೂ ನಿರ್ದೇಶಕರ ನೇತೃತ್ವದಲ್ಲಿ ನಡೆದ ಸಭೆಯು ಸಹಕಾರಿಯು ಬೆಳೆದು ಬಂದ ಹಾದಿಯ ಕುರಿತು ವಿಮರ್ಷಿಸಿ, ಆಡಳಿತ ಮಂಡಳಿಯ ಮಾರ್ಗದರ್ಶನ, ಸಿಬ್ಬಂದಿಗಳ ಪರಿಶ್ರಮ ಹಾಗೂ ಶೇರುದಾರ ಸದಸ್ಯರ ವಿಶ್ವಾಸದಿಂದ 2018–19 ರ ಆರ್ಥಿಕ ವರ್ಷದಲ್ಲಿ ಡೆಪಾಸಿಟ್ ಸಂಗ್ರಹಣೆಯು ರೂ. 20ಲಕ್ಷ ಹೊಂದಿದ್ದು, ರೂ. 22 ಲಕ್ಷ ಲಾಭ ಗಳಿಸಿದೆ ಎಂದು ಹರ್ಷವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳನ್ನು ಪ್ರೋತ್ಸಾಹಿಸಲು ಚಿತ್ರಕಲಾ ಹಾಗೂ ಪ್ರಬಂಧ ಸ್ಪರ್ದೆಯನ್ನು ಆಯೋಜಿಸಿ, ಬಹುಮಾನ ವಿತರಿಸಲಾಯಿತು. ಅದೇ ರೀತಿ ಸಹಕಾರಿಯ ಸಿಬ್ಬಂದಿಗಳಲ್ಲಿ ಉತ್ತಮ ಬಾಂಧವ್ಯ ಹೊಂದಲು ಹಾಗೂ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ವಿವಿಧ ಸ್ಪರ್ದೆಗಳನ್ನು ಏರ್ಪಡಿಸಿ ಬಹುಮಾನ ನೀಡಲಾಯಿತು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಕಾರವಾರದ ರಾಮಕೃಷ್ಣ ಆಶ್ರಮದ ಮೇಲ್ವಿಚಾರಕರಾದ ಶ್ರೀ ಭಾವೇಶಾನಂದ ಸ್ವಾಮೀಜಿ, ಶಿರ್ಶಿ ಅರ್ಬನ್ ಕೋ–ಆಪರೇಟಿವ್ವ್ ಬ್ಯಾಂಕ್ ಲಿ., ಕಾರವಾರ, ಶಾಖಾ ವ್ಯವಸ್ಥಾಪಕರಾದ ಶ್ರೀ ಬಾಲಚಂದ್ರ ಕುವಾಳೇಕರ್, ಕಾರವಾರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಕಾರವಾರ ಶಾಖಾ ವ್ಯವಸ್ಥಾಪಕರಾದ ಶ್ರೀ ಅನಿಲ್ ಕಲ್ಗುಟ್ಕರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಸರಸ್ವತಿ ಸೌಹಾರ್ದ ಸಹಕಾರಿಯ 10ನೇ ವಾರ್ಷಿಕ ಮಹಾಸಭೆ



**ತೀರ್ಥಹಳ್ಳಿ :** ಸರಸ್ವತಿ ಸೌಹಾರ್ದ ಸಹಕಾರಿಯ ಹತ್ತನೇ ಸರ್ವಸದಸ್ಯರ ಸಭೆ ದಿನಾಂಕ 20.07.2019 ರ ಶನಿವಾರ ತೀರ್ಥಹಳ್ಳಿಯ ಶ್ರೀ ಗಾಯಿತ್ರಿ ಮಂದಿರದಲ್ಲಿ ನಡೆಯಿತು. ಬೆಳಿಗ್ಗೆ ಸಹಕಾರಿಯ ಸರ್ವಸದಸ್ಯರ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರ ಮತ್ತು ತಾಲ್ಲೂಕಿನ ಹಿರಿಯ ಸಹಕಾರಿಗಳು ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರ ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಸಂದೇಶ್ ಜವಳಿ ಇವರು ಸ್ವಾಗತಿಸಿದರು. ಸರ್ವಸದಸ್ಯರ ಸಭೆಯಲ್ಲಿ ಸಹಕಾರಿಯ 70 ವರ್ಷ ಮೇಲ್ಪಟ್ಟ ಸದಸ್ಯರುಗಳಿಗೆ ಮತ್ತು ಹಿರಿಯ ಸಹಕಾರಿಯಾದ ಶ್ರೀ ನಾಗರಾಜ್ ಶೆಟ್ಟಿ ಇವರಿಗೆ ಗೌರವಿಸಲಾಯಿತು. ಸಹಕಾರಿಯು 16,97,023 ಲಕ್ಷ ಲಾಭ ಗಳಿಸಿದ್ದು, ಶೇ12ರಂತೆ ಸದಸ್ಯರಿಗೆ ಲಾಭಾಂಶ ವಿತರಿಸಲು ಸಭೆಯು ಒಪ್ಪಿಗೆ ಸೂಚಿಸಿತು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಚ್ಯುತ್‌ನಾಯಕ್ ಬಿ.ಎಸ್. ರವರು ಕಾರ್ಯಕ್ರಮ ನಿರೂಪಿಸಿದರು. ನಿರ್ದೇಶಕರಾದ ಶ್ರೀ ಕಿರಣ್ ಶೆಣೈರವರು ಸರ್ವರನ್ನೂ ವಂದಿಸಿದರು.



**ಹುಬ್ಬಳ್ಳಿ :** ಹೊಂಬೆಳಕು ಸೌಹಾರ್ದ ಸಹಕಾರಿಯ 2ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣವರ ಇವರು ನೇರವೇರಿಸಿದರು.



**ಕಲಬುರಗಿ :** ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ 2ನೇ ವರ್ಷದ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿ ಇವರು ನೇರವೇರಿಸಿದರು.

## ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಮಹಾಸಭೆ




**ಶಿರಸಿ :** ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ,. ಶಿರಸಿ ಇದರ 4ನೇ ವರ್ಷದ ಸರ್ವ ಸಾಧಾರಣ ಸಭೆಯನ್ನು ದಿನಾಂಕ 20.07.2019 ರಂದು ಮಧ್ಯಾಹ್ನ 3.30 ಕ್ಕೆ ಶಿರಸಿಯ ಟಿ.ಎಮ್.ಎಸ್ ಸಭಾಭವನದಲ್ಲಿ ನಡೆಯಿತು. ಸಭೆಯ ಉದ್ಘಾಟನೆಯನ್ನು ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರೂ ಮತ್ತು ಶ್ರೀ ಮಾರಿಕಾಂಬ ದೇವಸ್ಥಾನದ ಧರ್ಮದರ್ಶಿ ಮಂಡಳಿಯ ಅಧ್ಯಕ್ಷರಾದ ಡಾ. ವೆಂಕಟೇಶ ನಾಯ್ಕ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ ಬಡ ಕೂಲಿಕಾರ್ಮಿಕ ಕುಟುಂಬದ ಮಹಿಳೆ ಕೂಡ ತನ್ನ ಬೇಕು ಬೇಡಗಳ ಬಗ್ಗೆ ಸ್ವಂತ ತೀರ್ಮಾನಿಸುವ ಸಾಮರ್ಥವನ್ನು ಹೊಂದಿಗಾಗ ಮಾತ್ರ ನಮಗೆ ನಿಜವಾದ ಸ್ವಾತಂತ್ರ್ಯ ಬಂದಂತೆ. ಸಹಕಾರಿಗಳು ಸದಸ್ಯರ ಆರ್ಥಿಕ ಸ್ವಾವಲಂಬನೆಗೆ ವೇದಿಕೆಯಾಗಿ ನಿಲ್ಲಬೇಕು. ಈ ನಿಟ್ಟಿನಲ್ಲಿ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಉತ್ತಮವಾದ ಕಾರ್ಯವನ್ನು ಮಾಡುತ್ತಿದೆ. ಸದಸ್ಯರ ಅವಶ್ಯಕತೆಗಳನ್ನು ಗಮನಿಸಿ ಜಿಲ್ಲೆಯಲ್ಲಿಯೇ ಪ್ರಥಮವಾಗಿ ಸೌಹಾರ್ದ ಸಹಕಾರಿಯೊಂದು ಸದಸ್ಯರಿಗೆ ಎ.ಟಿ.ಎಮ್ ಸೇವೆಯನ್ನು ನೀಡಲು ಅಣಿಯಾಗಿರುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ. ಅತ್ಯಂತ ಹಿಂದುಳಿದ ಕೂಲಿಕಾರ್ಮಿಕ ಕುಟುಂಬದ ಸದಸ್ಯರೇ ಹೆಚ್ಚಾಗಿರುವ ಸಹಕಾರಿ ಸತತವಾಗಿ ನಾಲ್ಕು ವರ್ಷಗಳಲ್ಲಿ ಲಾಭದಾಯಕವಾಗಿ ಮುನ್ನಡೆಯುತ್ತಾ ಸದಸ್ಯರಿಗೆ ಅವಶ್ಯಕ ಸೇವೆಯನ್ನು ನೀಡುತ್ತಾ ಬಂದಿದೆ. ಸದಸ್ಯರು ಇದರ ಅನುಕೂಲತೆಯನ್ನು ಪಡೆದು ತಮ್ಮ ಆರ್ಥಿಕ ಶಕ್ತಿಯನ್ನು ಹೆಚ್ಚಿಕೊಳ್ಳಬೇಕು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಅವರು ಸಹಕಾರಿಯಿಂದ ಪ್ರಾರಂಭಿಸಲಾದ ಮೈಕ್ರೋ ಎ.ಟಿ.ಎಮ್ ಸೇವೆ ಚಾಲನೆ ನೀಡಿದರು.

ಸಹಕಾರಿಯು 31 ಮಾರ್ಚ್ 2019 ರ ಅಂತ್ಯಕ್ಕೆ ಒಟ್ಟೂ 4838 ಸದಸ್ಯರನ್ನು ಹೊಂದಿದೆ. ಈ ವರ್ಷದಿಂದ ಹಾವೇರಿ ಶಾಖೆಯಲ್ಲಿ ಇ–ಸ್ಟಾಂಪಿಂಗ್ ಸೇವೆಯನ್ನು ಪ್ರಾರಂಭಿಸುವ ಕುರಿತು ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಶಿರಸಿ ಶಾಖೆಯಲ್ಲಿ ಮೈಕ್ರೋ ಎ.ಟಿ.ಎಮ್ ಸೇವೆಯನ್ನು ಸಹ ತಮ್ಮೆಲ್ಲರ ಅನುಮೋದನೆಯೊಂದಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.



## ಆರ್.ಡಿ. ಸೋನಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯಿಂದ ಗಿಡ ನೆಡುವ ಕಾಯಕ್ರಮ

**ಹೊಸಪೇಟೆ :** ಆರ್.ಡಿ.ಸೋನಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಹೊಸಪೇಟೆ ಸಹಕಾರಿಯು 101 ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳಲಾಗಿದ್ದು ಸದರಿ ಕಾರ್ಯಕ್ರಮಕ್ಕೆ ಹೊಸಪೇಟೆಯ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ. ಲಿಯಾಖತ್ ಅಲಿರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು.

## 10ನೇ ವಾರ್ಷಿಕ ಸಾಮಾನ್ಯ ಸಭೆ



**ಬೆಂಗಳೂರು :** ದಿನಾಂಕ 28.07.2019 ರಂದು ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯು ಬಿ. ಅರಸೋಜಿರಾವ್ ಕಲ್ಯಾಣ ಮಂಟಪ, ಮಿನರ್ವ ಸರ್ಕಲ್ ಹತ್ತಿರ, ವಿ.ವಿ.ಪುರಂ ನಲ್ಲಿ ನಡೆಯಿತು. ಸಾಮಾನ್ಯ ಸಭೆಯಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಸನ್ಮಾನಿಸಲಾಯಿತು. ಸದರಿ ವರ್ಷದಲ್ಲಿ ಸದಸ್ಯರಿಗೆ ಶೇ.18 ರಂತೆ ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು.

# ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ 19ನೇ ವಾರ್ಷಿಕ ಮಹಾಸಭೆ




## ಬಡವರ ವಿಕಾಸ ಸಹಕಾರದ ಧ್ಯೇಯ – ಗುರುನಾಥ ಜ್ಯಾಂತಿಕರ

**ಬೀದರ** : ದಿನಾಂಕ 28.07.2019ರಂದು ಭಾನುವಾರ ಮೋಹನ್ ಮಾರ್ಕೆಟ್‌ನಲ್ಲಿರುವ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿ ಬಡ, ಕೂಲಿಕಾರರ ಹಾಗೂ ಕೆಳಮಟ್ಟದ ಕಾರ್ಮಿಕರ ಅಭಿವೃದ್ಧಿ, ಉದ್ದಾರವೇ ಸಹಕಾರ ಸಂಸ್ಥೆಗಳ ಧ್ಯೇಯವಾಗಬೇಕು ಎಂದು ಕಲ್ಯಾಣ ಪತ್ತಿನ ಸಹಕಾರಿಯ ಅಧ್ಯಕ್ಷ ಗುರುನಾಥ ಜ್ಯಾಂತಿಕರ ಹೇಳಿದರು ಹಾಗೂ ಇನ್ನೊಬ್ಬರಿಗೆ ಸಹಾಯಹಸ್ತ ಚಾಚುವ ಕೆಲಸ ಸಹಕಾರಿ ಸಂಸ್ಥೆಗಳು ಮಾಡಬೇಕು. ಪ್ರಸ್ತುತ ಈ ಸಹಕಾರಿಗಳು ಸ್ಪರ್ಧೆಗಳಿದಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಸಮಭಾವ ಸಮಬಾಳು ಸಹಕಾರ ಸಂಸ್ಥೆಗಳ ಉದ್ದೇಶವಾಗಿದೆ ಎಂದರು. ಸದರಿ ಸಹಕಾರಿಯ ನಿರ್ದೇಶಕರು ಭಾಗವಹಿಸಿದ ಸದಸ್ಯರುಗಳಿಗೆ ಕನಿಷ್ಠ ವ್ಯವಹಾರ, ಸದಸ್ಯ ಸೇವೆಗಳನ್ನು ಬಳಸಿ ಕೊಳ್ಳದಿದ್ದರೆ ಆಗುವ ಪರಿಣಾಮಗಳು ಮತ್ತು ಸಹಕಾರಿಯ ಅಭಿವೃದ್ಧಿಯಲ್ಲಿ ಸದಸ್ಯರ ಪಾತ್ರದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಬಸವರಾಜು ಸ್ವಾಮಿ, ನಿರ್ದೇಶಕರಾದ ಪ್ರತಾಪ ತಂಬಾಕೆ, ಚಂದ್ರಪ್ಪ ಬಿರಾದರ, ದೀಪಾ ಅಗರವಾಲ್, ರೋಮಾದೇವಿ ಹುಡೇದ್ ಇದ್ದರು. ವಾರ್ಷಿಕ ವರದಿ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಶಿವರಾಜ ಹೂಗಾರ ಉಪಸ್ಥಿತರಿದ್ದರು. ರಾಜಕುಮಾರ ಧುಮ್ಮನಸೂದೆ ನಿರೂಪಣೆ ಮಾಡಿದರು. ನಿರ್ದೇಶಕ ಪ್ರೊ. ಎಸ್. ಬಿ. ಸಜ್ಜನಶೆಟ್ಟಿ ಸ್ವಾಗತಿಸಿದರು.

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಹಾಗೂ ಪದವಿಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಉತ್ತಮ ಗ್ರಾಹಕರಾದ ಭೀಮಾಶಂಕರ ಅಂಬಲಗಿ, ರಾಮಸಿಂಗ್ ರಾಠೋಡ್, ಶಂಕರಲಾಲ್ ಅಗರವಾಲ್, ಓಂಕಾರ ಶಿವಕಾಂತ, ಶಿವಾನಿ ಶಿವರಾಜ, ಬಾಬುರಾವ ರಾಚಪ್ಪ, ಶಶಿಕಾಲಾ ಬಾರೋಳೆ ಅವರನ್ನು ಸನ್ಮಾನಿಸಲಾಯಿತು.



**ಎಂಬಿಬಿಎಸ್ ಪ್ರವೇಶಕ್ಕೆ ಆರ್ಥಿಕ ತೊಂದರೆ ಎದುರಿಸುತ್ತಿದ್ದ ಔರಾದ್ ತಾಲ್ಲೂಕಿನ ಯನಾಗುಂದಾ ಗ್ರಾಮದ ಬಡ ಪ್ರತಿಭಾನ್ವಿತ ಶಿವಾನಿಗೆ ಬೀದರ್‌ನ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು 10 ಸಾವಿರ ರೂ ಚೆಕ್ ನೀಡಿ ಪ್ರೋತ್ಸಾಹಿಸಲಾಯಿತು.**

---



**ಬೆಳಗಾವಿ** : ದಿನಾಂಕ 07.07.2019ರಂದು ನಡೆದ ದಿ. ಲಕ್ಷ್ಮೀಬಾಯಿ ಕುಂಬಾರ ಮಹಿಳಾ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಂಚಣಿ ಇದರ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಸುಮಿತ್ರಾ ಶ್ರೀಪಾಲ ಇವರು ವಹಿಸಿದರು. ಶ್ರೀ ಮ.ನಿ.ಪ್ರ ಅಲ್ಲಮಪ್ರಭು ಮಹಾಸ್ವಾಮಿಗಳು ಸಾಮಾನ್ಯ ಸಭೆಗೆ ಚಾಲನೆ ನೀಡಿದರು. ಸಭೆಯಲ್ಲಿ ಶ್ರೀ ಶಿವಶರಣ ಕುಂಬಾರ ಗುಂಡಯ್ಯನವರ ಸ್ಮರಣೋತ್ಸವ ಆಚರಿಸಲಾಹಿತು. ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆಗೈದ ಸದಸ್ಯರ ಮಕ್ಕಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆಗೈದವರಿಗೆ ಪ್ರತಿಬಾ ಪುರಸ್ಕಾರ ಮಾಡಲಾಯಿತು. ಸಭೆಯಲ್ಲಿ 439 ಸದಸ್ಯರು ಹಾಜರಿದ್ದರು.



**ಬೆಳ್ತಂಗಡಿ** : ವಾಣಿ ಸೌಹಾರ್ದ ಸಹಕಾರಿಯ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಸಹಕಾರಿ ಕಾಯ್ದೆಯ ವಿಶೇಷತೆ ಮತ್ತು ಸದಸ್ಯರ ಭಾಗವಹಿಸುವಿಕೆಯ ಕುರಿತಾದ ವಿವರ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯ ಪ್ರವರ್ತಕರಾದ ಶ್ರೀ ಹೆಚ್. ಪದ್ಮಗೌಡ ಹಾಗೂ ಸಹಕಾರಿಯ ನಿರ್ದೇಶಕರು ಉಪಸ್ಥಿತರಿದ್ದರು.



**ಮೂಡಬಿದಿರೆ** : ನವಚೇತನ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ

## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ವಾರ್ಷಿಕ ಸಾಮಾನ್ಯ ಮಹಾಸಭೆ



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಇದರ 2018–19ರ ವಾರ್ಷಿಕ ಮಹಾಸಭೆಯ ದಿನಾಂಕ 27–07–2019ರ ಶನಿವಾರ ಅಪರಾಹ್ನ 3.30ಕ್ಕೆ ನೈವೇದ್ಯ ಹೋಟೇಲಿನ 'ಅನುಗ್ರಹ ಸಭಾಂಗಣ'ದಲ್ಲಿ ಒಕ್ಕೂಟದ ಅಧ್ಯಕ್ಷರಾದ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್ ಕೆ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ನಂತರ ಇವರು ಮಾತನಾಡಿ ಸೌಹಾರ್ದ ಸಹಕಾರಿಗಳು ದೇಶದ ಬೆಳವಣಿಗೆಗೆ ಸಹಕಾರ ನೀಡುತ್ತಿವೆ. ಜೊತೆಗೆ ಸೌಹಾರ್ದ ಒಕ್ಕೂಟ ಮತ್ತು ಸಂಯುಕ್ತ ಸಹಕಾರಿಯ ಜಿಲ್ಲಾ ಕಛೇರಿ ಒಂದೇ ಸೂರಿನಡಿ ಸ್ವಂತ ಕಟ್ಟಡಕ್ಕೆ ಹೋಗುವ ಆಲೋಚನೆಯಿದ್ದು, ಸದಸ್ಯ ಸಹಕಾರಿಗಳ ಸಹಕಾರವು ಅಗತ್ಯವೆಂದರು. ಮುಂದಿನ ದಿನಗಳಲ್ಲಿ ಜಿಲ್ಲಾ ಒಕ್ಕೂಟದ ಅಧಿಕಾರಿಯೇ ಮಾರಾಟಾಧಿಕಾರಿಯಾಗಿ ನೇಮಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದರು ಈಗಾಗಲೇ ಜಿಲ್ಲಾ ಒಕ್ಕೂಟವು ವಿವಿಧ ತರಬೇತಿಗಳನ್ನು ನೀಡುತ್ತಿದ್ದು, ಈ ತರಬೇತಿಯ ಅಂತ್ಯದವರೆಗೂ ಇದ್ದು ತರಬೇತಿ ಕಾರ್ಯಕ್ರಮದ ಯಶಸ್ವಿಗೆ ಕಾರಣರಾಗಬೇಕು ಎಂದರು. ಈ ಸಂದರ್ಭ ಶ್ರೀರಾಮ ಸೌಹಾರ್ದ ಸಹಕಾರಿ ನಿ., ಇದರ ಅಧ್ಯಕ್ಷರಾದ ರಾಜು ಪೂಜಾರಿ ಮತ್ತು ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಇದರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಗಣೇಶ್ ನಾಯಕ್ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಸಭೆಯಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಮಧುಸೂದನ ನಾಯಕ್ ನಿರ್ದೇಶಕರುಗಳಾದ ಬಿ.ಎಚ್ ಶೆಟ್ಟಿಗಾರ್, ಭಾಸ್ಕರ್ ಕಾಮತ್, ಮೋಹನ್ ಉಪಾಧ್ಯ, ಗಿರೀಶ್ ಪೈ. ಬಿ, ಸುಧಾಕರ್ ಕೆ ಮೂಲೂರು, ಶಿರಿಯಾರ ಪ್ರಭಾಕರ ನಾಯಕ್, ವಿನಾಯಕ ರಾವ್ ಮತ್ತು ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭುವನೇಶ್ ಪ್ರಭು, ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ವಿಜಯ ಬಿ.ಎಸ್ ಉಪಸ್ಥಿತರಿದ್ದರು.

## ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಮಹಾಸಭೆ



**ಉಡುಪಿ :** ದಿನಾಂಕ 28.07.2019 ರಂದು ನಿರ್ಮಾಣ್ ವಿವಿದೋದ್ಧೇಶ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ಹೋಟೇಲ್ ನೈವೇದ್ಯದ ಅನುಗ್ರಹ ಸಭಾಂಗಣದಲ್ಲಿ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಚಿ ನಿತ್ಯಾನಂದ ನಾಯಕ್ ವಹಿಸಿದರು. ನಂತರ ಮಾತನಾಡಿ ಸಹಕಾರಿಯು ರೂ. 8 ಕೋಟಿ 53 ಲಕ್ಷ ಅಧಿಕ ವ್ಯವಹಾರ ನಡೆಸಿ ರೂ. 28.04 ಲಕ್ಷ ಲಾಭಗಳಿಸಿದೆ ಎಂದು ಹೇಳಿದರು. ಸಹಕಾರಿಯ ಸದಸ್ಯರಿಗೆ ಶೇ. 17% ಲಾಭಾಂಶವನ್ನು ಘೋಷಿಸಿದರು. ಸದಸ್ಯರ ಪ್ರಶ್ನೆಗೆ ಉತ್ತರಿಸುತ್ತಾ ಮಾತನಾಡಿ 2019–20ನೇ ಸಾಲಿನಲ್ಲಿ ಸಹಕಾರಿ ಸದಸ್ಯರಿಗೆ ಈಗಾಗಲೇ ಆರ್.ಟಿ.ಸಿ ನೀಡುತ್ತಿದ್ದು ಸದುಪಯೋಗ ಪಡೆಯಲು ಕರೆ ನೀಡಿದರು. ಸದ್ಯದಲ್ಲೇ ಇ–ಸ್ಟಾಂಪಿಂಗ್ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುವುದೆಂದು ತಿಳಿಸಿದರು. ಉಪಾಧ್ಯಕ್ಷರಾದ ಬಿ. ಮಧುಸೂದನ ನಾಯಕ್ ಅವರು ಮಾತನಾಡಿ ಆಡಳಿತ ಮಂಡಳಿಯು ಹೊಸ ಚಿಂತನೆಯೊಂದಿಗೆ ಸಹಕಾರಿಯ ಸದಸ್ಯರಿಗೆ ತರಬೇತಿ ಕಾರ್ಯಗಾರ ಹಮ್ಮಿಕೊಳ್ಳಲಿದೆ ಎಂದು ತಿಳಿಸಿದರು. ಸಹಕಾರಿಯ ಅಭಿವೃದ್ಧಿಯ ಬಗ್ಗೆ ಬೆಳಕು ಚೆಲ್ಲಿದರು. ಸಹಕಾರಿಯ ನಿರ್ದೇಶಕರಾದ ಶ್ರೀ ರಮನಾಥ್ ನಾಯಕ್, ಶ್ರೀ ದೇವದಾಸ್ ಪ್ರಭು, ಶ್ರೀ ವಸಂತ ಕುಮಾರ್ ನಾಯಕ್, ಶ್ರೀ ರಮಾನಂದ ನಾಯಕ್, ಶ್ರೀ ಸುಂದರ ಪ್ರಭು, ಶ್ರೀ ವಿವೇಕಾನಂದ ನಾಯಕ್, ಶ್ರೀ ದಯಾನಂದ ನಾಯಕ್, ಲೆಕ್ಕ ಪರಿಶೋದಕರಾದ ಶ್ರೀ ಗಿರೀಶ್ ಪೈ ಬಿ. ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್, ಇವರು ಉಪಸ್ಥಿತರಿದ್ದರು.

## ವನ ಮಹೋತ್ಸವ ಕಾರ್ಯಕ್ರಮ



**ಕೊಪ್ಪಳ :** ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ, ಕೊಪ್ಪಳ ಸಹಕಾರಿಯ ವತಿಯಿಂದ ವನಮಹೋತ್ಸವ ಕಾರ್ಯಕ್ರಮ ಮಾಡಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯಿತಿ ಸದಸ್ಯರಾದ ವೀರಣ್ಣ ಕಾಸನಕಂಡಿ, ಮಂಜುನಾಥ ಪಾಟೀಲ್ ಮತ್ತು ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು, ಸಿಬ್ಬಂದಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಉಚಿತ ಹೊಲಿಗೆ ತರಬೇತಿ ಶಿಬಿರ



**ಕೊಪ್ಪಳ :** ದಿನಾಂಕ 23.07.2019 ರಂದು ಶುಭಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ, ಗಿಣಿಗೇರಿ, ಕೊಪ್ಪಳ ಸಹಕಾರಿಯ ವತಿಯಿಂದ ಬಡ ಕುಟುಂಬದ ಮಹಿಳೆಯರಿಗೆ ಉಚಿತ ಹೊಲಿಗೆ ತರಬೇತಿ ಶಿಬಿರದ ಉದ್ಘಾಟನೆಯನ್ನು ಮಾಡಲಾಯಿತು. ಈ ಶಿಬಿರದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿರವರು ವಹಿಸಿದ್ದರು. ಈ ತರಬೇತಿ ಕಾರ್ಯಕ್ರಮದ ಮೂಲಕ ಮಹಿಳೆಯರಿಗೆ ಸ್ವಾವಲಂಬನೆ ಮತ್ತು ಸ್ವಯಂ ಉದ್ಯೋಗಕ್ಕೆ ಪ್ರೇರಣೆಯಾಗುವ ಮೂಲಕ ಸಭೆಯಲ್ಲಿ ಶಿಬಿರಾರ್ಥಿಗಳು ಹಾಗೂ ಆಡಳಿತ ಮಂಡಳಿಯವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರುಗಳಾದ ಶ್ರೀ ಕೃಷ್ಣ ಈಳಿಗೇರ್ ಇವರು ವಂದಿಸಿದರು.

## 1 ನೇ ವಾರ್ಷಿಕೋತ್ಸವ



**ಕೊಪ್ಪಳ :** ದಿನಾಂಕ 11.07.2019 ರಂದು ಶ್ರೀ ಗುರು ಸೃಷ್ಠಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ ಸದರಿ ಸಹಕಾರಿಯ 1ನೇ ವಾರ್ಷಿಕೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶರಾವ್ ಕುಲಕರ್ಣಿ ರವರು ವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ ರವರು ನೇರವೇರಿಸಿದರು.

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಶಿವರುದ್ರಪ್ಪ
ಅಧ್ಯಕ್ಷರು

**ಹಾಸನ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾಜಿ ನಿರ್ದೇಶಕರಾದ ಹಾಗೂ ಪುಷ್ಪಗಿರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಶಿವರುದ್ರಪ್ಪ ನವರು 31ನೇ ಜುಲೈ 2019ರಂದು ವಿಧಿವಶರಾಗಿದ್ದಾರೆ. ಶ್ರೀಯುತರ ನಿಧನಕ್ಕೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಂತಾಪ ಸಭೆ ನಡೆದು ಶ್ರೀಯುತರ ಆತ್ಮಕ್ಕೆ ಶಾಂತಿ ಕೋರಲಾಯಿತು.



ಡಾ. ಟಿ.ಟಿ. ಹೆಗಡೆ
ಅಧ್ಯಕ್ಷರು

**ಉತ್ತರ ಕನ್ನಡ :** ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿದ್ದ ಡಾ.ಟಿ.ಟಿ. ಹೆಗಡೆಯವರು (85) ದಿನಾಂಕ 28–07–2019 ರಂದು ಅನಾರೋಗ್ಯದಿಂದ ನಿಧನರಾದರು. ವೃತ್ತಿಯಲ್ಲಿ ವೈದ್ಯರೂ, ಪ್ರವೃತ್ತಿಯಲ್ಲಿ ಉತ್ತಮ ಕೃಷಿಕರಾಗಿ, ಜನಾನುರಾಗಿಯಾಗಿದ್ದರು. 52 ವರ್ಷಗಳ ದೀರ್ಘಕಾಲ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 'ಸಹಕಾರಿ ರತ್ನ', 'ಹವ್ಯಕ ರತ್ನ', ಸೇರಿದಂತೆ ಅನೇಕ ಸನ್ಮಾನಗಳು, ರಾಜ್ಯದ/ ಜಿಲ್ಲೆಯ ಅನೇಕ ಸಹಕಾರಿ ಸಂಸ್ಥೆಗಳು, ಸಂಘ ಸಂಸ್ಥೆಗಳಿಂದ ಶ್ರೀಯುತರಿಗೆ ಸಂದಿವೆ.

ಶ್ರೀಯುತರ ಆತ್ಮಕ್ಕೆ ಶಾಂತಿ ಕೋರಿ ದಿನಾಂಕ 29–07–2019 ರಂದು ಸಹಕಾರಿ ಕಾರ್ಯಾಲಯದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸುಬ್ರಾಯ ನಾರಾಯಣ ಭಟ್ಟರವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

## ಭೇಟಿ



**ಮಂಗಳೂರು** : ದಿನಾಂಕ: 11.07.2019ರಂದು ನೂತನವಾಗಿ ನೋಂದಣಿಗೊಂಡ ಏಳಿಂಜೆ ಸೌಹಾರ್ದ ಸಹಕಾರಿಯ ಕಛೇರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರು ಭೇಟಿ ನೀಡಿದರು.

ಭೇಟಿಯ ನಂತರದಲ್ಲಿ ಸಹಕಾರಿಯ ನಿರ್ದೇಶಕರನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಮಂಜುನಾಥ್ ಎಸ್. ಕೆ. ಇವರು ಸಹಕಾರಿಯ ನೋಂದಣಿಯ ಕುರಿತಂತೆ ಸಹಕಾರಿಯ ಎಲ್ಲಾ ನಿರ್ದೇಶಕರನ್ನು ಅಭಿನಂದಿಸಿದರು. ಸಹಕಾರಿಯ ನೋಂದಣಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ. ಯೋಗೀಶ್ ರಾವ್ ಇವರು ತಮ್ಮ 80ನೇ ವಯಸ್ಸಿನಲ್ಲೂ 12 ಲಕ್ಷ ಶೇರು ಸಂಗ್ರಹಣೆ ಮಾಡಿ ಸೌಹಾರ್ದ ಸಹಕಾರಿಯನ್ನು ನೋಂದಾಯಿಸಿರುವ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಜೊತೆಗೆ ಏಳಿಂಜೆಯಂತಹ ಗ್ರಾಮೀಣ ಪ್ರದೇಶದಲ್ಲಿ ಸೌಹಾರ್ದ ಸಹಕಾರಿಯನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಪ್ರದೇಶದ ಜನರಿಗೆ ಆರ್ಥಿಕ ಕೊಡುಗೆ ನೀಡುವ ನಿಟ್ಟಿನಲ್ಲಿ ಕ್ರಮವಿಟ್ಟಿರುವುದು ಶ್ಲಾಘನೀಯ. ಹಾಲು ಉತ್ಪಾದನಾ ಸಹಕಾರ ಸಂಘಗಳ ಸದಸ್ಯರಿಗೆ ಅಗತ್ಯ ಸಾಲ ಸೌಲಭ್ಯ ನೀಡುವ ಮೂಲಕ ಮಾದರಿ ಸಂಸ್ಥೆಯಾಗಿ ಬೆಳೆಯಲಿ ಮತ್ತು ಗ್ರಾಮದ ಸರ್ವತ್ತೋಮುಖ ಬೆಳೆವಣಿಗೆಯಲ್ಲಿ ಸೌಹಾರ್ದ ಸಹಕಾರಿಯ ಪಾತ್ರ ವಹಿಸುವಂತಾಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ. ಯೋಗೀಶ್ ರಾವ್, ನಿದೇಶಕರುಗಳಾದ ಶ್ರೀ ವೈ.ವಿ.ಗಣೇಶ್ ಭಟ್, ಶ್ರೀಮತಿ ಪ್ಲಾವಿಯ ಡಿ'ಸೋಜಾ, ಶ್ರೀ ಮತಿ ಕೌಸಲ್ಯ ಶೆಟ್ಟಿ, ಶ್ರೀ ವಲೇರಿಯನ್ ಡಿ'ಕೊಸ್ತ, ಶ್ರೀ ರಾಮದಾಸ ಶೆಣೈ, ನಂದಿನಿ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶಶಿಧರ ಶೆಟ್ಟಿ ಕೆ., ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾಧ್ ಬಂಗೇರ, ಶ್ರೀ ವಿಜಯ್ ಬಿ.ಎಸ್ ಉಪಸ್ಥಿತರಿದ್ದರು.

## ತರಬೇತಿ ಕಾರ್ಯಕ್ರಮ



**ಹುಬ್ಬಳ್ಳಿ** : ಸಂಯುಕ್ತ ಸಹಕಾರಿಯ ಮಾರ್ಗದರ್ಶನದಡಿಯಲ್ಲಿ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ನವನಗರ, ಹುಬ್ಬಳ್ಳಿ ಇದರ ಆಡಳಿತ ಮಂಡಳಿಯ ನಿರ್ದೇಶಕರಿಗೆ, ಸಿಬ್ಬಂದಿಗಳಿಗೆ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಕೃಷಿ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು, ಇದರ ಕಾರ್ಯದರ್ಶಿಗಳಿಗಾಗಿ ಒಂದು ದಿನದ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಚಂದ್ರಕಾಂತ ಪಡಚಣ್ಣವರ ಇವರು ನೆರವೇಸಿದರು. ಕಾರ್ಯಕ್ರಮದ ಉಪನ್ಯಾಸಕರಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಸಹಕಾರಿಗಳಲ್ಲಿ ವೃತ್ತಿ ಸಂಸ್ಕೃತಿಯನ್ನು ಹಾಗೂ ಶ್ರೀ ಹರೀಶ್. ಆರ್ ಇವರು ಜೀವನ ಸಬಲತೆಯ ಬಗ್ಗೆ ತರಬೇತಿಯನ್ನು ನೀಡಿದರು.




**ಬೆಂಗಳೂರು** : ಪದ್ಮಶಾಲಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಚಾಮರಾಜಪೇಟೆ, ಬೆಂಗಳೂರು ಸೌಹಾರ್ದ ಸಹಕಾರಿಯ 15ನೇ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್. ಕೃಷ್ಣಮೂರ್ತಿರವರ ಅಧ್ಯಕ್ಷತೆಯಲ್ಲಿ ಜರುಗಿತು.




**ಚಾಮರಾಜನಗರ** : ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಇದರ 4ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಬಾಲಸುಬ್ರಹ್ಮಣ್ಯ ಇವರು ವಹಿಸಿದರು. ವಾರ್ಷಿಕ ಮಹಾಸಭೆಯಲ್ಲಿ ಪ್ರತಿಭಾವಂತ ವಿದ್ಯಾಥಿಗಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಹಕಾರಿಯ ಪ್ರಸಕ್ತ ಸಾಲಿನಲ್ಲಿ 18.24 ಲಕ್ಷ ರೂ ನಿವ್ವಳ ಲಾಭಗಳಿಸಿದೆ.

# ಸಿದ್ದಾಪುರ ತಾಲ್ಲೂಕಿನ ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್‌ನ ಯಶೋಗಾಥೆ

**ಸಹಕಾರಿಯ ಪ್ರಾರಂಭ :**

ನಮ್ಮ ಸಹಕಾರಿಯು ದಿನಾಂಕ 19–10–2004 ರಂದು ಸಿದ್ದಾಪುರ ತಾಲೂಕಾ ವ್ಯಾಪ್ತಿಯಲ್ಲಿ ಕೇವಲ 500 ಸದಸ್ಯರೊಂದಿಗೆ ಪ್ರಾರಂಭವಾಗಿದ್ದು, ಇಂದು ಸಹಕಾರಿಯ ಒಟ್ಟೂ ಸದಸ್ಯರ ಸಂಖ್ಯೆ 11500 ಕ್ಕೂ ಹೆಚ್ಚಿದೆ. ಇದು ತನ್ನ ಕಾರ್ಯಕ್ಷೇತ್ರವನ್ನು ಇದೀಗ ಕರ್ನಾಟಕ ರಾಜ್ಯ ವ್ಯಾಪ್ತಿಗೆ ವಿಸ್ತರಿಸಿಕೊಂಡಿದ್ದು, ಉತ್ತಮ ಸೇವೆ ನೀಡುತ್ತಾ ಬರುತ್ತಿದೆ. ನಮ್ಮ ಸಹಕಾರಿಯು ಆರ್ಥಿಕವಾಗಿ, ಕಾನೂನಾತ್ಮಕವಾಗಿ, ಸಮಾಜಮುಖಿಯಾಗಿ ಹಾಗೂ ಸಹಕಾರ ತತ್ವಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿದೆ.

- ದಿನಾಂಕ 19–10–2004 ರಂದು ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ. ಹೆಸರಿನಲ್ಲಿ ಸಿದ್ದಾಪುರ ಜೋಗ ರಸ್ತೆ ವಿಳಾಸದಲ್ಲಿ ಕಾರ್ಯಾರಂಭ.
- ಸಹಕಾರಿಯು ಸಿದ್ದಾಪುರದಲ್ಲಿ ಪ್ರಧಾನ ಕಛೇರಿಯನ್ನು ಹೊಂದಿ, ಶಿರಸಿ, ಭಟ್ಕಳ, ಸಾಗರ ಮತ್ತು ಸಿದ್ದಾಪುರ ಗಳಲ್ಲಿ 4 ಶಾಖೆಗಳನ್ನು ಈಗಾಗಲೇ ಹೊಂದಿರುತ್ತದೆ.
- ಸಂಸ್ಥೆಯ ಪ್ರಧಾನ ಕಛೇರಿ ಮತ್ತು ಎಲ್ಲಾ ಶಾಖೆಗಳು ಸುಸಜ್ಜಿತವಾದ ಕಟ್ಟಡದಲ್ಲಿ ವ್ಯವಹರಿಸುತ್ತಿದ್ದು, ಸ್ವಂತ ಕಟ್ಟಡ ಹೊಂದುವಷ್ಟು ಆರ್ಥಿಕ ಸದೃಢತೆಯನ್ನು ಹೊಂದಿದೆ ಹಾಗೂ ಈ ಸಂಬಂಧ ನಿಧಿಯನ್ನು ತೆಗೆದಿರಿಸಲಾಗಿದೆ.
- ಸಹಕಾರಿಯಲ್ಲಿ ಪ್ರಸ್ತುತ 35 ರಷ್ಟು ಸಿಬ್ಬಂದಿಗಳು ಸೇವೆ ಸಲ್ಲಿಸುತ್ತಿದ್ದು ಈ ಪೈಕಿ 17 ಖಾಯಂ ಮತ್ತು 18 ತಾತ್ಕಾಲಿಕ ಸಿಬ್ಬಂದಿಗಳಿರುತ್ತಾರೆ.
- ಸಿಬ್ಬಂದಿಗಳಿಗೆ ಸ್ಟಾರ್ ಹೆಲ್ತ್ ಕಂಪನಿಯ ಆರೋಗ್ಯ ವಿಮೆಯನ್ನು ಒದಗಿಸಲಾಗಿದೆ. ಸಿಬ್ಬಂದಿಗಳಿಗೆ ಸಮವಸ್ತ್ರ ಮತ್ತು ಐ.ಡಿ ಕಾರ್ಡ ಪದ್ಧತಿ ಜಾರಿಯಲ್ಲಿದೆ.
- ಎರಡು ವರ್ಷ ಸೇವೆ ಪೂರೈಸಿದ ಸಿಬ್ಬಂದಿಗಳಿಗೆ ಸಿಬ್ಬಂದಿ ಕಲ್ಯಾಣ ನಿಧಿ ಎಂಬ ಹೆಸರಿನಲ್ಲಿ ಪಿಎಫ್ ಮಾದರಿಯ ಭವಿಷ್ಯ ನಿಧಿಯನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಲ್ಲಿ ಸಿಬ್ಬಂದಿಗಳ ಪಾಲು 8.33% ಹಾಗೂ ಸಂಸ್ಥೆಯ ಪಾಲು 8.33% ಇರುತ್ತಿದ್ದು, ಸಂಚಿತ ಮೊತ್ತದ ಮೇಲೆ ವಾರ್ಷಿಕ 9% ಬಡ್ಡಿ ನೀಡಲಾಗುತ್ತದೆ.
- ಸಹಕಾರಿಯಲ್ಲಿ ಸದಸ್ಯೇತರರೊಂದಿಗೆ ಇ–ಸ್ಟಾಂಪ್ ಸೇವೆಯ ಹೊರತಾಗಿ ಬೇರೆ ಯಾವುದೇ ವ್ಯವಹರಣೆ ನಡೆಸಲಾಗುವುದಿಲ್ಲ. ಈ ನಿಯಮವನ್ನು ಕಟ್ಟು ನಿಟ್ಟಾಗಿ ಪಾಲಿಸಲಾಗುತ್ತಿದೆ.
- ನೋಟ್ ಬ್ಯಾನ್ ಸಂದರ್ಭದಲ್ಲಾಗಲೀ ಜಿ.ಎಸ್.ಟಿ ಜಾರಿಯಾದ ಸಂದರ್ಭದಲ್ಲಾಗಲೀ ನಗದು ಮಿತಿ ನಿರ್ವಹಣೆಯಲ್ಲಾಗಲೀ ಸರಕಾರದ ಎಲ್ಲಾ ಕಾನೂನು, ಸೂಚನೆಗಳನ್ನು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶನಗಳನ್ನು ಯಥಾವತ್ತಾಗಿ ಪಾಲಿಸಲಾಗಿದೆ.
- ಸರಕಾರಕ್ಕೆ ಹಾಗೂ ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸತಕ್ಕ ಎಲ್ಲ ಶುಲ್ಕ ಹಾಗೂ ನಿಧಿಗಳನ್ನು ಸಲ್ಲಿಸಲಾಗುತ್ತಿದೆ.
- ಸಂಯುಕ್ತ ಸಹಕಾರಿಯು ಆಯೋಜಿಸುತ್ತಿರುವ ಬಹುತೇಕ ತರಬೇತಿ ಹಾಗೂ ಸಾಮಾನ್ಯ ಸಭೆಗಳಿಗೆ ಸಹಕಾರಿಯಿಂದ ಹಾಜರಾತಿ ಇರುತ್ತದೆ.
- ಸಹಕಾರಿಯಲ್ಲಿ ತ್ವರಿತವಾಗಿ ಸಾಲ ಮಂಜೂರಿ ವ್ಯವಸ್ಥೆಯಿದ್ದು, ಸದಸ್ಯರಿಗೆ ಉತ್ತಮ ಸ್ಪಂಧನೆ ಮತ್ತು ಸಹಕಾರಯುಕ್ತ ಸೇವೆ ದೊರೆಯುತ್ತಿದೆ.
- ಸಾಲ ಮತ್ತು ಠೇವಣಿಯಲ್ಲದೇ ಸದಸ್ಯರಿಗೆ ವಾಹನ ವಿಮೆ, ಇ–ಸ್ಟಾಂಪಿಂಗ್ ಸೇವೆ, ಝೆರಾಕ್ಸ್ ಮತ್ತು ಟೈಪಿಂಗ್ ಸೌಲಭ್ಯಗಳನ್ನು ನಮ್ಮಲ್ಲಿ ಒದಗಿಸಲಾಗುತ್ತಿದೆ.
- ಸಾಲಗಾರರಿಗೆ ವೈಯಕ್ತಿಕ ಅಪಘಾತ ವಿಮೆಯ ಸೌಲಭ್ಯ ನೀಡಲಾಗಿದೆ.
- ಸಹಕಾರಿಯಿಂದ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ, ರೋಗಿಗಳಿಗೆ ಚಿಕಿತ್ಸೆಗಾಗಿ, ಹಾಗೂ ದೇವಾಲಯ, ಟ್ರಸ್ಟ್ ಗಳಿಗೆ, ಸಮಾಜ ಸೇವೆಗಾಗಿ ಧನಸಹಾಯ ಮಾಡುತ್ತಾ ಬರಲಾಗಿದೆ.
- ಈ ಸಾಲಿನಲ್ಲಿ ಕೊಡಗು ಸಂತ್ರಸ್ತರಿಗೆ ಸಂಸ್ಥೆಯಿಂದ ಮತ್ತು ಸಿಬ್ಬಂದಿ, ನಿರ್ದೇಶಕರುಗಳಿಂದ ಆರ್ಥಿಕ ಸಹಾಯ ನೀಡಲಾಗಿದೆ.
- ಪ್ರತೀ ವರ್ಷ ಜನವರಿ 01 ರ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸ್ವಚ್ಛತಾ ಸಪ್ತಾಹ, ಸರಕಾರಿ ಆಸ್ಪತ್ರೆಯ ರೋಗಿಗಳಿಗೆ ಹಾಲು ಹಣ್ಣು ಬ್ರೆಡ್ ವಿತರಿಸಿ ಶೀಘ್ರ ಚೇತರಿಕೆಗೆ ಹಾರೈಸುವುದು, ಮುಂತಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.
- ನಮ್ಮ ಸಹಕಾರಿಯ ಪ್ರಾರಂಭೋತ್ಸವದ ನೆನಪಿಗಾಗಿ ಪ್ರತೀ ವರ್ಷ ಅಕ್ಟೋಬರ್ 19 ರಂದು ಸಿದ್ದಾಪುರದ ಅಂಧ ಮಕ್ಕಳ ಶಾಲೆ (ಮುರುಘರಾಜೇಂದ್ರ ಅಂಧಮಕ್ಕಳ ಶಾಲೆ) ಯ ಎಲ್ಲ ಮಕ್ಕಳಿಗೆ ಉಪಾಹಾರ, ಒದಗಿಸುವುದು/ಅಕ್ಕಿ ನೀಡುವುದು. ಅಥವಾ ಬಟ್ಟೆ ನೀಡುವುದು ಮುಂತಾದ ಸೇವೆ ನೀಡಲಾಗುತ್ತಿದೆ.
- ಸಹಕಾರಿ ಪ್ರಾರಂಭವಾಗಿ 15 ವರ್ಷ ನಡೆಯುತ್ತಿದ್ದು, ಈವರೆಗೆ ಸಹಕಾರಿಯಿಂದ ಸದಸ್ಯರ ಮೇಲಾಗಲೀ ಯಾವುದೇ ಸದಸ್ಯರಿಂದ ಸಹಕಾರಿಯ ಮೇಲಾಗಲಿ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದ್ದಿರುವುದಿಲ್ಲ.
- ಸಹಕಾರಿಯ ನಿರ್ದೇಶಕ ಮಂಡಳಿಯಲ್ಲಿನ ಎಲ್ಲ ನಿರ್ದೇಶಕರೂ ಸಮಾನ ಮನಸ್ಕರಾಗಿದ್ದು, ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ಮುನ್ನಡೆಸುತ್ತಾ ಬಂದಿದ್ದಾರೆ.
- ಕಾಲ ಕಾಲಕ್ಕೆ ಆಡಳಿತ ಮಂಡಳಿ ಸಭೆ, ಸಿಬ್ಬಂದಿ ನೇಮಕಾತಿ ಸಭೆ, ಸಾಲ ಮಂಜೂರಿ ಉಪಸಮಿತಿ ಸಭೆ ಹಾಗೂ ಶಾಖಾ ಉಸ್ತುವಾರಿ ಉಪಸಮಿತಿ ಸಭೆಗಳನ್ನು ನಡೆಸಿ, ಸಮಯೋಚಿತ ನಿರ್ಣಯಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.
- ಅಧ್ಯಕ್ಷರು ಶ್ರೀ ಆನಂದ ಈರಾ ನಾಯ್ಕ ರವರಾಗಿದ್ದು, ಉತ್ತಮ ಜೀವನಾನುಭವ, ಹಾಗೂ ವ್ಯಾವಹಾರಿಕ ಅನುಭವ ಹೊಂದಿದವರಾಗಿರುತ್ತಾರೆ. ಇವರು ದೂರದೃಷ್ಟಿತ್ವವನ್ನು ಹೊಂದಿದ್ದು, ಸಹಕಾರ ಮತ್ತು ಮಾನವೀಯ ತಳಹದಿಯ ಮೇಲೆ ಸಂಸ್ಥೆಯನ್ನು ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ನಡೆಸುತ್ತಿದ್ದಾರೆ.
- ಸಹಕಾರಿಯ ಬೈಲಾ ಹಾಗೂ ಸಹಕಾರಿ ಅಧಿನಿಯಮಗಳಿಗೆ ಪೂರಕವಾಗಿ ಹಾಗೂ ಇವುಗಳಿಗೆ ಎಲ್ಲಿಯೂ ಲೋಪ ಬರದ ರೀತಿಯಲ್ಲಿ ಆಡಳಿತ ನಿರ್ವಹಣೆ ಮಾಡಲಾಗುತ್ತಿದೆ.

- ಸಹಕಾರಿಯ ನಿರ್ದೇಶಕ ಮಂಡಳಿಯ ಸದಸ್ಯರಾದ ಶ್ರೀ ವಿನಾಯಕ ಆನಂದ ನಾಯ್ಕ ರವರು ವೇತನ ರಹಿತ ವ್ಯವಸ್ಥಾಪಕ ನಿರ್ದೇಶಕರಾಗಿದ್ದು, ಎಂ.ಬಿ.ಎ ಪದವೀಧರರಾಗಿದ್ದು, ಸಂಸ್ಥೆಗೆ ಆಧುನಿಕ ದೃಷ್ಟಿಕೋನದ ಸ್ಪರ್ಷ ನೀಡುತ್ತಾ ಬರುತ್ತಿದ್ದಾರೆ.
- ಸಂಸ್ಥೆಯ ಎಲ್ಲಾ 35 ಸಿಬ್ಬಂದಿಗಳು ನಿಷ್ಠೆ ಮತ್ತು ಪ್ರಾಮಾಣಿಕ ನೌಕರರಾಗಿದ್ದು, ಸಂಸ್ಥೆಯ ಸರ್ವತೋಮುಖ ಪ್ರಗತಿಗೆ ಶ್ರಮಿಸುತ್ತಿದ್ದಾರೆ.
- ಸಿಬ್ಬಂದಿ ನೇಮಕಾತಿಯನ್ನು ನಿಯಮಾವಳಿಯಂತೆ ನಡೆಸಲಾಗುತ್ತಿದೆ.
- ಸಹಕಾರಿಯು ಪ್ರತೀ ವರ್ಷ ಎಪ್ರಿಲ್ ಮೇ ತಿಂಗಳಿನಲ್ಲಿಯೇ ಸಂಸ್ಥೆಯ ಆಯಾ ಸಾಲಿನ ಲೆಕ್ಕಪರಿಶೋಧನೆಯನ್ನು ನಡೆಸಿ ಜೂನ್–ಜುಲೈ ತಿಂಗಳಲ್ಲಿಯೇ ವಾರ್ಷಿಕ ಸಾಮಾನ್ಯ ಸಭೆ ನಡೆಸುತ್ತಾ ಬಂದಿರುತ್ತದೆ.
- ಇಲ್ಲಿಯವರೆಗೂ ಲೆಕ್ಕಪರಿಶೋಧಕರ ವರದಿಯಲ್ಲಿ ಯಾವುದೇ ಗಂಭೀರ ಆಕ್ಷೇಪಗಳು ಬಂದಿದ್ದಿರುವುದಿಲ್ಲ. ಸಣ್ಣ ಪುಟ್ಟ ಆಕ್ಷೇಪಗಳಿದ್ದಲ್ಲಿ ಸಕಾಲದಲ್ಲಿ ಸರಿಪಡಿಸಿಕೊಂಡಿದ್ದಿರುತ್ತದೆ.
- ಸಂಸ್ಥೆಯ ನಗದು ಮತ್ತು ಆಭರಣಗಳ ಮೇಲೆ ವಿಮೆಯನ್ನು ಹೊಂದಲಾಗಿದೆ.
- ವ್ಯವಹರಣೆಯಲ್ಲಾಗಲೀ, ಕಾನೂನು ಸಂದಿಗ್ಧತೆಯಿದ್ದಾಗಲಾಗಲೀ ಹಿರಿಯ ಲೆಕ್ಕಪರಿಶೋಧಕರೂ, ಸಲಹೆಗಾರರೂ ಆದ ಅನುಭವಿ ಶ್ರೀ ಬಿ.ವಿ.ರವೀಂದ್ರನಾಥ್ ಸಾಗರ ರವರಿಂದ ಸೂಕ್ತ ಮಾರ್ಗದರ್ಶನ ಪಡೆದು ಅನುಸರಿಸಲಾಗುತ್ತಿದೆ.
- ಸಹಕಾರಿಯು 2018–19 ನೇ ಸಾಲಿನಲ್ಲಿ ರೂ. 70.24 ಲಕ್ಷ ನಿವ್ವಳ ಲಾಭ ಗಳಿಸಿ, ಸದಸ್ಯರಿಗೆ 20% ಡಿವಿಡೆಂಡ್ ವಿತರಿಸಿದೆ.
- ಸಹಕಾರಿಯ ಸಿಬ್ಬಂದಿಗಳಿಗೆ ಆಗಾಗ ಸೂಕ್ತ ಮಾನವ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗುತ್ತಿದೆ ಮತ್ತು ಪ್ರತೀ ತಿಂಗಳು 2 ನೇ ಶನಿವಾರ ಸಹಕಾರಿಯ ಸಭಾಭವನದಲ್ಲಿ ಸಿಬ್ಬಂದಿ ಸಭೆಯನ್ನು ನಿರ್ದೇಶಕ ಮಂಡಳಿಯ ಉಪಸ್ಥಿತಿಯಲ್ಲಿ ನಡೆಸಲಾಗುತ್ತಿದೆ. ಈ ಸಭೆಯಲ್ಲಿ ಪ್ರಧಾನ ವ್ಯವಸ್ಥಾಪಕರು, ಎಲ್ಲಾ ಶಾಖಾ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿರುತ್ತಾರೆ. ಹಾಗೂ ಆಯಾ ತಿಂಗಳ ವ್ಯವಹಾರ, ಆಗು–ಹೋಗುಗಳು, ಸಮಸ್ಯೆಗಳಿದ್ದಲ್ಲಿ ಅದಕ್ಕೆ ಪರಿಹಾರ ಕಂಡಕೊಳ್ಳುವುದು. ಮತ್ತು ಪ್ರಗತಿಯ ಕುರಿತು ವಿಶ್ಲೇಶಣೆ ನಡೆಸಲಾಗುತ್ತದೆ. ಮುಂದಿನ ತಿಂಗಳ ವ್ಯವಹಾರಕ್ಕೆ ಸೂಕ್ತ ಮಾರ್ಗದರ್ಶನ ಮಾಡಲಾಗುತ್ತದೆ. ಹಾಗೂ ಒಂದೊಂದು ವಿಷಯದ ಕುರಿತಂತೆ ಮಧ್ಯಾಹ್ನದ ಅರ್ಧ ದಿನ ನುರಿತ ಸಿಬ್ಬಂದಿಗಳಿಂದ ತರಬೇತಿಯನ್ನು ನೀಡಲಾಗುತ್ತಿದೆ.



ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು



ಸಹಕಾರಿಯ 2018-19 ನೇ ಸಾಲಿನ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ ಸದಸ್ಯರು

## ದಶಮಾನೋತ್ಸವ ಕಾರ್ಯಕ್ರಮ




**ವಿಜಯಪುರ :** ಶ್ರೀ ಶಾಂತೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಶೈಲ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಡಾ॥ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದ ಶ್ರೀಶೈಲ ಪೀಠ ಇವರು ನೇರವೇರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾನ್ಯ ಶ್ರೀ ಎಂ ಜಿ ಪಾಟೀಲ ವೃತ್ತಿಪರ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಮಾತನಾಡಿ ಇಂಡಿ ಪಟ್ಟಣದಲ್ಲಿ ಶ್ರೀ ಶಾಂತೇಶ್ವರ ಸೌಹಾರ್ದ ಸಹಕಾರಿಯು ಬಹಳ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡುತ್ತಿದೆ. ಸದರಿ ಸಹಕಾರಿಯ ಸದಸ್ಯರು ಇದರ ಸದುಪಯೋಗ ಪಡೆದುಕೊಂಡು ಸಕಾಲದಲ್ಲಿ ಸಾಲ ಮರುಪಾವತಿಸಿ ಸಹಕಾರಿಯ ಬೆಳವಣಿಗೆಗೆ ಕಾರಣೀಕರ್ತರಾಗಿದ್ದಾರೆ. ಸದರಿ ಸಹಕಾರಿಯ ಯಶಸ್ಸಿಗೆ ಎಲ್ಲಾ ಸದಸ್ಯರ ಪರಿಶ್ರಮ ಹಾಗೂ ಪ್ರಮಾಣಿಕತೆ ಕಾರಣ ಎಂದು ತಿಳಿಸಿದರು.

ಇನ್ನೊರ್ವ ಮುಖ್ಯ ಅಥಿತಿಗಳಾಗಿ ಆಗಮಿಸಿದ ಶ್ರೀಯುತ ಸಿದ್ರಾಮಪ್ಪ ಉಪ್ಪಿನ್, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಮಾತನಾಡಿ ರಾಜ್ಯದಲ್ಲಿ ಸಹಕಾರಿಗಳು ಅನೇಕ ರೀತಿಯ ಸಮಸ್ಯೆಗಳು ಇದ್ದರು ಕೂಡ ಈ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ಸಹಕಾರಿಗಳು ಯಶಸ್ಸನ್ನು ಕಾಣುತಿದ್ದು. ಅದರಲ್ಲಿ ಇಂಡಿಯ ಪಟ್ಟಣದ ಶ್ರೀ ಶಾಂತೇಶ್ವರ ಸೌಹಾರ್ದ ಸಹಕಾರಿಯು ಕೂಡ ಒಂದಾಗಿದೆ. ಸದರಿ ಸಹಕಾರಿಯು ತನ್ನ ದಶಮಾನೂತ್ಸವ ಆಚರಿಸಿಕೊಳ್ಳುತ್ತಿರುವ ವಿಚಾರ ತುಂಬಾ ಸಂತೋಷಕರವಾಗಿದ್ದು ಇನ್ನು ಮುಂದೆ ಸದರಿ ಸಹಕಾರಿಯು ತನ್ನ ಇಪ್ಪತ್ತೈದನೇ, ಐವತ್ತನೇ ಹಾಗೂ ಶತಮಾನೋತ್ಸವ ಸಮಾರಂಭ ಆಚರಿಸಿಕೊಳ್ಳುವ ಮಟ್ಟಿಗೆ ಯಶಸ್ಸನ್ನು ಕಾಣಲಿ ಎಂದು ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಉಪಸ್ಥಿತರಿದ್ದರು.

# ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಕಲಾವಿದರ ವಿವಿದೋದ್ದೇಶ ಪತ್ತಿನ ಸಹಕಾರಿ ನಿಯಮಿತ, ಶಿವಮೊಗ್ಗ



**ಶ್ರೀ ಎಂ. ಎನ್. ಸುಂದರ ರಾಜ್**
ಅಧ್ಯಕ್ಷರು



**ಶ್ರೀಮತಿ ತಾರಾ ಪ್ರಸಾದ್**
ಉಪಾಧ್ಯಕ್ಷರು

### ತುಮಕೂರು ನವನಿಧಿ ಸೌಹಾರ್ದ ಕೋ–ಆಪರೇಟಿವ್ ಲಿ., ತುಮಕೂರು



**ಶ್ರೀ ಬಿನು ಎ.ಕೆ**
ಅಧ್ಯಕ್ಷರು



**ಶ್ರೀ ನಾರಾಯಣನ್ ಕೆ.ವಿ**
ಉಪಾಧ್ಯಕ್ಷರು

### ಶ್ರೀ ನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೀದರ



**ಶ್ರೀ ಸಂಜೀವಕುಮಾರ ಭೀಮರಾವ ಪಾಟೀಲ**
ಅಧ್ಯಕ್ಷರು



**ಶ್ರೀ ಮಾನಶೇಟ್ಟಿ ಸಿದ್ದಪ್ಪಾ ಬೇಳಕೇರಿ**
ಉಪಾಧ್ಯಕ್ಷರು



ಬೆಂಗಳೂರು : ದಿನಾಂಕ 14.07.2019ರಂದು ಜನನಿಧಿ ಪತ್ತಿನ ಸೌಹಾರ್ದ ಸಹಕಾರಿಯ ಇ–ಸ್ಟಾಂಪಿಂಗ್ ಉದ್ಘಾಟನೆಯನ್ನು ಶ್ರೀ ನಿರ್ವಾಣಪ್ಪ ಹೆಚ್.ಆರ್. ನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಹೆಚ್.ಎಲ್ ಹಾಗೂ ಉಪಾಧ್ಯಕ್ಷರಾದ ಶ್ರೀ ನಾಗರಾಜು ಇವರು ಉಪಸ್ಥಿತರಿದ್ದರು.

# "ಮೊಬೈಲ್ ಆ್ಯಪ್" ಉದ್ಘಾಟನಾ ಕಾರ್ಯಕ್ರಮ



**ಮಂಗಳೂರು :** ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ "ಸಹಕಾರಿ ಮೊಬೈಲ್ ಆ್ಯಪ್" ನ್ನು ದಿನಾಂಕ 29–07–2019ರಂದು ಒಡಿಯೂರಿನಲ್ಲಿ ನಡೆದ ಪೂಜ್ಯ ಶ್ರೀಗಳ ಜನ್ಮ ದಿನೋತ್ಸವ ಗುರುವಂದನ ಕಾರ್ಯಕ್ರಮದ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಗಳವರು ಉದ್ಘಾಟಿಸಿ ಆಶೀರ್ವದಿಸಿದರು. "ತಂತ್ರಜ್ಞಾನದ ಜೊತೆಗೆ ತತ್ವಜ್ಞಾನವನ್ನು ಅಳವಡಿಸಿಕೊಂಡಾಗ ಅದು ಸಮರ್ಪಕವಾಗಿ ಬಳಕೆಯಾಗುತ್ತದೆ. ಪ್ರಧಾನಿ ನರೇಂದ್ರ ಮೋದಿಜೀಯವರ ಕನಸು ತಂತ್ರಜ್ಞಾನ ದೇಶದ ಹಳ್ಳಿ ಹಳ್ಳಿಗೂ ತಲುಪಬೇಕು ಎಂಬುದು. ಈ ನಿಟ್ಟಿನಲ್ಲಿ ಸಹಕಾರಿಯು ಪ್ರಾಮಾಣಿಕ ಸೇವೆಯನ್ನು ತನ್ನ ಸದಸ್ಯರಿಗೆ ನೀಡುತ್ತಿದೆ ತಮ್ಮ ಖಾತೆಯಲ್ಲಿನ ವಿವರಗಳನ್ನು ಕೈಯಲ್ಲಿರುವ ಮೊಬೈಲ್‌ನಿಂದ ತಿಳಿದುಕೊಳ್ಳವ ವ್ಯವಸ್ಥೆ ನಿಜವಾಗಿಯೂ ಶ್ಲಾಘನೀಯ ಎಂದರು. ಸಹಕಾರಿಯ ಅಧ್ಯಕ್ಷರಾದ ಲ। ಎ.ಸುರೇಶ್ ರೈಯವರು ಮಾತನಾಡಿ ಸಹಕಾರಿಯು ತನ್ನ ಸದಸ್ಯರಿಗೆ ಕಾಗದ ರಹಿತ ವ್ಯವಹಾರವನ್ನು ಪಾರದರ್ಶಕತೆ ಮತ್ತು ಸುರಕ್ಷತೆಯೊಂದಿಗೆ ನೀಡುವುದು ನಮ್ಮ ಉದ್ದೇಶ. ಮೋದಿಜೀಯವರ ಡಿಜಿಟಲ್ ಇಂಡಿಯಾ ಯುಗವನ್ನು ಸಕಾರಗೊಳಿಸುವಲ್ಲಿ ಸಹಕಾರಿಯ ತಂತ್ರಜ್ಞಾನದಲ್ಲಿ ಕಿರು ಅವಿಷ್ಕಾರವನ್ನು ಮಾಡಲಾಗಿದೆ. ಸಹಕಾರಿಯ ಎಲ್ಲಾ ಶಾಖೆಗಳು ಈಗಾಗಲೇ ಕೋರ್ ವ್ಯವಸ್ಥೆಯಡಿಯಲ್ಲಿ ವ್ಯವಹರಿಸುತ್ತಿದ್ದು, ಮೊಬೈಲ್ ಆ್ಯಪ್ ಇದಕ್ಕೆ ಸೇರ್ಪಡೆಯಾಗಿದೆ. ಸಹಕಾರಿಯ ಸದಸ್ಯರು ತಮ್ಮ ಖಾತೆಗಳ ವಿವರ, ವ್ಯವಹಾರಗಳ ವಿವರ ಹಾಗೂ ಇನ್ನೂ ಅನೇಕ ಅನುಕೂಲಗಳನ್ನು ಸಹಕಾರಿ ಆ್ಯಪ್‌ನಿಂದ ಪಡೆಯಬಹುದಾಗಿದೆ ಎಂದರು. ಸಹಕಾರಿ ಆ್ಯಪ್‌ನ್ನು ಅಭಿವೃದ್ಧಿ ಪಡಿಸಿದ ಮಂಗಳೂರಿನ ಅಟೋಮೇಶನ್ ಇನ್ಫೋಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಶ್ರೀ ಜಗದೀಶ್ ರಾಮ, ಇವರನ್ನು ಪೂಜ್ಯಶ್ರೀಗಳು ಪ್ರಸಾದ ನೀಡಿ ಹರಸಿದರು. ಶ್ರೀ ಸಂಸ್ಥಾನದ ಸಾಧ್ವೀ ಶ್ರೀ ಶ್ರೀ ಮಾತಾನಂದಮಯೀ, ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ.ಉಗ್ಗಪ್ಪ ಶೆಟ್ಟಿಯವರು, ಆಡಳಿತ ಮಂಡಳಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಸಹಕಾರಿ ಸಂಸ್ಥೆಗಳ ಅನನ್ಯತೆ (cooperative uniqueness)

– ಭಾಸ್ಕರ ಹೆಗಡೆ ಕಾಗೆರಿ,

ಸಹಕಾರಿ ಸಂಸ್ಥೆಗಳ ಕಾರ್ಯ ನೀತಿಯ ಕೇಂದ್ರ ಬಿಂದು ಸಹಕಾರಿ ಅನನ್ಯತೆ (cooperative uniqueness). ಸಹಕಾರೀ ಸಂಸ್ಥೆಗಳು/ಉದ್ದಿಮೆಗಳು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವುದು, ಗಟ್ಟಿಗೊಳಿಸುವುದು ಅತಿ ಅಗತ್ಯ ತನ್ನ ಅನನ್ಯತೆಯನ್ನು ಪಣಕ್ಕಿಟ್ಟು ಮಾರುಕಟ್ಟೆಯಲ್ಲಿ ಉಳಿಯಲು ಪ್ರಯತ್ನಿಸುವುದು ಸಹಕಾರಿ ಸಂಘಗಳ ಮಾದರಿಯಲ್ಲ. ಸಹಕಾರಿ ಉದ್ದಿಮೆಗಳು ಪರ್ಯಾಯ ಮಾರ್ಗವಾಗುವುದು, ಬದಲಿ ಆಯ್ಕೆಯಾಗುವುದು ತಮ್ಮ ಈ ಅನನ್ಯತೆಯಿಂದಲೇ. ಆದುದರಿಂದ ಸಹಕಾರೀ ಆಂದೋಲನವು ಜಗತ್ತಿಗೆ ಮಾದರಿಯಾಗಿ ಬೆಳೆಯಬೇಕಾದರೆ ತನ್ನ ಅನನ್ಯತೆಯನ್ನು ಉಳಿಸಿಕೊಂಡೇ ವ್ಯವಹಾರ ನಡೆಸಬೇಕು.

ಈ ಅನನ್ಯತೆಯ ಮೂಲ ಸದಸ್ಯರ ಭಾಗವಹಿಸುವಿಕೆ. ಸದಸ್ಯರಿಗೆ ಸಂಸ್ಥೆಯ ಒಡೆತನವನ್ನು ನೀಡುವುದರ ಜೊತೆಗೆ, ಅವರಿಗೆ ಭಾಗವಹಿಸುವಿಕೆ ಅವಕಾಶಗಳನ್ನು ನೀಡುವುದರಿಂದಲೇ ಸಹಕಾರಿ ಉದ್ದಿಮೆಗಳು ಇತರ ಉದ್ದಿಮೆಗಳಿಗಿಂತ ಭಿನ್ನವಾಗುತ್ತವೆ. ಸದಸ್ಯರು ಸಂಸ್ಥೆಗೆ ಸಹಾಯ ಮಾಡುತ್ತಲೇ, ತಾವು ಬೆಳೆಯುವ ಅವಕಾಶ ಹೊಂದಿರುತ್ತಾರೆ. ಸದಸ್ಯರ ಭಾಗವಹಿಸುವಿಕೆ ಮತ್ತು ಬಳಕೆದಾರರೇ ನೇರವಾಗಿ ತಮ್ಮ ಅಗತ್ಯಗಳನ್ನು ಸಾಂಸ್ಥಿಕ ನೆಲೆಯಲ್ಲಿ ಪಡೆದುಕೊಳ್ಳುವ ಅವಕಾಶ ಸಹಕಾರಿ ಸಂಘಟನೆಗಳಲ್ಲಿ ಮಾತ್ರ ಕಾಣುವಂತಹದು. ಆದುದರಿಂದ ಸಹಕಾರಿ ಉದ್ದಿಮೆ ಸದಸ್ಯರ ಭಾಗವಹಿಸುವಿಕೆಗೆ ಹೊಸ ಚೈತನ್ಯ ನೀಡುವತ್ತ ಕಾರ್ಯನಿರತವಾಗಬೇಕು. ಸದಸ್ಯರ ಭಾಗವಿಸುವಿಕೆಯಲ್ಲಿ ಗುಣಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಯುವ ಸದಸ್ಯರನ್ನು ಆಕರ್ಷಿಸುವತ್ತ ಗಮನಹರಿಬೇಕು ಮತ್ತು ಮಹಿಳಾ ಸದಸ್ಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸದಸ್ಯರಿಗೆ ಸಹಕಾರಿ ಸಂಘವು ತಮ್ಮ ಜೀವನದ ಅವಿಭಾಜ್ಯ ಅಂಗವೆಂಬಂತಹ ಭಾವನೆ ಬರುವಂತೆ ಆಗಬೇಕು.

ಕ್ರಿಯಾತ್ಮಕ ಮತ್ತು ಗುಣಾತ್ಮಕ ಸದಸ್ಯರ ಭಾಗವಹಿಸುವಿಕೆಯು ಸಹಕಾರಿ ಉದ್ದಿಮೆಗಳು ಸುಸ್ಥಿರ ಬೆಳವಣಿಗೆಗೆ ಪೂರಕವಾಗುತ್ತದೆ. ಇಲ್ಲಿ ಸುಸ್ಥಿರತೆಯ ಪರಿಕಲ್ಪನೆಯು ಎರಡು ಮುಖಗಳನ್ನು ಹೊಂದಿದೆ. ಮೊದಲನೆಯದು ನಮ್ಮ ಸಮಾಜ, ಆರ್ಥಿಕತೆ ಮತ್ತು ಪರಿಸರದ ಸುಸ್ಥಿರತೆಯಾದರೆ ಇನ್ನೊಂದು ಸಹಕಾರಿ ಚಳುವಳಿಯ ಸುಸ್ಥಿರತೆ. ಸದಸ್ಯ ಸಮುದಾಯವು ಜವಾಬ್ದಾರಿಯುತವಾಗಿ ತಮ್ಮ ಅಗತ್ಯಯಗಳನುಸಾರ ಸಹಕಾರಿ ಉದ್ದಿಮೆಯ ವ್ಯವಹಾರವನ್ನು ಸಂಘಟಿಸಿದರೆ, ಸುಸ್ಥಿರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ತಾನಾಗಿಯೇ ಸಾಧ್ಯವಾಗುತ್ತದೆ.  ಮಿತ ಬೇಡಿಕೆಗಳನ್ನು ಆಧರಿಸಿ ಉತ್ಪಾದನಾ ಮತ್ತು ಸೇವಾ ಚಟುವಟಿಕೆಗಳನ್ನು ನಡೆಸುವುದರಿಂದ ಪರಿಸರದ ಮೇಲಿನ ಒತ್ತಡವು ಕಡಿಮೆಯಾಗುತ್ತದೆ. ಇವೆಲ್ಲ ಒಂದೆಡೆಯಿಂದ ಸದಸ್ಯರ ಅಗತ್ಯಗಳನ್ನು ಪೂರೈಸುತ್ತಾ ಸಹಕಾರಿ ಸಂಘವು ತಮ್ಮ ಪ್ರಮುಖ ಅಗತ್ಯಗಳಲ್ಲೊಂದು ಎಂಬ ಭಾವನೆಯನ್ನು ಸದಸ್ಯ ಸಮುದಾಯದಲ್ಲಿ ಮೂಡಿಸುತ್ತದೆ. ಹಾಗೆಯೇ ಸಮುದಾಯದ ಒಳಗಿನ ಸಂಬಂಧ ಗಟ್ಟಿಯಾಗುತ್ತದೆ. ಇವು ಸಹಕಾರಿ ಚಳುವಳಿಯ ಅಡಿಪಾಯವನ್ನು ಬಲಗೊಳಿಸುವುದರಿಂದಾಗಿ, ಸಹಕಾರಿ ಉದ್ದಿಮೆಗಳು ಸುಸ್ಥಿರವಾಗುತ್ತವೆ. ಒಟ್ಟಾರೆಯಾಗಿ ನೋಡಿದರೆ ಉತ್ತಮ ಸಹಕಾರಿ ಉದ್ದಿಮೆಗಳು ಸದಸ್ಯ ಸಮುದಾಯದ ಸಾಮಾಜಿಕ ಬಂಡವಾಳವನ್ನು (social capital) ಬೆಳೆಸುತ್ತದೆ ಮತ್ತು ಶಕ್ತಿಯುತವಾಗಿಸುತ್ತವೆ. ಯಾವುದೇ ಸಂಪನ್ಮೂಲದ ಹೂಡಿಕೆ ಫಲನೀಡಬೇಕಾದರೆ ಉತ್ತಮ ಸಾಮಾಜಿಕ ಬಂಡವಾಳದ ಪಾತ್ರ ಬಹುಮುಖ್ಯವೆನ್ನುವುದನ್ನು ಅರ್ಥಶಾಸ್ತ್ರಜ್ಞರೆಲ್ಲ ಒಪ್ಪುತ್ತಾರೆ. ಅಂತೆಯೇ ಸುಸ್ಥಿರ ಅಭಿವೃದ್ಧಿ ಮತ್ತು ಸುಸ್ತಿರ ಸಹಕಾರಿ ಉದ್ದಿಮೆಗಳೆರಡೂ ಸಾಧ್ಯವಾಗುತ್ತದೆ.

ಸಹಕಾರಿ ಉದ್ದಿಮೆಗಳ ಒಂದು ಪ್ರಮುಖ ಅಗತ್ಯ ಹಣಕಾಸಿನ ಬಂಡವಾಳ. ಯಾವುದೇ ಸಂಘ ತನಗೆ ಬೇಕಾದ ಬಂಡವಾಳವನ್ನೆಲ್ಲ ತನ್ನ ಸದಸ್ಯರು ಹೂಡುವ ಶೇರು ಬಂಡವಾಳದ ಮೂಲಕವೇ ಸಂಗ್ರಹಿಸುವುದು ಸಾಧ್ಯವಾಗುವುದಾದರೆ ಅದು ಅತ್ಯಂತ ಉತ್ತಮ. ಆದರೆ ಹೆಚ್ಚಿನ ಸಹಕಾರಿ ಉದ್ದಿಮೆಗಳಿಗೆ ಇದು ಸಾಧ್ಯವಾಗಲಾರದು. ಉದ್ದಿಮೆ ಬೆಳೆದಂತೆಲ್ಲ. ಹೊಸ ತಂತ್ರಜ್ಞಾನ ಇತ್ಯಾದಿಗಳು ಅಗತ್ಯವಾದಂತೆಲ್ಲ, ಬಂಡವಾಳದ ಅಗತ್ಯವು ಅಧಿಕವಾಗುತ್ತದೆ. ಈ ಬಂಡವಾಳವನ್ನು ಯಾವ ಮೂಲಗಳಿಂದ ಸಂಗ್ರಹಿಸುತ್ತೇವೆನ್ನುವುದು ಮತ್ತು ಈ ಬಂಡವಾಳ ಸಂಗ್ರಹಣೆಗೆ ಯಾವ ಮಾರ್ಗ ಅನುಸರಿಸುತ್ತೇವೆನ್ನುವುದು, ನಮ್ಮ ಸಹಕಾರಿ ಸಂಘದ ಭವಿಷ್ಯವನ್ನು ನಿರ್ಧರಿಸುತ್ತದೆ. ಹೊರ ಮೂಲಗಳಿಂದ ಬಂಡವಾಳ ಸಂಗ್ರಹಿಸುವ ಹಾಗೆ ಪ್ರಮುಖವಾಗಿ ಗಮನಿಸಬೇಕಿರುವುದು, ಅದು ಸದಸ್ಯರ ನಿಯಂತ್ರಣದ ಮೇಲೆ ಯಾವುದೇ ನಕಾರಾತ್ಮಕ ಪ್ರಭಾವ ಬೀರದಂತಿರುವುದು. ಬಂಡವಾಳದ ವೆಚ್ಚ ಮತ್ತು ಬಂಡವಾಳದ ರೂಪದಲ್ಲಿ ಬರುವ ಹಣ ಯಾವ ಮೂಲದ್ದು ಮತ್ತು ಯಾವ ಮಾರ್ಗದಿಂದ ಗಳಿಸಿದ್ದು ಎನ್ನುವುದೂ ಅಷ್ಟೇ ಮುಖ್ಯ. ಸಹಕಾರಿ ಉದ್ಯಮಗಳ ಬಂಡವಾಳ ಸಂಗ್ರಹಣೆಯು ಸಂಘದ ಅನನ್ಯತೆ ಮತ್ತು ಸಮಗ್ರತೆಗೆ ಯಾವುದೇ ಧಕ್ಕೆ ತರವಾರದು ಮತ್ತು ಯಾವುದೇ ಕಾನೂನು ವಿರೋಧಿ ಚಟುವಟಿಕೆಗಳನ್ನೂ ಉತ್ತೇಜಿಸಬಾರದು. ಸಹಕಾರಿ ಸಂಘಟನೆಗಳು ಒಂದಕ್ಕೊಂದು ಸಹಾಯ ನೀಡುವುದು, ತಮ್ಮ ತಮ್ಮೊಳಗಿನ ವ್ಯಾಪಾರ ವಹಿವಾಟು ಹೆಚ್ಚಿಸಿಕೊಳ್ಳುವುದು ಮತ್ತು ಸಹಕಾರ ಬಂಡವಾಳ ನಿಧಿಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ಬಂಡವಾಳ ಪಡೆಯುವುದು ಮುಂತಾದುವುಗಳ ಕಡೆಗೆ ಹೆಚ್ಚಿನ ಗಮನ ಹರಿಸಬೇಕು.

ಕೊನೆಯದಾಗಿ ಸಹಕಾರಿ ಉದ್ದಿಮೆಗಳು ಮುಖ್ಯವಾಗಿ ಬರಲು ಬೇಕಾದ ಪ್ರಮುಖ ಪರಿಕರವೆಂದರೆ ಕಾನೂನಿನ ಚೌಕಟ್ಟು. ಹಲವಾರು ರಾಜ್ಯಗಳಲ್ಲಿ ಸಹಕಾರಿ ಚಳುವಳಿಗೆ ಪೂರಕವಾದ ಕಾನೂನಿನ ವಾತಾವರಣವಿಲ್ಲ. ಸಹಕಾರಿ ಉದ್ದಿಮೆಗಳಿಗೆ ಅಗತ್ಯವಿರುವುದು ಉದಾರತೆಯಾಗಲೀ, ನಿರ್ಬಂಧವಾಗಲಿ ಅಲ್ಲ. ಬದಲಿಗೆ ಇತರೆ ಉದ್ದಿಮೆಗಳಿಗೆ ಸಮನಾಗಿ ವ್ಯವಹಾರ ಸಂಘಟಿಸಲು ಸಾಧ್ಯವಾಗುವ ಕಾನೂನಿನ ಸಂರಚನೆ. ಕಾನೂನುಗಳನ್ನು ರಚಿಸುವುದು ಸರಕಾರವಾಗಿರುವುದರಿಂದ, ಆದುದರಿಂದ ಸಹಕಾರಿ ಮಹಾಮಂಡಳಗಳೂ ಸಂಶೋಧನಾ ಸಂಸ್ಥೆಗಳೂ ಮತ್ತು ಮುಖ್ಯವಾಗಿ ಸಹಕಾರಿ ಕ್ಷೇತ್ರದಲ್ಲಿ ಆಸಕ್ತಿ ಇರುವ ಸಂಸದ ಮತ್ತು ಶಾಸಕರು ಈ ವಿಷಯವನ್ನು ಕೈಗೆತ್ತಿಕೊಳ್ಳಬೇಕು. ಸಹಕಾರಿ ಉದ್ದಿಮೆಗಳಿಗೆ ಸದಸ್ಯರು ಬಯಸುವ ಎಲ್ಲ ರೀತಿಯ ಉದ್ದಿಮೆಗಳಲ್ಲಿ ತೊಡಗಲು ಅವಕಾಶ, ತಮ್ಮ ಎಲ್ಲ ಆಂತರಿಕ ಚಟುವಟಿಕೆಗಳನ್ನು ತಾವೇ ನಿರ್ಧರಿಸಿ, ನಿರ್ವಹಿಸಲು ಕಾರ್ಯ ಸ್ವಾತಂತ್ರ ಯಾವುದೇ ರೀತಿಯ ವ್ಯಾಜ್ಯಗಳನ್ನು ಇತರೆ ಉದ್ದಿಮೆಗಳಂತೆಯೇ ದೇಶದ ಸಾಮಾನ್ಯ ಕಾನೂನಿನ್ವಯ ನಿರ್ಧರಿಸಿಕೊಳ್ಳುವ ಅವಕಾಶ ಇವುಗಳನ್ನೆಲ್ಲ ಒದಗಿಸುವಂತಹ ಕಾನೂನಿನ ರಚನೆ ಇಂದಿನ ತುರ್ತು ಅಗತ್ಯ.

# ಸೌಹಾರ್ದ ಸಹಕಾರಿಗಳಲ್ಲಿ ಸಿಬಿಲ್ (CIBIL) ವ್ಯವಸ್ಥೆ

– ವೆಂಕಟೇಶ ರಾಠೋಡ

ಹಣವೆನ್ನುವುದು ಮಾನವನ ಜೀವನದ ಒಂದು ಅವಿಭಾಜ್ಯ ಅಂಗ ಎಂದು ಹೇಳಬಹುದು ಹಣವಿಲ್ಲದೇ ಏನು ಕೂಡ ಸಾಧ್ಯವಿಲ್ಲ ಎನ್ನುವ ಅಂಶವನ್ನು ಸಹ ನಾವು ನೋಡಬಹುದು. ಹಣವೆನ್ನುವುದು ಪ್ರತಿಯೊಬ್ಬನ ಜೀವನಕ್ಕೂ ಸಹ ಸಹಕಾರಿಯಾದ ವಿಷಯವಾಗಿದೆ. ಕೆಲವೊಮ್ಮೆ ನಾವು ದುಡಿಮೆ ಮಾಡುವ ಹಣ ನಮ್ಮ ವೆಚ್ಚಕ್ಕೆ ಸಾಕಾಗುವುದಿಲ್ಲ. ನಾವು ದುಡಿಯುವ ಹಣಕ್ಕಿಂತ ನಮಗೆ ಹೆಚ್ಚು ಹಣದ ಅವಶ್ಯಕತೆ ಇರುತ್ತದೆ. ಅಂತಹ ಸಮಯದಲ್ಲಿ ಸಾಮಾನ್ಯವಾಗಿ ನಾವು ಸಾಲದ ಮೊರೆ ಹೋಗುವುದು ಸಾಮಾನ್ಯ ಅಂತಹ ಸಮಯದಲ್ಲಿ ನಮಗೆ ಸಾಲ ಸಿಗಬಹುದು, ಸಿಗದೇ ಇರಬಹುದು, ಈ ಎಲ್ಲ ಸಾಲದ ಮಾಹಿತಿಯನ್ನು ನೀಡುವ ಸಂಸ್ಥೆ ಎಂದರೆ ಕ್ರೆಡಿಟ ಇನ್ಫಾರ್ಮೇಶನ ಬ್ಯೂರೋ (ಇಂಡಿಯ) ಲಿಮಿಟೆಡ್ ಎನ್ನುವ ಭಾರತದ ಸಂಸ್ಥೆ,

### ಸಿಬಿಲ್ ಕ್ರೆಡಿಟ್ ಸ್ಕೋರ್ ಎಂದರೇನು ?

ಸಿಬಿಲ್ ದೇಶದ ಮೊದಲ ಕ್ರೆಡಿಟ್ ಕಂಪನಿಯಾಗಿದ್ದು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಸಿಬಿಲ್ ಮಹತ್ತರ ಪಾತ್ರವನ್ನು ವಹಿಸುತ್ತದೆ. ಇದು ಸಾಲ ಪೂರೈಕೆ ನಿರ್ಣಯ ಉದ್ಯಮವನ್ನು ನೋಡಿಕೊಳ್ಳಲು ಹಾಗೂ ಗ್ರಾಹಕರಿಗೆ ಕ್ರೆಡಿಟ್ ವಿಷಯದಲ್ಲಿ ಸಹಾಯ ಮಾಡುತ್ತದೆ. ಬ್ಯಾಂಕಿಗೆ ಸಾಲಕ್ಕೆ ಬರುವ ಜನರ ವಿವರ ಪರಿಶೀಲನೆ ಮಾಡುತ್ತದೆ ಅವರು ಸಾಲ ಮರುಪಾವತಿ ಮಾಡುವವರೇ ಇಲ್ಲವೇ ಎನ್ನುವ ಮಾಹಿತಿಯನ್ನು ಇದು ಬ್ಯಾಂಕಿಗೆ ನೀಡುತ್ತದೆ.

### ಸಿಬಿಲ್ ಕಾರ್ಯವೈಖರಿ ಹೇಗಿರುತ್ತದೆ ?

ಸಿಬಲ್ ಸಾಲವನ್ನು ಅನುಮೋದಿಸಬೇಕಾದರೆ, ಕ್ರೆಡಿಟ್ ಕೇಳುವ ಸಂಸ್ಥೆ ಅದಕ್ಕೆ ತಕ್ಕಂತೆ ಮಾಹಿತಿ ಒದಗಿಸಬೇಕು. ಹಣವನ್ನು ತಿರುಗಿಸುವ ಸಾಮರ್ಥ್ಯ ಇದ್ದರೆ ಮಾತ್ರ ಸಾಲ ಕೊಡಲಾಗುತ್ತದೆ. ಸಿಬಿಲ್ ಎಲ್ಲರ ಡೇಟಾ ಸಂಗ್ರಹಿಸಿ ಅದನ್ನು ಎಲ್ಲಾ ಬ್ಯಾಂಕುಗಳಿಗೆ ಕೊಡುತ್ತದೆ ಇದರನ್ವಯ ಬ್ಯಾಂಕು ತನ್ನ ಗ್ರಾಹಕನಿಗೆ ಸಾಲ ನೀಡಬೇಕೇ? ಬೇಡವೇ ಎನ್ನುವ ಅಂಶವನ್ನು ತಿಳಿಯುತ್ತದೆ.

### ಸಿಐಆರ್ ಎಂದರೇನು ?

ಸಿಐಆರ್ ಎಂದರೆ ಕ್ರೆಡಿಟ್ ಇನ್ಫಾರ್ಮೇಶನ ರಿಪೋರ್ಟ ಎಂದರ್ಥ ಎಂದರೆ ನಿಮ್ಮ ಸಿಬಿಲ್‌ನ ವಾಸ್ತವಿಕ ವರದಿಯಾಗಿರುತ್ತದೆ. ಇಲ್ಲಿ ನಿಮ್ಮ ಹೆಸರು, ವಿಳಾಸ, ಜನ್ಮ ದಿನಾಂಕ, ಪಾನ್ ಕಾರ್ಡ್ ಮಾಹಿತಿ ಹೀಗೆ ಇಂತಹ ಅಂಶವನ್ನು ಇದು ಒಳಗೊಂಡಿರುತ್ತದೆ. ಖಾತೆ ಮಾಹಿತಿಯ ವಿವರಗಳನ್ನು ಒಳಗೊಂಡಿದ್ದು, ಸಾಲಗಾರರ ಹೆಸರು, ಸಾಲ ಸೌಲಭ್ಯಗಳ ಮಾದರಿ ಸಂಖ್ಯೆ, ಮಾಲೀಕತ್ವದ ವಿವರ, ಖಾತೆ ತೆರೆದ ದಿನಾಂಕ, ಪಾವತಿ ಕೊನೆ ದಿನಾಂಕ ಸಾಲದ ಮೊತ್ತ ಕರೆಂಟ್ ಬ್ಯಾಲೇನ್ಸ್ ಮತ್ತು ನಿಮ್ಮ ತಿಂಗಳ ಪಾವತಿಯ ಮೂರು ವರ್ಷಗಳ ದಾಖಲೆ ಒಳಗೊಂಡಿರುತ್ತದೆ.

### ಸಿಬಿಲ್ ಸ್ಕೋರ್ ಪರಿಣಾಮ ಏನು ?

ಇಲ್ಲಿ ನಿಮ್ಮ ಇತಿಹಾಸ ಅಂದರೆ ನೀವು ಹೆಚ್ಚು ಬ್ಯಾಂಕಿನಲ್ಲಿ ಸಾಲ ಪಡೆಯದೆ ಇದ್ರೆ ನಿಮಗೆ ಸಾಲ ದೊರೆಯುತ್ತದೆ. ಜೊತೆಗೆ ಪಡೆದ ಸಾಲ ಸರಿಯಾದ ಸಮಯಕ್ಕೆ ಮರು ಪಾವತಿ ಆಗಿದ್ದಿಯೇ ಇಲ್ಲವೇ? ಅಥವಾ ಮರುಪಾವತಿ ಇದುವರೆಗೂ ಆಗಿಲ್ಲವೇ ಈ ಎಲ್ಲಾ ಅಂಶವನ್ನು ಇಲ್ಲಿ ಪರಿಗಣನೆ ಮಾಡಲಾಗುತ್ತದೆ. ಇಷ್ಟು ಮಾತ್ರವಲ್ಲದೇ ನಾವು ಯಾವಾಗಲಾದರೂ ಹೊಸ ಸಾಲಕ್ಕಾಗಿ ಅರ್ಜಿ ಕೊಟ್ಟರೆ ಬ್ಯಾಂಕ್ ನಮ್ಮ ಬಗ್ಗೆ ವಿಚಾರಣೆ ಮಾಡಿ, ಅದರ ಮೇಲೆ ನಮಗೆ ಕ್ರೆಡಿಟ್ ಸ್ಕೋರ್ ನೀಡುತ್ತದೆ ಮೊದಲು ಸಿಬಿಲ್ ಗ್ರಾಹಕರ ಸಾಲ ಮರುಪಾವತಿ ಸಾಮರ್ಥ್ಯ ಪರಿಶೀಲನೆ ನಡೆಸುತ್ತದೆ.

### ಸಹಕಾರ ಸಂಘಗಳಲ್ಲಿ ಸಿಬಿಲ್ ವ್ಯವಸ್ಥೆ :

ನೂರಾರು ವರ್ಷಗಳ ಇತಿಹಾಸ ಹೊಂದಿರುವ ಸಹಕಾರ ಕ್ಷೇತ್ರದಲ್ಲಿ ಸಿಬಿಲ್‌ನ ಪ್ರಮುಖ್ಯಕತೆ ಹೊಂದಿರುವುದಿಲ್ಲ ಏಕೆಂದರೆ ಸಹಕಾರ ಕ್ಷೇತ್ರವು ಸದಸ್ಯರಿಂದ ಮತ್ತು ಸದಸ್ಯರಿಗಾಗಿ ಕಾರ್ಯನಿರ್ವಹಿಸುವ ಕ್ಷೇತ್ರವಾಗಿರುತ್ತದೆ. ಆದರೇ ಇತ್ತಿಚ್ಚಿನ ದಿನಗಳಲ್ಲಿ ಸಹಕಾರ ಸಂಘಗಳಲ್ಲಿ ಸಾಲಕ್ಕಾಗಿ ಬರುವ ಸದಸ್ಯರೇ ಹೆಚ್ಚಗಿರುತ್ತದೆ. ಜೊತೆಗೆ ಒಂದು ಸಹಕಾರ ಸಂಘದಲ್ಲಿ ಸಾಲ ಪಡೆದು ಮತ್ತೊಂದು ಸಹಕಾರಿ ಸಂಘದಲ್ಲಿ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸುವುದು ಸಾಮಾನ್ಯವಾಗಿದೆ. ಸದರಿ ಸಾಲಗಾರ ಮರುಪಾವತಿ ಸಾಮರ್ಥ್ಯ, ಇತರೇ ಸಹಕಾರಿಗಳಲ್ಲಿ ಸಾಲ ಪಡೆದ ಬಗ್ಗೆ ಮಾಹಿತಿ ಕಂಡುಹಿಡುವುದು ಕಷ್ಟವಾಗಿರುತ್ತದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಎಲ್ಲ ಸಹಕಾರಿಗಳು ಆಧಾರ ಲಿಂಕ್‌ವುಳ್ಳ ಸಾಮಾನ್ಯವಾದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಹೀಗೇ ಮಾಡಿದಲ್ಲಿ ಮಾತ್ರ ಸದಸ್ಯರ ಸಿಬಿಲ್ ಕಂಡುಹಿಡಿಯಲು ಸಾಧ್ಯವಾಗುತ್ತದೆ.

ಈ ಕುರಿತು ರಾಜ್ಯ ಮಟ್ಟದಲ್ಲಿ, ದೇಶ ಮಟ್ಟದಲ್ಲಿ ಬಹಳಷ್ಟು ಚರ್ಚೆಯಾಗಿದ್ದರು ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಹೀಗಾಗಿ ಬಹಳಷ್ಟು ಸಹಕಾರಿಗಳಲ್ಲಿ ಬೇರೆ ಬೇರೆ ಕಡೆ ಸಾಲ ಪಡೆದ ಸದಸ್ಯರು ಸುಸ್ಥಿಯಾಗಿ ಮುಂದುವರೆದಿರುತ್ತಾರೆ. ಕೆಲವೊಂದು ಕಡೆಗಳಲ್ಲಿ ಸ್ಥಳಿಯವಾಗಿ ಎನ್.ಡಿ.ಸಿ (No Due Certificate) ಪಡೆಯಲು ಸಹಕಾರಿಗಳು ತೀರ್ಮಾನಿಸಿರುವುದನ್ನು ಗಮನಿಸಲಾಗಿರುತ್ತದೆ. ಆದರೇ ಪ್ರಯೋಗಿಕವಾಗಿ ನಡೆಸಿದಾಗ ಅದು ಕಷ್ಟವೆಂದು ತಿಳಿದುಬಂದಿದೆ.

ಇದರ ಮುಂದುವರೆದ ಭಾಗವಾಗಿ ಒಂದು ಜಿಲ್ಲೆಯಲ್ಲಿ ಹೊಸ ಸಿಬಿಲ್ ಪ್ರಯೋಗವನ್ನು ನಡೆಸಲಾಗಿದೆ. ಸ್ಥಳೀಯವಾಗಿ ಎಲ್ಲ ಸಹಕಾರಿಗಳು ಸಭೆಯನ್ನು ಕರೆದು ಸ್ಥಳೀಯವಾಗಿ ಸಾಲಗಾರರು ಅರ್ಜಿಯನ್ನು ಸಲ್ಲಿಸಿದಾಗ ಅದರ ಆ ಸದಸ್ಯನ ಬಗ್ಗೆ ತಿಳಿದುಕೊಳ್ಳಲು ಮತ್ತು ಅಯಾ ಸಹಕಾರಿಗಳಲ್ಲಿ ಸುಸ್ಥಿ ಹೊಂದಿರುವ ಬಗ್ಗೆ ತಿಳಿದುಕೊಳ್ಳಲು ಒಂದು ವಾಟ್ಸಪ್ ಗ್ರೂಪ್‌ನ್ನು ರಚಿಸಲಾಗಿರುತ್ತದೆ. ಆ ಗ್ರೂಪ್‌ನಲ್ಲಿ ಕೇವಲ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಇರುತ್ತಾರೆ. ಒಂದು ಸಹಕಾರಿಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಅ ಅರ್ಜಿಯನ್ನು ಗ್ರೂಪ್‌ನಲ್ಲಿ ಅಪಲೋಡ ಮಾಡಲಾಗುವುದು, ಅ ಗ್ರೂಪ್‌ನಲ್ಲಿರುವ ಉಳಿದ ಸದಸ್ಯರು ತಮ್ಮ ಸಹಕಾರಿಯಲ್ಲಿ ಅ ವ್ಯಕ್ತಿಯ ಸಾಲವಿದ್ದಲ್ಲಿ ಮತ್ತು ಸಾಲವನ್ನು ಅವಧಿಯೊಳಗೆ ಮರುಪಾವತಿಸಲಾಗುತ್ತಿದೆ ಎಂಬುವ ವಿಷಯವನ್ನು ಗ್ರೂಪನಲ್ಲಿ ತಿಳಿಸಲಾಗುತ್ತದೆ. ಸಾಲವಿದ್ದಲ್ಲಿ ಎಸ್ ಎಂದು ಬರೆದು ಗ್ರೂಪ್‌ನಲ್ಲಿ ಕಳುಹಿಸುತ್ತಾರೆ. ಸಾಲವಿಲ್ಲದಿಂದಲ್ಲಿ ನೋ ಎಂದು ಕಳುಹಿಸುತ್ತಾರೆ. ಈ ಸಹಕಾರ ಕ್ಷೇತ್ರ ಇದನ್ನು ಅಳವಡಿಸಿಕೊಂಡಲ್ಲಿ ಒಂದು ಉತ್ತಮ ವ್ಯವಸ್ಥೆಯ ಮೂಲಕ ಸದಸ್ಯರಿಗೆ ಸಾಲ ನೀಡುವಂತಾಗುತ್ತದೆ ಎಂದು ಅಭಿಪ್ರಾಯಪಡಲಾಗಿದೆ.

# RBI NEWS - JULY 2019

K. Vittal Shetty, Banking consultant, Kohimavittal@Hotmail.com, Mobile : 9845699904

**The next meeting of the MPC is scheduled during August 5 to 7, 2019.**

| Policy Rates. Effective from June 06, 2019 | % |
|---|---|
| Policy Repo Rate | 5.75% |
| Reverse Repo Rate | 5.50% |
| Marginal Standing Facility Rate | 6.00% |
| BANK RATE | 6.00% |
| RESERVE RATIOS | |
| Cash Reserve Ratio. (CRR) | 4.00% |
| Statutory Reserve Ratio. (SLR). Effective from July 06,2019 | 18.75% |

**Jul 31, 2019**

**Scheduled Banks' Statement of Position in India as on Friday, July 19, 2019**

**(Amount in Billions of ₹)**

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 20-Jul-18 | 05-JUL-2019 * | 19-JUL-2019 * | 20-Jul-18 | 05-JUL-2019 * | 19-JUL-2019 * |
| I | a) Deposits | 114371.39 | 126752.73 | 126491.26 | 117402.93 | 130131.96 | 129900.48 |
| | i) Demand | 11621.94 | 13133.38 | 13234.74 | 11925.13 | 13447.65 | 13538.81 |
| | ii) Time | 102749.45 | 113619.39 | 113256.49 | 105477.8 | 116684.35 | 116361.64 |
| II | CASH | 675.55 | 779.35 | 789.64 | 696.93 | 796.71 | 807.36 |
| III | BALANCES RBI | 4832.31 | 5099.69 | 5330.13 | 4965.32 | 5231.25 | 5463.2 |
| IV | INVESTMENTS | 34673.46 | 35456.36 | 34938.76 | 35605.31 | 36374.73 | 35861.03 |
| V | BANK CREDIT | 86097.34 | 96974.29 | 96569.42 | 88644.37 | 99829.07 | 99425.78 |

## I.

## IMPORTANT NEWS.

**1). July 03, 2019:** Inclusion of "India Post Payments Bank Limited" in the Second Schedule of the Reserve Bank of India Act, 1934

We advise that the "India Post Payments Bank Limited" has been included in the Second Schedule to the Reserve Bank of India Act, 1934 vide Notification DBR.NBD.(PB-IP-PB).No.9980/16.13.215/2018-19 dated May 27, 2019 and published in the Gazette of India (Part III - Section 4) dated June 22- June 28, 2019.

## II.

## Directions, Withdrawals, Penalties & Cancellation of Licences of Urban Co-operative Banks & Banks.

**1). Jul 02, 2019: -** RBI has issued Directions to The Mapusa Urban Co-operative Bank of Goa Ltd, Goa,

Swabhimani Sahakari, Monthly, Publishing Date 7th, Posting Day 10th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 44

**2). Jul 02, 2019: -** RBI) has, by an order dated June 25, 2019, imposed monetary penalty on four banks for non-compliance with certain provisions of directions issued by RBI on Know Your Customer (KYC) norms / Anti Money Laundering (AML) Standards and Opening of Current Accounts,

**3). Jul 04, 2019: -** Amanath Co-operative Bank Ltd., Bengaluru- Extension of All Inclusive Directions.

**4). Jul 05, 2019: -** Youth Development Co-op. Bank Ltd., Kolhapur, Maharashtra,

**5). Jul 09, 2019: -** Extension of the Period of validity. RBI had issued directions to Sri Bharathi Co-operative Urban Bank Ltd., Hyderabad,

**6). Jul 09, 2019: -** RBI had issued certain Directions to Kolikata Mahila Cooperative Bank Limited, 8D Krishna Laha Lane, Kolkata

**7). Jul 11, 2019: -** RBI has imposed a monetary penalty of ₹1,00,000/- (Rupees One Lakh Only) on U.P. Civil Secretariat Primary Co-operative Bank Limited, Lucknow (U.P.)

**8). Jul 12, 2019: -** RBI has imposed a monetary penalty of ₹1,00,000/- (Rupees One Lakh Only) on Noble Co-operative Bank Limited, Noida, (U.P.) for violation of RBI Instructions/Guidelines

**9). Jul 12, 2019: -** Directions under Section 35A of the Banking Regulation Act, 1949 – United Cooperative Bank Limited, Bagnan,

**10). Jul 15, 2019: -** RBI has, on July 09, 2019, imposed a monetary penalty of ₹ one million on Union Bank of India (the bank) for non-compliance with the directions on cyber security framework in banks issued by RBI.

**11). Jul 15, 2019: -** RBI has imposed a monetary penalty of ₹ 70 million on State Bank of India (the bank) for non-compliance with the directions issued by RBI on (i) Income Recognition and Asset Classification (IRAC) norms (ii) code of conduct for opening and operating current accounts and reporting of data on Central Repository of Information on Large Credits (CRILC), and (iii) fraud risk management and classification and reporting of frauds. This penalty has been imposed in exercise of powers vested in RBI under the provisions of section 47A (1)(c) read with sections 46(4)(i) and 51(1) of the Banking Regulation Act, 1949 (the Act).

**12). Jul 17, 2019: -** RBI had issued directions to Bhagyodaya Friends Urban Co-operative Bank Ltd. Warud, Dist-Amravati, Maharashtra

**13). Jul 19, 2019: -** RBI had issued Directions to The Hindu Co-operative Bank Limited, Pathankot, Punjab

**14). Jul 25, 2019: -** RBI has imposed a monetary penalty of ₹ 1.00 lakh (Rupees One Lakh only) on Shri Bhausaheb Thorat Amrutvahini Sahakari Bank Ltd., Ghulewadi, Ahmednager

**15). Jul 26, 2019: -** RBI has issued certain directions to Shri Anand Co-operative Bank Ltd. Chinchwad, Pune, Maharashtra

**Source: www.rbi.org.in**

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010